ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 17 ಮಂಗಳವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸಂಪುಟ: 46 | ಸಂಚಿಕೆ: 298 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ತಾರಕಕ್ಕೇರುತ್ತಿದೆ ನಾಯಕತ್ವ ಬದಲಾವಣೆ ಮಾತಿನ ವರಸೆ



ಡಿಕೆಶಿ ಪಕ್ಷದ ಇಂಜಿನ್, ಬರೋವಾಗ ಸೌಂಡ್ ಜಾಸ್ತಿ!



ಬಾಲವೇ ನಾಯಿಯನ್ನು ಅಲ್ಲಾಡಿಸಲು ಎಂದಾದರೂ ಸಾಧ್ಯವೇ?

ಬೆಂಗಳೂರು: ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಮಾತಿನ ಕದನ ಮತ್ತೊಂದು ಹಂತಕ್ಕೇರಿದ್ದು, ಈ ವಿಚಾರವಾಗಿ ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಹಾಗೂ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾರ್ಮಿಕ ಹಾಗೂ ವ್ಯಂಗ್ಯಾತ್ಮಕವಾಗಿ ವಿಶ್ಲೇಷಿಸಿದ್ದಾರೆ.

ರಾಜ್ಯದಲ್ಲಿ ಉಂಟಾಗಿರುವ ನಾಯಕತ್ವ ಗೊಂದಲ ಕುರಿತು ಪ್ರತಿಕ್ರಿಯೆ ನೀಡಿದ ಬಿ.ಕೆ.ಹರಿಪ್ರಸಾದ್, ಡಿ.ಕೆ.ಶಿವಕುಮಾರ್ ಅವರು ಪಕ್ಷದ ಅಧ್ಯಕ್ಷರು. ಅವರು ಕೇವಲ ಬಂಡೆ ಅಲ್ಲ, ಅವರು ಒಂದು ರೈಲ್ವೇ ಇಂಜಿನ್. ಅದು ಬರುವಾಗ ದೊಡ್ಡ ಸೌಂಡ್ ಆಗುತ್ತದೆ. ಅದು ಇನ್ನೇನು ನಿಲ್ದಾಣದ ಹತ್ತಿರ ಬರುವಾಗ ಚಾ ಮಾರೋವ್ರು, ತಿಂಡಿ ಮಾರೋವ್ರು ದೊಡ್ಡ ಸೌಂಡ್ ಮಾಡ್ತಾರೆ. ಅವರು ಪಕ್ಷದ ಅಧ್ಯಕ್ಷರಾಗಿ ಎಲ್ಲರನ್ನೂ ಎಳೆದು ಕೊಂಡು ಹೋಗ್ತಾ ಇದ್ದಾರೆ. ಅವರು ಬಂದಾಗ, ಹೋದಾಗ ಆರ್ಭಟ ಇದ್ದೇ ಇರುತ್ತದೆ ಎಂದು ಮಾರ್ಮಿಕವಾಗಿ ಹೇಳಿದ್ದಾರೆ.

ಏನೇ ಆದರೂ ರಾಹುಲ್ ಗಾಂಧಿ, ಮಲ್ಲಿಕಾರ್ಜುನ್ ಖರ್ಗೆ, ಸೋನಿಯಾ ಗಾಂಧಿ ಅವರು ನಾಯಕತ್ವ ಗೊಂದಲದ ಬಗ್ಗೆ ತೀರ್ಮಾನ ಮಾಡ್ತಾರೆ. ಒಂದು ಕಡೆ ಸಿಎಂ, ಮತ್ತೊಂದು ಕಡೆ ಕೆಪಿಸಿಸಿ ಅಧ್ಯಕ್ಷರು, ಇಬ್ಬರಲ್ಲೂ ಗೊಂದಲ ಸೃಷ್ಟಿ ಆಗದ ರೀತಿಯಲ್ಲಿ ಹೈಮಾಂಡ್ ತೀರ್ಮಾನ ಮಾಡುತ್ತದೆ ಎಂದು ತಿಳಿಸಿದ್ದಾರೆ.

ಬೀದಿನಾಯಿ ಎಳೆದು ತಂದರು: ಇನ್ನು ನಾಯಕತ್ವ ಬದಲಾವಣೆ ಸಂಬಂಧ ಶಾಸಕರು ಗೊಂದಲದ ಹೇಳಿಕೆಗಳನ್ನು ನೀಡುತ್ತಿರುವ ಬಗ್ಗೆ ಪ್ರತಿಕ್ರಿಯಿಸಿರುವ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಇಲ್ಲಿ ನಾಯಕತ್ವದ ಚರ್ಚೆ ಎಲ್ಲಿ ಇದೆ?. ಹೈ ಕೋರ್ಟ್ ಬೀದಿ ನಾಯಿಗಳನ್ನೆಲ್ಲಾ ಹಿಡಿದು ಒಳಗೆ ಹಾಕಿ ಅಂತ ಪದೇ ಪದೆ ಹೇಳ್ತಾ ಇದೆ. ಇಲ್ಲಿ ರಾಜಕೀಯ ನಾಯಕತ್ವ ಗಟ್ಟಿ ಯಾಗಿದೆ ಎಂದು ಒಂದು ರೀತಿ ವಿಚಿತ್ರಮಾತಿನ ವೈಖರಿ ಮೂಲಕ ಚರ್ಚೆಗೆ ಗ್ರಾಸವಾಗಿದ್ದಾರೆ.

ತಮ್ಮ ಹೇಳಿಕೆ ವಿವಾದಕ್ಕೆ ಗುರಿಯಾಗಬಹುದು ಎಂಬುದು ಮನವರಿಕೆಯಾಗುತ್ತಿದ್ದಂತೆ ಹೈಕೋರ್ಟ್ ಹೇಳಿದ್ದನ್ನು ನಾನು ಹೇಳಿದೆ. ನಾನು ನಾಯಕರು ನಾಯಿಗಳು ಅಂತ ಹೇಳಿದ್ನಾ?. ಹೈಕಮಾಂಡ್‌ಗೆ ಡೈರೆಕ್ಷನ್ ಕೊಡೋರು ಯಾರು? ನಾನಾ–ನೀವಾ?. ಬಾಲವೇ ನಾಯಿಯನ್ನು ಅಲ್ಲಾಡಿಸಿದರೆ. ಹೈಕಮಾಂಡ್ ಅಲ್ಲಾಡಿಸೋಕೆ ಸಾಧ್ಯವೇ ಎಂದು ಸಮಜಾಯಿಷಿ ನೀಡಿದ್ದಾರೆ.

ನ್ಯೂಜಿಲ್ಯಾಂಡ್‌ನಲ್ಲಿ ಜಾತಿಯೇ ಇಲ್ಲ: ಶಾಸಕರ ಅಧ್ಯಯನ ಪ್ರವಾಸದ ವಿಚಾರವಾಗಿ ಪ್ರತಿಕ್ರಿಯಿಸಿ, ಶಾಸಕರು ಜನ ಜೀವನ ಅಧ್ಯಯನಕ್ಕೆ ಹೋಗುತ್ತಿದ್ದಾರೆ. ಯಾರು ಹೇಳಿದ್ದು ಪ್ರವಾಸ ತಡೆಯುತ್ತಿದ್ದಾರೆ ಅಂತ. ಶಾಸಕರು, ಮಂತ್ರಿಗಳು ಪ್ರವಾಸ ಹೋಗೋದು ಗಂಭೀರ ವಿಷಯವಲ್ಲ. ಇದರಿಂದ ಪ್ರವಾಸೋದ್ಯಮ ಅಭಿವೃದ್ಧಿ ಆಗುತ್ತದೆ. ಉತ್ತಮ ಜ್ಞಾನ ಸಿಗುತ್ತದೆ. ಹಾಗಾಗಿ ಅವರು ಪ್ರವಾಸ ಹೋಗುತ್ತಿದ್ದಾರೆ. ಅಲ್ಲೆಲ್ಲಾ ■ 6ನೇ ಪುಟಕ್ಕೆ

ಇಂದಿನಿಂದ ಕೆಎಸ್‌ಆರ್‌ಟಿಸಿ ಬಸುಗಳ ಲಗೇಜ್ ದರ ಶೇ.15ರಷ್ಟು ಹೆಚ್ಚಳ



ಬೆಂಗಳೂರು: ರಾಜ್ಯ ಸರ್ಕಾರ ದಿನಕ್ಕೊಂದರ ಬೆಲೆಯನ್ನು ಹೆಚ್ಚಿಸುತ್ತಿದ್ದು, ಇದೀಗ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್‌ಗಳಲ್ಲಿ ಲಗೇಜ್ ದರವನ್ನು ಶೇ. 15ರಷ್ಟು ಹೆಚ್ಚಿಸಿದ್ದು, ಪರಿಷ್ಕೃತ ದರ ಫೆ.16 ರಿಂದ ಜಾರಿಯಾಗಿದೆ.

ಸಾರಿಗೆ ಸಂಸ್ಥೆಯ ಡೀಸೆಲ್ ವೆಚ್ಚ, ಸಿಬ್ಬಂದಿ ವೆಚ್ಚ ಜಾಸ್ತಿಯಾಗಿದೆ. ಆರ್ಥಿಕ ಹೊರೆ ತಗ್ಗಿಸಲು ಮತ್ತು ಹೆಚ್ಚುತ್ತಿರುವ ಇಂಧನ ವೆಚ್ಚವನ್ನು ಸರಿದೂಗಿಸಲು ಈ ನಿರ್ಧಾರ ಅನಿವಾರ್ಯ. ದರ ಪರಿಷ್ಕರಣೆಯು ಪ್ರಯಾಣಿಕರ ಜೊತೆಗಿರುವ ಹಾಗೂ ಪ್ರಯಾಣಿಕ ರಹಿತ ಲಗೇಜುಗಳಿಗೂ ಅನ್ವಯವಾಗಲಿದೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ತಿಳಿಸಿದ್ದಾರೆ. ಬಸ್ ಪ್ರಯಾಣದ ಟಿಕೆಟ್ ದರ ಪರಿಷ್ಕರಣೆಯಾದಾಗ ಅದು ಲಗೇಜ್ ದರಗಳಿಗೂ ಅನ್ವಯವಾಗುತ್ತದೆ. ಆದರೆ, 2025ರ ಜ.5ರಂದು ಟಿಕೆಟ್ ದರವನ್ನು ಶೇ.15ರಷ್ಟು ಹೆಚ್ಚಳ ಮಾಡಿದ್ದರೂ, ಲಗೇಜ್ ದರವನ್ನು ಏರಿಕೆ ಮಾಡಿರಲಿಲ್ಲ. 2021ರಲ್ಲಿ ಕೊನೇ ಬಾರಿ ಲಗೇಜ್ ದರ ಪರಿಷ್ಕರಣೆಯಾಗಿತ್ತು ಎಂದು ಮಾಹಿತಿ ನೀಡಿದ್ದಾರೆ.

ಶಾಸಕರು ಕೊಟ್ಟ ಗಡುವಿನೊಳಗೆ

ಕೆ.ಸಿ.ನಗರದ ಕೆರೆ ಒತ್ತುವರಿ ಸಂಪೂರ್ಣ ತೆರವು

- ‘ಮೈಸೂರು ಮಿತ್ರ’ನ ವರದಿ ಫಲಶೃತಿ ಕೆರೆ ಸಂರಕ್ಷಣೆ
- ಒತ್ತುವರಿದಾರರಿಂದಲೇ ಗಡುವಿನೊಳಗೆ ಕಾಂಪೌಂಡ್ ತೆರವು
- ಮತ್ತೆಂದೂ ಒತ್ತುವರಿ ಆಗದಂತೆ ತಡೆಯುವುದು ದೊಡ್ಡ ಸವಾಲು



ತಾವು ನೀಡಿದ 48 ಗಂಟೆ ಗಡುವಿನೊಳಗೆ ಕೆ.ಸಿ. ನಗರ ಕೆರೆ ಅತಿಕ್ರಮಣ ತೆರವು ಆದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಶಾಸಕ ಶ್ರೀವತ್ಸ ಅವರು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮೈಸೂರು, ಫೆ.16(ಬಿಎಲ್‌ಯು)– ಮೈಸೂರಿನ ಕೆ.ಸಿ.ನಗರದ ಕೆರೆ ಒತ್ತುವರಿಯನ್ನು ಸಂಪೂರ್ಣ ತೆರವು ಗೊಳಿಸಲಾಗಿದೆ. ಈ ಮೂಲಕ ಕೆರೆ ಉಳಿಸಲು ಹೋರಾಟ ನಡೆಸಿದ ಶಾಸಕ ಶ್ರೀವತ್ಸ ಅವರೂ ಸೇರಿದಂತೆ ಕುರುಬಾರಹಳ್ಳಿ ಯುವ ಮುಖಂಡರಿಗೆ ಜಯ ಸಿಕ್ಕಂತಾಗಿದೆ.

ಕೆ.ಸಿ.ನಗರದ ಕೆರೆ ಸುತ್ತ ಕಾಂಪೌಂಡ್ ನಿರ್ಮಿಸಿ ಕೋಟ್ಯಾಂತರ ಮೌಲ್ಯದ ಭೂಮಿ ಕಬ್ಜ ಮಾಡಿದ ಸುದ್ದಿ ಭಾರೀ ಸದ್ದು ಮಾಡಿತು. ಈ ವಿಚಾರವಾಗಿ ‘ಮೈಸೂರು ಮಿತ್ರ’ ಸರಣಿ ವರದಿ ಪ್ರಕಟಿಸುತ್ತಿದ್ದಂತೆ ಕೆರೆ ಉಳಿಸಲು ಹೋರಾಟಗಾರರು ಧ್ವನಿ ಎತ್ತಿದ್ದರು. ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಅವರು ವಿಧಾನಸಭಾ ಅಧಿವೇಶನದಲ್ಲಿ ವಿಷಯ ಪ್ರಸ್ತಾಪಿಸಿ ಭೂ ಒತ್ತುವರಿದಾರರ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದರು. ಆದರೆ ಸರ್ಕಾರದಿಂದ ಸಕರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗದ ಹಿನ್ನೆಲೆಯಲ್ಲಿ ಶ್ರೀವತ್ಸ ಅವರು ಫೆಬ್ರವರಿ 12 ರಂದು ಕೆರೆ ಬಳಿಯೇ ಮುಂದೆಯೇ ಪತ್ರಿಕಾಗೋಷ್ಠಿ ನಡೆಸಿ, ಒತ್ತುವರಿ ತೆರವಿಗೆ 48 ಗಂಟೆಗಳ ಗಡುವು ನೀಡಿದ್ದರು.

ಮಾರನೆ ದಿನ, ಫೆಬ್ರವರಿ 13 ರಂದು ತಹಶೀಲ್ದಾರ್ ಮಹೇಶ್ ಕುಮಾರ್ ನೇತೃತ್ವದ ಅಧಿಕಾರಿಗಳ ತಂಡ ■ 6ನೇ ಪುಟಕ್ಕೆ

24 ಗಂಟೆಯೊಳಗೆ ಪ್ರಕರಣ ದಾಖಲಿಸಿ

ಮೈಸೂರು, ಫೆ.16(ಬಿಎಲ್ ಯ)– ಕೆ.ಸಿ.ನಗರ ಕೆರೆ ಒತ್ತುವರಿ ಮಾಡಿಕೊಂಡವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಆಗ್ರಹಿಸಿದ್ದಾರೆ.

ಕೆರೆ ಜಾಗದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತ ನಾಡಿದ ಅವರು, ಇನ್ನು 24 ಗಂಟೆಯೊಳಗೆ ತಹಶೀಲ್ದಾರ್ ಮಹೇಶ್ ಕುಮಾರ್ ಅವರು ಒತ್ತುವರಿದಾರರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದರು. ಕೆರೆ ಒತ್ತುವರಿಯನ್ನು ಈಗ ತೆರವು ಮಾಡಿರಬಹುದು, ಆದರೆ ಅತಿಕ್ರಮಣಕಾರರನ್ನು ಇಷ್ಟಕ್ಕೆ ಬಿಡಬಾರದು. ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಜೈಲಿಗಟ್ಟಬೇಕು ಎಂದು ಶ್ರೀವತ್ಸ ಹೇಳಿದರು. ಕೆ.ಸಿ.ನಗರದ ಕೆರೆ ಮಾತ್ರವಲ್ಲದೆ ಮೈಸೂರಿನ ಯಾವುದೇ ಕೆರೆ ಅಥವಾ ಸರ್ಕಾರಿ ಜಾಗ ಅತಿಕ್ರಮಣ ಆಗಿದ್ದರೆ ಅವರ ವಿರುದ್ಧ ಕೂಡ ಕಠಿಣ ಕ್ರಮ ಕೈಗೊಳ್ಳಬೇಕು. ಈ ಮೂಲಕ ಭೂ ಮಾಫಿಯಾದ ಅತಿಕ್ರಮಣಕ್ಕೆ ಕಡಿವಾಣ ಹಾಕಬೇಕು ಎಂದು ಶ್ರೀವತ್ಸ ಹೇಳಿದರು

ಇಸ್ರೇಲಿ ಮಹಿಳೆ ಅತ್ಯಾಚಾರ, ವಿದೇಶಿಗನ ಕೊಲೆ ಪ್ರಕರಣ

ಮೂವರಿಗೆ ಗಲ್ಲು ಶಿಕ್ಷೆ; 9 ತಿಂಗಳಲ್ಲೇ ಐತಿಹಾಸಿಕ ತೀರ್ಪು





ಕೊಪ್ಪಳ: ವಿಶ್ವವಿಖ್ಯಾತ ಹಂಪಿಯ ಬಳಿ ಇಸ್ರೇಲಿ ಮಹಿಳೆ ಮೇಲೆ ಅತ್ಯಾಚಾರ ಹಾಗೂ ಅಮೆರಿಕ ಪ್ರಜೆಯ ಕೊಲೆ ಪ್ರಕರಣದ ಅಪರಾಧಿಗಳಿಗೆ ಗಂಗಾವತಿ ಕೋರ್ಟ್ ಗಲ್ಲು ಶಿಕ್ಷೆ ವಿಧಿಸುವ ಮೂಲಕ ಕೇವಲ 9 ತಿಂಗಳಲ್ಲೇ ಈ ಐತಿಹಾಸಿಕ ತೀರ್ಪು ನೀಡಿದೆ. ಕಳೆದ ಫೆ. 6ರಂದು ಮೂವರು ಆರೋಪಿಗಳನ್ನು ದೋಷಿಗಳೆಂದು ತೀರ್ಪು ನೀಡಿತ್ತು.

ಸೋಮವಾರ ಗಂಗಾವತಿ 1ನೇ ಹೆಚ್ಚುವರಿ ಜಿಲ್ಲಾ ಸತ್ರ ಮತ್ತು ನ್ಯಾಯಾಲಯದ ನ್ಯಾಯಾಧೀಶರಾದ ಸದಾನಂದ ನಾಗಪ್ಪ ನಾಯಕ ಅವರು ಮೂವರು ಅಪರಾಧಿಗಳಾದ ಮಲ್ಲೇಶ್ ಅಲಿಯಾಸ್ ಹಂದಿಮಲ್ಲ, ಸಾಯಿ ಮತ್ತು ಶರಣಪ್ಪಗೆ ಗಲ್ಲು ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದ್ದಾರೆ.

2025ರ ಮಾರ್ಚ್‌ನಲ್ಲಿ ಕೊಪ್ಪಳದ ಗಂಗಾವತಿ ತಾಲೂಕಿನ ಹಂಪಿಯ ಸಾಣಾಪೂರ ಬಳಿ ಇಸ್ರೇಲಿ ಮಹಿಳೆಯ ಮೇಲೆ ಅತ್ಯಾಚಾರವೆಸಗಲಾಗಿತ್ತು. ಇದೇ ವೇಳೆ ಅಮೆರಿಕದ ವ್ಯಕ್ತಿಯನ್ನು ಕೊಲೆ ಮಾಡಲಾಗಿತ್ತು. ಈ ಘಟನೆ ಇಡೀ ದೇಶವನ್ನೇ ಬೆಚ್ಚಿ ಬೀಳಿಸಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ ಮಲ್ಲೇಶ್, ಸಾಯಿ ಹಾಗೂ ಶರಣಪ್ಪ ಮೂವರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಲಾಗಿತ್ತು. ಪ್ರಕರಣದ ವಿಚಾರಣೆ ನಡೆಸಿದ ಗಂಗಾವತಿಯ ಹೆಚ್ಚುವರಿ ಸತ್ರ ನ್ಯಾಯಾಲಯವು, ಸಾಕ್ಷ್ಯಾಧಾರಗಳನ್ನು ಪರಿಗಣಿಸಿ ಈ ಮೂವರಿಗೂ ಗಲ್ಲು ಶಿಕ್ಷೆ ವಿಧಿಸಿದೆ.

ನಾಳೆಯಿಂದ ಮೈಸೂರು ಭಾಗದಲ್ಲಿ

ಜನರೊಂದಿಗೆ ಜೆಡಿಎಸ್ ನಿಖಿಲ್ ಕುಮಾರಸ್ವಾಮಿ ಪ್ರವಾಸ

ಈಗಾಗಲೇ 9 ಸಾವಿರ ಕಿ.ಮೀ ಸಂಚರಿಸಿ ಪಕ್ಷ ಸಂಘಟಿಸಿರುವ ನಿಖಿಲ್; ಉತ್ತಮ ಪ್ರತಿಕ್ರಿಯೆ

ಮೈಸೂರು,ಫೆ.16(ಎಂಟಿವೈ)– ಮುಂಬರುವ ವಿಧಾನಸಭಾ ಚುನಾವಣೆಯನ್ನು ದೃಷ್ಠಿಯಲ್ಲಿಟ್ಟುಕೊಂಡು ರಾಜ್ಯದಲ್ಲಿ ಜೆಡಿಎಸ್ ಪಕ್ಷ ಸಂಘಟಿಸಲು ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕೈಗೊಂಡಿರುವ ‘ಜನರೊಂದಿಗೆ ಜನತಾದಳ’ ಅಭಿಯಾನಕ್ಕೆ ಉತ್ತಮ ಪ್ರತಿಕ್ರಿಯೆ ದೊರೆತಿದ್ದು, ಫೆ.18ರಿಂದ ಮೈಸೂರು ಜಿಲ್ಲೆಯ ವಿವಿಧ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪಕ್ಷ ಸಂಘಟನೆಗಾಗಿ ನಿಖಿಲ್ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ಮಾಜಿ ಸಚಿವರೂ ಆದ ಜೆಡಿಎಸ್ ಕಾರ್ಯಾಧ್ಯಕ್ಷ ಸಾ.ರಾ.ಮಹೇಶ್ ತಿಳಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಮಾರ್ಗದರ್ಶನದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಕೈ ಬಲಪಡಿಸುವ ಉದ್ದೇಶದಿಂದ ಪಕ್ಷದ ಯುವ ನೇತಾರರಾದ ನಿಖಿಲ್ ಕುಮಾರಸ್ವಾಮಿ ರಾಜ್ಯದಲ್ಲಿ ‘ಜನರೊಂದಿಗೆ ಜನತಾದಳ’ ಪಕ್ಷ ಸಂಘಟನೆ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಈಗಾಗಲೇ 9 ಸಾವಿರ ಕಿ.ಮಿ ದೂರ ಕ್ರಮಿಸಿ, ವಿವಿಧ ಜಿಲ್ಲೆಗಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರವಾಸ ಮಾಡಿದ್ದಾರೆ. ಇದೀಗ ಮೈಸೂರು ಭಾಗದ ವಿವಿಧ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪಕ್ಷ ಸಂಘಟನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರವನ್ನು ಅಧಿಕಾರಕ್ಕೆ ತರುವ ಉದ್ದೇಶದಿಂದ ಈ ಕಾರ್ಯಕ್ರಮ ಎಂದರು.

ಫೆ.18 ರಂದು ಬೆ.11ಕ್ಕೆ ಪಿರಿಯಾಪಟ್ಟಣದಲ್ಲಿ ಮಾಜಿ ಶಾಸಕ ಕೆ.ಮಹದೇವ್ ಅವರ ನೇತೃತ್ವದಲ್ಲಿ ನಡೆಯುವ ಪಕ್ಷ ಸಂಘಟನಾ ಕಾರ್ಯಕ್ರಮದಲ್ಲಿ ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮಾತನಾಡಲಿದ್ದಾರೆ. ಫೆ22ರಂದು ■ 6ನೇ ಪುಟಕ್ಕೆ



ಪತ್ರಿಕಾಗೋಷ್ಠಿಯಲ್ಲಿ ಮಾಜಿ ಸಚಿವ ಸಾ.ರಾ. ಮಹೇಶ್, ಶಾಸಕ ಜಿ.ಡಿ. ಹರೀಶ್‌ಗೌಡ, ಎಂಎಲ್‌ಸಿ ಸಿ.ಎನ್. ಮಂಜೇಗೌಡ, ಮಾಜಿ ಶಾಸಕರಾದ ಅಶ್ವಿನ್‌ಕುಮಾರ್, ಕೆ.ಮಹದೇವ್, ಜೆಡಿಎಸ್ ನಗರಾಧ್ಯಕ್ಷ ಎಸ್‌ಬಿಎಂ ಮಂಜು, ಮಾಜಿ ಮೇಯರ್ ಚಿನ್ನಿ ರವಿ ಇದ್ದಾರೆ.

ಸಾಲ ಮಾಡಿದ್ದೇ ಸಾಧನೆ

ರಾಜ್ಯ ಕಾಂಗ್ರೆಸ್ ಸರ್ಕಾರದ ಬಗ್ಗೆ ಜನ ಬೇಸತ್ತಿದ್ದಾರೆ. ಗುತ್ತಿಗೆದಾರರೂ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ರಾಜ್ಯ ಸರ್ಕಾರ 7 ಲಕ್ಷ ಕೋಟಿ ಸಾಲ ಮಾಡಿದೆ. ಸಾಲ ಮಾಡಿದ್ದೇ ಸರ್ಕಾರದ ಸಾಧನೆ. ಎಷ್ಟು ದಿನ ಅಧಿಕಾರದಲ್ಲಿದ್ದೇವೆ ಎನ್ನುವುದು ಮುಖ್ಯವಲ್ಲ. ಅಧಿಕಾರದಲ್ಲಿದ್ದಾಗ ಜನರಿಗೆ ಏನು ಮಾಡಿದ್ದೇವೆ ಎನ್ನುವುದು ಮುಖ್ಯ. ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಡಿ.ದೇವರಾಜ ಅರಸು ಎಲ್ಲರಿಗೂ ಭೂಮಿ ನೀಡಿದರು. ಸಿದ್ದರಾಮಯ್ಯ ಅವರು ಸಾಲದ ಹೊರೆ ಹೊರಿಸಿದ್ದಾರೆ. ಜನಸಾಮಾನ್ಯರ ಜೀವನ ದುಬಾರಿಯಾಗಿದೆ. ಇದಕ್ಕಾಗಿ ಜನತೆ ಸರ್ಕಾರ ಬದಲಿಸಲು ಚುನಾವಣೆ ಎದುರು ನೋಡುತ್ತಿದ್ದಾರೆ.

– ಸಾ.ರಾ.ಮಹೇಶ್

ಆರ್‌ಟಿಐ ಕಾರ್ಯಕರ್ತರ ಅಡ್ಡವಾಗಿರುವ ಮೈಸೂರು ಅಭಿವೃದ್ಧಿ ಪ್ರಾಧಿಕಾರ!

ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ದಲ್ಲಿ ಆರ್‌ಟಿಐ ಕಾರ್ಯಕರ್ತರು, ಮಧ್ಯವರ್ತಿಗಳೇ ದರ್ಬಾರ್ ನಡೆಸುತ್ತಿದ್ದಾರೆ. ಈ ಹಿಂದೆ ಮುಡಾ ಆಗಿದ್ದಾಗಲೂ ವಿವಿಧ ಅಕ್ರಮಗಳಲ್ಲಿ ಭಾಗಿಯಾಗಿದ್ದ ಆರ್‌ಟಿಐ ಕಾರ್ಯಕರ್ತರು, ಇದೀಗ ಎಂಡಿಎಯಲ್ಲೂ ತಮ್ಮ ಹಳೆ ಚಾಳಿ ಮುಂದುವರೆಸಿದ್ದಾರೆ. ಅದಕ್ಕೆ ಅಧಿಕಾರಿಗಳು ಅವಕಾಶ ಮಾಡಿ ಕೊಟ್ಟಿದ್ದಾರೆ ಎಂದು ಮಾಜಿ ಸಚಿವ ಸಾ.ರಾ. ಮಹೇಶ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆರ್‌ಟಿಐ ಹೆಸರೇಳಿಕೊಂಡು ನಾನಾ ಅಕ್ರಮದಲ್ಲಿ ತೊಡಗಿದ್ದಾರೆ. ದಿನ ಬೆಳಗಾ ದರೆ ಸಾಕು ಎಂಡಿಎ ಕಚೇರಿಗೆ ಎಡತಾಕುತ್ತಾ ಅಧಿಕಾರಿಗಳನ್ನು ಬೆದರಿಸುವ ಕೆಲಸ ಮಾಡುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರ ತವರು ಜಿಲ್ಲೆಯಲ್ಲಿ ಕೆಲ ಆರ್‌ಟಿಐ ಕಾರ್ಯಕರ್ತರ ದಬ್ಬಾಳಿಕೆ ಎಲ್ಲೆ ಮೀರಿದೆ. ಇವರಿಗೆ ಕಡಿವಾಣ ಹಾಕಲು ಯಾರು ಮುಂದಾಗುತ್ತಿಲ್ಲ ಎಂದು ಕಿಡಿಕಾರಿದರು. ಎಂಡಿಎನಲ್ಲಿ ಇತ್ತೀಚೆಗೆ ಸ್ಕ್ರ್ಯಾಪ್ (ಗುಜರಿ) ಆಗಿದ್ದ 8–10 ವಾಹನಗಳನ್ನು ■ 6ನೇ ಪುಟಕ್ಕೆ



ಇಂಜಿನಿಯರ್ ವರ್ಗಾವಣೆ ಸಂಭ್ರಮಕ್ಕೆ ಮುಡಾದಲ್ಲಿ ಹಂಚಲಾದ ಸ್ವೀಟ್ಸ್.

ಕುಮಾರವ್ಯಾಸರ ಜಯಂತಿ, ಗಮಕ ವಾಚನ

ಭಾಷಿಕ ನೆಲೆಯಲ್ಲಿ ಕುಮಾರವ್ಯಾಸರ ಅಧ್ಯಯನ ಹೆಚ್ಚಬೇಕು: ಡಾ.ಗೀತಾ ಅಭಿಮತ



ಮೈಸೂರು ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ನಡೆದ ಕುಮಾರವ್ಯಾಸ ಜಯಂತಿ ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸಿದರು. ಈ ವೇಳೆ ಡಾ.ಡಿ.ಗೀತಾ, ಡಾ.ಕೃ.ಪಾ.ಮಂಜುನಾಥ್ ಇನ್ನಿತರರಿದ್ದರು.

ಮೈಸೂರು, ಫೆ.16–ಭಾಷಿಕ ನೆಲೆಯಲ್ಲಿ ಕುಮಾರವ್ಯಾಸನ ಕುರಿತು ಇನ್ನೂ ಹೆಚ್ಚಿನ ಅಧ್ಯಯನ ಆಗಬೇಕಿದೆ ಎಂದು ಬೆಂಗಳೂರು ಸುರಾನ ಸಂಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ.ಡಿ.ಗೀತಾ ಅಭಿಪ್ರಾಯಿಸಿದರು.

ಕರ್ನಾಟಕ ಗಮಕ ಕಲಾ ಪರಿಷತ್ತು ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ವಿಜಯನಗರದ ಕನ್ನಡ ಸಾಹಿತ್ಯ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ ಕುಮಾರವ್ಯಾಸ ಜಯಂತಿ, ಕಾವ್ಯಾಧಾರಿತ ಕೃತಿಗಳ ಪ್ರದರ್ಶನ ಹಾಗೂ ಗಮಕ ವಾಚನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ತ್ರೀವಾದಿ ಹಾಗೂ ಭಾಷಿಕ ನೆಲೆಯಲ್ಲಿ ಕುಮಾರವ್ಯಾಸರ ಬಗ್ಗೆ ಅಧ್ಯಯನ ಆಗಿರುವುದು ಕಡಿಮೆ. ಕುಮಾರವ್ಯಾಸರ ಕಾವ್ಯ ಘನತೆ ಹೊಂದಿದೆ. ಕುಮಾರ ವ್ಯಾಸನ ಭಾರತ ಕಥಾಮಂಜರಿ ನೇರವಾಗಿ ಜನರನ್ನು ತಲುಪುತ್ತದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಕನ್ನಡ ಇರುವವರೆಗೆ ಕುಮಾರ ವ್ಯಾಸರನ್ನು ಮರೆಯಲಾಗದು. ರನ್ನ, ಪೊನ್ನ, ಜನ್ನ, ರಾಘವಾಂಕರ ಜೊತೆಗೆ ಕುಮಾರ ವ್ಯಾಸರನ್ನು ಎಂದಿಗೂ ಸ್ಮರಿಸಲಾಗುತ್ತದೆ ಎಂದು ಹೇಳಿದರು.

ಜಿಲ್ಲಾ ಕನ್ನಡ ಉಪನ್ಯಾಸಕರ ವೇದಿಕೆ ಅಧ್ಯಕ್ಷ ಕ್ಯಾತಮಾರನಹಳ್ಳಿ ಎಂ.ಮಹೇಶ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸಾಹಿತ್ಯಾಭಿರುಚಿ ಕಡಿಮೆಯಾಗುತ್ತಿದೆ. ಗಮಕ ಕಲೆಯ ಬಗ್ಗೆ ಅನೇಕ ಕನ್ನಡ ಮೇಷ್ಟ್ರುಗಳಿಗೆ ಸರಿಯಾಗಿ ಗೊತ್ತಿಲ್ಲ. ಭಾವ ಹಾಗೂ ಸಾಹಿತ್ಯ ಪ್ರಧಾನವಾದ ಗಮಕ ಕಲೆಯ ಬಗ್ಗೆ ಕನ್ನಡ ಮೇಷ್ಟ್ರುಗಳಿಗೆ ಕನಿಷ್ಠ ಜ್ಞಾನವಾದರೂ ಇರಬೇಕು. ಈ ಹಿನ್ನೆಲೆಯಲ್ಲಿ ಜಿಲ್ಲಾ ಕಸಾಪ ಹಾಗೂ ಗಮಕ ಕಲಾ ಪರಿಷತ್ತು ಜೊತೆ ಸೇರಿ ಕಾರ್ಯಾಗಾರ ಏರ್ಪಡಿಸಬೇಕು ಎಂದರು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಕುಮಾರವ್ಯಾಸರ ಬಗ್ಗೆ ಪಠ್ಯದಲ್ಲಿ ಸೇರ್ಪಡೆ ಮಾಡುವ ಮೂಲಕ ಇಂದಿನ ಮಕ್ಕಳಿಗೆ ತಿಳಿಸಿಕೊಡುವುದು ಬಹಳ ಮುಖ್ಯ ಎಂದರು.

ಕರ್ನಾಟಕ ಗಮಕ ಕಲಾ ಪರಿಷತ್ತು ಜಿಲ್ಲಾಧ್ಯಕ್ಷ ಡಾ.ಕೃ.ಪಾ.ಮಂಜುನಾಥ್, ಕುಮಾರವ್ಯಾಸರು ಗಮಕಿಗಳ ಆರಾಧ್ಯ ದೈವ. ಪಂಪ, ರನ್ನ, ಪೊನ್ನ, ಜನ್ನ, ಕುಮಾರವ್ಯಾಸ ಜೊತೆಗೆ ಕುವೆಂಪು, ಪುತಿನ, ಡಿವಿಜಿ ಸೇರಿದಂತೆ ಹಲವಾರು ಕವಿಗಳು ಗಮಕ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಕೃಷ್ಣಗಿರಿ ಕೃಷ್ಣರಾಯರು, ಬಿಂದು ರಾಯರು, ಕಳಲೆ ಸಂಪತ್‌ಕುಮಾರಾಚಾರ್ಯ ಮೊದಲಾದವರು ಗಮಕ ಕಲೆಯ ಬೆಳವಣಿಗೆಗೆ ಕಾರಣಕರ್ತರಾಗಿದ್ದಾರೆ ಎಂದು ತಿಳಿಸಿದರು.

ಈ ವೇಳೆ ಹಿರಿಯ ವಿದ್ವಾಂಸ ರಾಮಶೇಷನ್ ಗಮಕ ವಾಚನ ಮಾಡಿದರು. ಜಿಲ್ಲಾ ಕಸಾಪ ಕಾರ್ಯದರ್ಶಿ ಮ.ನ.ಲತಾ ಮೋಹನ್, ಹಿಂದೂಸ್ಥಾನ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಪರಮೇಶ್ ಕೆ.ಉತ್ತನಹಳ್ಳಿ, ಶ್ರೀ ರಾಮಕೃಷ್ಣ ವಿದ್ಯಾ ಶಾಲಾ ಕನ್ನಡ ಉಪನ್ಯಾಸಕ ಸಿ.ಎಸ್.ರಾಘವೇಂದ್ರ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಕೋಶಾಧ್ಯಕ್ಷ ಜಿ.ಪ್ರಕಾಶ್, ಕಾರ್ಯದರ್ಶಿ ಜಯಪ್ಪ ಹೊನ್ನಾಳಿ, ಕನ್ನಡ ಉಪನ್ಯಾಸಕ ನಿ.ಗೂ.ರಮೇಶ್, ರಾಘವೇಂದ್ರ, ವನಮಾಲ, ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು. ನಂತರ ಶುಭ ರಾಘವೇಂದ್ರ ಸೇರಿದಂತೆ ಹಲವು ಗಮಕಿಗಳು, ಗಮಕ ವಾಚನ ನಡೆಸಿಕೊಟ್ಟರು.

ಕಲೆಯಲ್ಲಿ ಸಾಧನೆಗೆ ವಿಷಯ ಕರಗತ ಅವಶ್ಯ

ಅನಿಮೇಷನ್ ತಂತ್ರಜ್ಞ ಬಿ.ಎನ್.ವಿಚಾರ್ ಅಭಿಮತ



ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜ(ಕಾವಾ)ಲ್ಲಿ ಶಿಲ್ಪಕಲೆ ಮತ್ತು ಮುದ್ರಣ ಕಲೆ ಕಾರ್ಯಾಗಾರ, ವಿದ್ಯಾರ್ಥಿಗಳಿಂದ ಶೈಕ್ಷಣಿಕ ಪ್ರವಾಸದಲ್ಲಿ ರಚಿಸಿದ ಕಲಾಕೃತಿಗಳ ಪ್ರದರ್ಶನಕ್ಕೆ ಅನಿಮೇಷನ್ ತಂತ್ರಜ್ಞ ಬಿ.ಎನ್.ವಿಚಾರ್ ಚಾಲನೆ ನೀಡಿದರು.

ಮೈಸೂರು, ಫೆ.16(ಎಂಕೆ)– ಕಲಾ ಕ್ಷೇತ್ರದಲ್ಲಿನ ಸಾಧನೆಗೆ ವಿಷಯ ಕುರಿತ ಭದ್ರ ಬುನಾದಿ ಅಗತ್ಯವಿದ್ದು, ಎಷ್ಟು ಸಾಧ್ಯವೋ ಅಷ್ಟು ಹೊಸತನ್ನು ಕಲಿಯಲು ಪ್ರಯತ್ನಿಸುವಂತೆ ಖ್ಯಾತ ಅನಿಮೇಷನ್ ತಂತ್ರಜ್ಞ ಬಿ.ಎನ್.ವಿಚಾರ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮೈಸೂರಿನ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜ(ಕಾವಾ)ಲ್ಲಿ ಸೋಮವಾರ ನಡೆದ ಶಿಲ್ಪಕಲೆ ಮತ್ತು ಮುದ್ರಣ ಕಲೆ ಕಾರ್ಯಾಗಾರ ಉದ್ಘಾಟನೆ ಮತ್ತು ವಿದ್ಯಾರ್ಥಿಗಳಿಂದ ಶೈಕ್ಷಣಿಕ ಪ್ರವಾಸದಲ್ಲಿ ರಚಿಸಿದ ಕಲಾಕೃತಿಗಳ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹೊಸತನ್ನು ಕಲಿಯುವ ಹಸಿವಿದ್ದಾಗ ಮಾತ್ರವೇ ಉತ್ತಮ ಅವಕಾಶಗಳು ಲಭ್ಯವಾಗುತ್ತವೆ ಎಂದರು.

ಯಾವುದೇ ಕ್ಷೇತ್ರದಲ್ಲಿ ಮೂಲಜ್ಞಾನ ಅತ್ಯಗತ್ಯವಾಗಿದ್ದು, ಅನಿಮೇಶನ್ ಕ್ಷೇತ್ರದಲ್ಲಿ ಸಾಧನೆ ಮಾಡಲು ಕಾವಾದಲ್ಲಿ ಕಲಿತ ಜ್ಞಾನ ಅತ್ಯಂತ ಉಪಯುಕ್ತವಾಗಲಿದೆ. ಅನಿಮೇಷನ್‌ನಲ್ಲಿ ಕಂಪ್ಯೂಟರ್ ಬಳಕೆ ಒಂದು ಸಾಧನವಷ್ಟೇ. ಕಲಾವಿದನ ಕೌಶಲಕ್ಕೆ ಹೆಚ್ಚು ಆದ್ಯತೆ, ಮಹತ್ವ ಇದ್ದೇ ಇದೆ. ಇತರ ಕಲಾವಿದರ ಕೃತಿಗಳನ್ನು ಗಮನಿಸಿ, ಪ್ರೋತ್ಸಾಹಿಸಿ. ಶ್ರೇಷ್ಠ ಕಲಾವಿದರ ಕಲಾಕೃತಿಗಳನ್ನು ದಿನವೂ ಗಮನಿಸುವುದರಿಂದ ಸಾಕಷ್ಟು ಕಲಿಯಬಹುದು ಎಂದು ತಿಳಿಸಿದರು.

ಕಲಾ ನಿರ್ದೇಶಕ ಹಾಗೂ ಕಾವಾ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಮಂಜು ಪ್ರಸಾದ್ ಮಾತನಾಡಿ, ಕಾವಾ ವಿದ್ಯಾರ್ಥಿಗಳಿಗೆ ಹೊರಗಡೆ ಗೌರವವಿದ್ದು, ಯಾವುದೇ ಕ್ಷೇತ್ರಕ್ಕೆ ತೆರಳಿದರೂ ಉತ್ತಮ ಛಾಪನ್ನು ಮೂಡಿಸಲು ಪ್ರಯತ್ನಿಸಿ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾವಾ ಆಡಳಿತಾಧಿಕಾರಿ ನಿರ್ಮಲಾ ಮಠಪತಿ ಮಾತನಾಡಿ, ವಿದ್ಯಾರ್ಥಿಗಳು ಉನ್ನತ ಕನಸನ್ನು ಹೊಂದುವುದು ಕಲಾಕ್ಷೇತ್ರದಲ್ಲಿ ಉತ್ತಮ ಸಾಧನೆಗೆ ಅಗತ್ಯ ಎಂದರು.

ಬಳಿಕ ಹಿರಿಯ ಶಿಲ್ಪ ಕಲಾವಿದ ಉಲ್ಲಾಸ್ಕರ್ ಡೇ ಮತ್ತು ಮುದ್ರಣ ಕಲೆ ಪರಿಣಿತ ಜಿ.ಎಂ.ಮುತ್ತುರಾಜ್ ತಮ್ಮ ಅನುಭವವನ್ನು ಹಂಚಿಕೊಂಡರು.

ಮಣ್ಣು ಸುಡುವ ಬಟ್ಟಿ ಘಟಕ ನಿರ್ಮಾಣ...

"ಕಾವಾ ಕಾಲೇಜು ಆವರಣದಲ್ಲಿ ಟೆರಾಕೋಟಾ ಕಲಾಕೃತಿಗಳನ್ನು ಸುಡುವುದಕ್ಕಾಗಿ ಸುಮಾರು 80 ಸಾವಿರ ರೂ.ನಿಂದ 1 ಲಕ್ಷ ರೂ. ವೆಚ್ಚದಲ್ಲಿ ಮಣ್ಣು ಸುಡುವ ಬಟ್ಟಿ(ದೊಡ್ಡದಾದ ಒಲೆ) ಘಟಕ ನಿರ್ಮಾಣ ಮಾಡಲಾಗುವುದು. ಟೆರಾಕೋಟ ಸೇರಿದಂತೆ ಇನ್ನಿತರೆ ಮಣ್ಣಿನಿಂದ ಮಾಡಿದ ಕಲಾಕೃತಿಗಳನ್ನು ಬೆಂಕಿಯಿಂದ ಸುಟ್ಟು ಗಟ್ಟಿಗೊಳಿಸುವ ಪ್ರಕ್ರಿಯೆಗೆ ಬಟ್ಟಿ ಘಟಕ ಬಳಕೆಯಾಗಲಿದೆ.

– ನಿರ್ಮಲಾ ಮಠಪತಿ, ಆಡಳಿತಾಧಿಕಾರಿ, ಕಾವಾ

300ಕ್ಕೂ ಹೆಚ್ಚು ಕಲಾಕೃತಿಗಳ ಪ್ರದರ್ಶನ: ಕಾವಾದ ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳು ಈಚೆಗೆ ಹಮ್ಮಿಕೊಂಡಿದ್ದ ಹಂಪಿ ಮತ್ತು ಬಾದಾಮಿ ಪ್ರವಾಸದಲ್ಲಿ ರಚಿಸಿದ 300ಕ್ಕೂ ಅಧಿಕ ಕಲಾಕೃತಿಗಳನ್ನು ಪ್ರದರ್ಶಿಸಲಾಗಿತ್ತು. ಕಾರ್ಯಾಗಾರದ ಜೊತೆಗೆ ಫೆ.22ರವರೆಗೆ ಕಲಾಕೃತಿಗಳ ಪ್ರದರ್ಶನ ವೀಕ್ಷಣೆಗೆ ಸಾರ್ವಜನಿಕರಿಗೆ ಅವಕಾಶ ನೀಡಲಾಗಿದೆ. ಕಾವಾ ಶಿಲ್ಪಕಲೆ ವಿಭಾಗದ ಮುಖ್ಯಸ್ಥ ಕೆ.ರಾಘವೇಂದ್ರ, ಗ್ರಾಫಿಕ್ಸ್ ವಿಭಾಗದ ಮುಖ್ಯಸ್ಥ ಎ.ಪಿ.ಚಂದ್ರಶೇಖರ್ ಉಪಸ್ಥಿತರಿದ್ದರು.

ಶಸ್ತ್ರಚಿಕಿತ್ಸೆಗೆ ನೆರವು...



ಮೈಸೂರು ತಾಲೂಕು ಜಯಪುರದ ಶಾಂತಿನಗರ ಬಡಾವಣೆಯ ನಿವಾಸಿ ಹನುಮಮ್ಮ ಅನಾರೋಗ್ಯದಿಂದ ಬಳಲುತ್ತಿದ್ದು, ಶಸ್ತ್ರಚಿಕಿತ್ಸೆಗೆ ಸಮಾಜ ಸೇವಕ ಎಸ್.ಶ್ರೀಕಾಂತ್ 10 ಸಾವಿರ ನೆರವು ನೀಡಿದರು. ಗ್ರಾಮಸ್ಥರು ಉಪಸ್ಥಿತರಿದ್ದರು.

ಕೆಎಸ್‌ಆರ್‌ಟಿಸಿ ಸಿಬ್ಬಂದಿಗೆ ಉಚಿತ ತಪಾಸಣಾ ಶಿಬಿರ



ಮೈಸೂರು, ಫೆ.16(ಎಸ್‌ಪಿಎನ್)– ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗದ ಅಧಿಕಾರಿ, ನೌಕರರಿಗೆ ರಕ್ತಹೀನತೆ ನಿವಾರಣಾ ಯೋಜನೆಯಡಿ ಗ್ರೀನ್ ಡಾಟ್ ಟ್ರಸ್ಟ್ ಸಹಯೋಗದೊಂದಿಗೆ ರಕ್ತಹೀನತೆ ನಿವಾರಣೆ ಕುರಿತು ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯ ಭಾಗವಾಗಿ ಎಲ್ಲಾ ಅಧಿಕಾರಿ, ಸಿಬ್ಬಂದಿ ಮತ್ತು 6 ವರ್ಷ ಮೇಲ್ಪಟ್ಟ ಮಕ್ಕಳಿಗೆ ಉಚಿತ ಹಿಮೋಗ್ಲೋಬಿನ್ ಪರೀಕ್ಷೆ ನಡೆಸಲಾಗುವುದು. ತಪಾಸಣೆ ವೇಳೆ ರಕ್ತಹೀನತೆ ಕಂಡುಬರುವ ಸಿಬ್ಬಂದಿಗೆ ಕಬ್ಬಿಣ ಮತ್ತು ಫೋಲಿಕ್ ಆಮ್ಲದ ಮಾತ್ರೆ ಮತ್ತು ಸಿರಪ್‌ಗಳನ್ನು ಉಚಿತವಾಗಿ ನೀಡಲಾಗುವುದು.

ರಕ್ತಹೀನತೆಯಿಂದ ಬಳಲುತ್ತಿರುವ ಸಿಬ್ಬಂದಿ ಮತ್ತು ಕಾರ್ಮಿಕರಿಗೆ ಮೂರು ತಿಂಗಳ ನಂತರ ಅನುಸರಣಾ ಪರೀಕ್ಷೆಯನ್ನು ಸಹ ಕೈಗೊಳ್ಳಲಾಗುತ್ತದೆ. ಆದ್ದರಿಂದ ಉಚಿತವಾಗಿ ಹಿಮೋಗ್ಲೋಬಿನ್ ಪರೀಕ್ಷೆಯ ಶಿಬಿರವನ್ನು ಫೆ.17ರಂದು ನಂಜನಗೂಡು ಘಟಕದಲ್ಲಿ ಸಂಜೆ 4ರಿಂದ 7ರವರೆಗೆ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಈಗಾಗಲೇ ವಿಭಾಗೀಯ ಕಚೇರಿ, ಕಾರ್ಯಾಗಾರದಲ್ಲಿ ಫೆ.13ರಂದು ಹಾಗೂ ಫೆ.14ರಂದು ಕುವೆಂಪುನಗರ ಘಟಕದಲ್ಲಿ ಹಮ್ಮಿಕೊಳ್ಳಲಾಗಿತ್ತು ಎಂದು ನಗರ ವಿಭಾಗ ವಿಭಾಗೀಯ ನಿಯಂತ್ರಣಾಧಿಕಾರಿ ಕಚೇರಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಭಕ್ತಿ ಸಾಧನ ಕಾರ್ಯಕ್ರಮ...



ಮೈಸೂರಿನ ಸ್ಕ್ಯಾನರೇ ಟೆಕ್ನಾಲಜೀಸ್ ಹೆಲ್ತ್ ಕೇರ್ ಸಂಸ್ಥೆಯ ಸಭಾಂಗಣದಲ್ಲಿ ಶ್ರೀ ಗುರು ಧನ್ನೂರ್ ಪ್ರತಿಷ್ಠಾನ ಟ್ರಸ್ಟ್ ಹಾಗೂ ಸ್ಕ್ಯಾನ್‌ರೇ ಟೆಕ್ನಾಲಜೀಸ್ ಸಹಭಾಗಿತ್ವದಲ್ಲಿ 'ಭಕ್ತಿ ಸಾಧನ' ಭಕ್ತಿಯ ಮೂಲಕ ರಾಷ್ಟ್ರೀಯ ಭಾವೈಕ್ಯ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸ್ಕ್ಯಾನರೇ ಟೆಕ್ನಾಲಜೀಸ್ ಸಂಸ್ಥೆಯ ಸಿಇಓ ವಿಶ್ವಪ್ರಸಾದ್ ಆಳ್ವ ಉದ್ಘಾಟಿಸಿದರು. ರಮೇಶ್ ಧನ್ನೂರ, ವಸುಂಧರಾ, ವಿಜಯಲಕ್ಷ್ಮಿ, ಜಯಶ್ರೀ, ಗಾಯಕಿ ದ್ಯುತಿ ಜಹಾಗೀರದಾರ, ಪ್ರಭುರಾವ್, ಗುರು ಧನ್ನೂರ, ಲಕ್ಷ್ಮಿ ವಲ್ಲಭ, ನರಹರಿ ಭಟ್, ಸುಜೇಂದ್ರ ಮತ್ತಿತರರು ಭಾಗವಹಿಸಿದ್ದರು.

ಶೂಟಿಂಗ್‌ನಲ್ಲಿ ಜಾನ್ವಿಗೆ ಚಿನ್ನ, ಬೆಳ್ಳಿ ಪದಕ



ಮೈಸೂರು: ಇತ್ತೀಚಿಗೆ ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ ಏರ್ಪಡಿಸಿದ್ದ ರಾಜ್ಯಮಟ್ಟದ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಮೈಸೂರು ಕ್ರೀಡಾ ಶೂಟಿಂಗ್ ಅಕಾಡೆಮಿಯ ಡಿ.ಎಸ್. ಜಾನ್ವಿ ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕ ಪಡೆದು ಸಾಧನೆ ಮಾಡಿದ್ದಾರೆ.

ಜ.25ರಿಂದ ಫೆ.6ರವರೆಗೆ ಬೆಂಗಳೂರಿನ ಎಸ್‌ಎಐ ಶೂಟಿಂಗ್ ರೇಂಜ್‌ನಲ್ಲಿ ನಡೆದ 3ನೇ ನಾಗರಾಜ್‌ರಾವ್ ಜಗದಾಳೆ ರಾಜ್ಯ ಕ್ರೀಡಾ ಶೂಟಿಂಗ್ ಚಾಂಪಿಯನ್ ಶಿಪ್–2026ರಲ್ಲಿ ಜಾನ್ವಿ ಕ್ರಮವಾಗಿ ಉಪ ಯುವ ಮಹಿಳಾ ವಿಭಾಗದಲ್ಲಿ ಚಿನ್ನ, ಯುವ ಮಹಿಳಾ ವಿಭಾಗದಲ್ಲಿ ಬೆಳ್ಳಿ ಹಾಗೂ ಮಹಿಳಾ ವಿಭಾಗದಲ್ಲಿ ಕಂಚಿನ ಪದಕ ಗೆಲ್ಲುವ ಮೂಲಕ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶೋಭಾ ರಾಣಿ ಹಾಗೂ ದಿನೇಶ್ ದಂಪತಿ ಪುತ್ರಿ ಇವರಾಗಿದ್ದು, ಮೈಸೂರಿನ ಎಕ್ಸೆಲ್ ಪಬ್ಲಿಕ್ ಶಾಲೆಯ 9ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ಮಾ.1ಕ್ಕೆ ವೀರಶೈವ ಲಿಂಗಾಯಿತ ವಧು–ವರರ ವೇದಿಕೆ; ಮಾ.8ಕ್ಕೆ ಉದ್ಯೋಗ ಮೇಳ

ಮೈಸೂರು,ಫೆ.16(ಎಂಕೆ)– ಮೈಸೂರು ಜಿಲ್ಲಾ ವೀರಶೈವ ಲಿಂಗಾಯಿತ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಜೆಎಸ್‌ಎಸ್ ವಿವಾಹ ವೇದಿಕೆ ಸಹಯೋಗದಲ್ಲಿ ಮಾ.1ರಂದು ವಧು–ವರರ ವೇದಿಕೆ ಹಾಗೂ ಮಾ.8ರಂದು ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಬಿ.ಆರ್.ಶಿವಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ವೀರಶೈವ ಲಿಂಗಾಯಿತರಿಗಾಗಿ ನಟರಾಜ ಕಲ್ಯಾಣ ಮಂಟಪದಲ್ಲಿ ವಧು–ವರರ ವೇದಿಕೆ ಹಾಗೂ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದ್ದು, ಆಸಕ್ತರು ಕೂಡಲೇ ತಮ್ಮ ಹೆಸರು ನೊಂದಾಯಿಸಿಕೊಳ್ಳಬೇಕು ಎಂದರು.

ಹಾಗೆಯೇ ವಧು–ವರರ ವೇದಿಕೆ ಮತ್ತು ಉದ್ಯೋಗ ಮೇಳದ ನಂತರ ಸೂಕ್ತ ಸ್ಥಳದಲ್ಲಿ ಸಾರ್ವಜನಿಕರಿಗೆ ಖಾಸಗಿ ಆಸ್ಪತ್ರೆಗಳ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗುವುದು. ಆದಾದ ಬಳಿಕ ಅಂದರೆ ಮಾ.21ರಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ದಿವ್ಯ ಸಾನ್ನಿಧ್ಯದಲ್ಲಿ ಶ್ರೀರಾಂಪುರದಲ್ಲಿರುವ ಶಿವಭವನದಲ್ಲಿ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 9448380031/9449709948 ಸಂಪರ್ಕಿಸುವಂತೆ ತಿಳಿಸಿದರು.

ಮೈಸೂರು ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆಗೆ ಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರಕ್ಕೆ ಆಗ್ರಹ


ಮೈಸೂರು,ಫೆ16(ಎಂಕೆ)–ಮೈಸೂರು ವಿಮಾನ ನಿಲ್ದಾಣದ ಉನ್ನತೀಕರಣ ಮತ್ತು ರನ್‌ವೇ ವಿಸ್ತರಣೆಗಾಗಿ ಭೂ ಸ್ವಾಧೀನಪಡಿಸಿಕೊಂಡಿರುವ ಕೆಐಎಡಿಬಿ (ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ), ಒಪ್ಪಂದದಂತೆ ಭೂ ಪರಿಹಾರ ಹಣ ಪಾವತಿಸದೆ ವಿಳಂಬ ಮಾಡುತ್ತಿದೆ ಎಂದು ಅಶ್ವಿನಿ ಲೇಔಟ್ ನಿವಾಸಿ ಸುಂದರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸೋಮವಾರ ಪತ್ರಿಕಾಗೋಷ್ಠಿ ನಡೆಸಿದ ಅವರು, ವರುಣಾ ಹೋಬಳಿ ದೇವಲಾಪುರ ಗ್ರಾಪಂ ವ್ಯಾಪ್ತಿಯ ಮರಶೆ ಗ್ರಾಮದ ಸರ್ವೆ ನಂ.87/1 ಮತ್ತು 91ರಲ್ಲಿರುವ ಅಶ್ವಿನಿ ಲೇಔಟ್‌ನ 6 ಎಕರೆ 09 ಗುಂಟೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದು, ಒಪ್ಪಂದದಂತೆ ಪ್ರತಿ ಚದರಡಿಗೆ 2500 ರೂ.ನಂತೆ ಭೂ ಪರಿಹಾರ ನೀಡಬೇಕಿತ್ತು. ಆದರೆ, ಭೂ ಪರಿಹಾರ ನೀಡಲು ವಿಳಂಬ ಮತ್ತು ತಾರತಮ್ಯ ಮಾಡಲಾಗುತ್ತಿದೆ ಎಂದರು.

2024ರ ಕೆಐಎಡಿಬಿಯ 391ನೇ ಸಭೆಯಲ್ಲಿ ಪ್ರತಿ ಚದರಡಿಗೆ 2250 ರೂ.ನಿಂದ 2500 ರೂ.ಗಳಿಗೆ ಹೆಚ್ಚಿಸಿ, ಅಗತ್ಯ ದಾಖಲೆಗಳನ್ನು ನೀಡಿ ಭೂ ಪರಿಹಾರ ಪಡೆದು ಕೊಳ್ಳುವಂತೆ ಆದೇಶಿಸಲಾಯಿತು. ಅಕ್ಕ–ಪಕ್ಕ ಕೃಷಿ ಭೂಮಿಗೆ ಚದರಡಿಗೆ 3000ಕ್ಕೂ ಹೆಚ್ಚು ಹಣ ಪರಿಹಾರ ನೀಡಿರುವ ಕೆಐಎಡಿಬಿ, ಲೇಔಟ್ ಜಾಗಕ್ಕೆ ಪ್ರತಿ ಚದರಡಿಗೆ 2500 ರೂ. ಕೊಡಲು ಸಾಧ್ಯವಿಲ್ಲ ಎಂದು ತಕರಾರು ತೆಗೆದು ಭೂ ಪರಿಹಾರ ನೀಡದೆ ವಿಳಂಬ ಮಾಡುತ್ತಿದ್ದಾರೆ. ಭೂ ಪರಿಹಾರ ಹಣ ಇಂತಿಷ್ಟು ಎಂದು ನಿರ್ಧರಿಸಿ, ಅಂತಿಮವಾದ ಮೇಲೆ ಮತ್ತೆ ಕಡಿಮೆ ಮಾಡುವ ವಿಚಾರ ಮಾತನಾಡುತ್ತಿದ್ದಾರೆ ಎಂದರು.

ಈ ಸಂಬಂಧ ಈಗಾಗಲೇ ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರನ್ನು ಭೇಟಿ ಮಾಡಿ ಮನವಿ ಮಾಡಿದ್ದೇವೆ. ತಮ್ಮ ನಿವೇಶನ ಅಥವಾ ಆಸ್ತಿ ಇರುವ ಪ್ರದೇಶ ಮರಸೆ ಗ್ರಾಮ ರಾಜ್ಯ ಹೆದ್ದಾರಿಗೆ ಹೊಂದಿಕೊಂಡಂತಿದೆ. ಈಗ ಇಲ್ಲಿ ದುಬಾರಿ ಬೆಲೆ ನೀಡಿದರೂ ನಿವೇಶನ ದೊರೆಯುತ್ತಿಲ್ಲ. ಆದ್ದರಿಂದ ಕೂಡಲೇ ಭೂಮಿ ನೀಡಿರುವ 147 ಮಂದಿಗೆ ಕೆಐಎಡಿಬಿ ಸೂಕ್ತ ಪರಿಹಾರ ನೀಡಬೇಕು. ಹಾಗೆ ಪರಿಹಾರ ನೀಡಲು ಮುಂದಾಗದಿದ್ದಲ್ಲಿ ಉಗ್ರ ಕಾನೂನು ಹೋರಾಟ ನಡೆಸುವ ಎಚ್ಚರಿಕೆ ನೀಡಿದರು. ಚಂದ್ರು, ವೆಂಕಟೇಶ್, ರಾಮಮೂರ್ತಿ, ಸುರೇಶ್, ಕೆ.ಎಸ್.ರಮಾಮಣಿ ಮೊದಲಾದವರು ಉಪಸ್ಥಿತರಿದ್ದರು.

ಇಂದು ಮಹದೇಶ್ವರರ ಭಕ್ತಿಗೀತೆಗಳ ಕಾರ್ಯಕ್ರಮ




ಮೈಸೂರು, ಫೆ.16(ಎಂಕೆ)– ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಡಾ.ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್ ವತಿಯಿಂದ ಫೆ.17ರಂದು ಶಿವನ ಸ್ಮರಣೆ ಮಲೆ ಮಹದೇಶ್ವರಸ್ವಾಮಿ ಭಕ್ತಿಗೀತೆಗಳ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಗಾಯಕ ಸುಧೀಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಅಂದು ಸಂಜೆ 5ರಿಂದ ರಾತ್ರಿ 9.30ರವರೆಗೆ ಶಿವನ ಸ್ಮರಣೆ ಶೀರ್ಷಿಕೆಯಡಿ ಭಕ್ತಿಗೀತೆಗಳನ್ನು ಪ್ರಸ್ತುತಪಡಿಸಲಾಗುವುದು ಎಂದರು.


ಗಾಯಕರಾದ ಮೈಸೂರು ಜಯರಾಂ, ಸುರೇಶ್, ನಂಜುಂಡಯ್ಯ, ತೇಜಸ್ವಿನಿ ಹಾಗೂ ಶ್ರುತಿ ಭಕ್ತಿಗೀತೆಗಳನ್ನು ಹಾಡಲಿದ್ದಾರೆ. ಮೇಲುಕೋಟೆ ವೆಂಗೀಪುರ ಮಠದ ಇಳೈಆಳ್ವಾರ್ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ವೈ.ಡಿ.ರಾಜಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಕಲಾ ಪೋಷಕ ಶ್ರೀನಿವಾಸ್ ಮೂರ್ತಿ ಹಾಗೂ ಆರ್.ಶಿವರುದ್ರ ಭಾಗವಹಿಸಲಿದ್ದಾರೆ ಎಂದರು. ಡಾ.ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್‌ನ ಸರ್ವಮಂಗಳ, ಸುರೇಶ್, ಲತಾ ಬಾಲಕೃಷ್ಣ ಇದ್ದರು.

ಇಂದು, ನಾಳೆ ವಿದ್ಯುತ್ ವ್ಯತ್ಯಯ



ಮೈಸೂರು,ಫೆ.16– ನೆಹರೂನಗರ, ಭಾರತ್ ನಗರ, ಸಾತಗಳ್ಳಿ–ಎನ್.ಜೆ.ವೈ ಹಾಗೂ ಹಂಚ್ಯಾ–ಎನ್.ಜೆ.ವೈ ಫೀಡರ್‌ಗಳ ವ್ಯಾಪ್ತಿಯಲ್ಲಿ ಕಾರ್ಯಾಚರಣೆಗಳು ವಿಭಾಗ, ಕ.ವಿ.ಪ್ರ.ನಿ.ನಿ. ಮಂಡ್ಯ ವತಿಯಿಂದ ಹೊಸ ವಿದ್ಯುತ್ ಗೋಪುರಗಳ ನಿರ್ಮಾಣ ಮತ್ತು ಹೊಸ ವಾಹಕಗಳನ್ನು ಎಳೆಯುವ ಕಾಮಗಾರಿ ಕೆಲಸದ ನಿಮಿತ್ತ ಫೆ.17 ಮತ್ತು 18 ರಂದು ಮಧ್ಯಾಹ್ನ 2 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ನೆಹರೂನಗರ. ಡಿ.ಟಿ.ಎಸ್ ರಾವ್ ನಗರ. ಅರ್ನಾಲ್ಡ್ ಸ್ಕೂಲ್, ಕಾವೇರಿನಗರ, ಸನ್ಶೈರ್ ಬಡಾವಣೆ, ಸಾತಗಳ್ಳಿ 'ಬಿ' ಬಡಾವಣೆ, ವಿ.ಟಿ.ಯು ಕಾಲೇಜು ಹಾಗೂ ಸುತ್ತ–ಮುತ್ತ. ಭಾರತರತ್ನನಗರ, ಅಂಬೇಡ್ಕರ್ ನಗರ. ಹಂಚ್ಯಾ ಸಾತಗಳ್ಳಿ 'ಎ' ಬಡಾವಣೆ, ಪ್ರಜ್ವಲ್ ಆಸ್ಪತ್ರೆ ಸುತ್ತ–ಮುತ್ತ, ಈದ್ಗಾ ಮೈದಾನ, ರಾಜೀವ್‌ನಗರ, ತನ್ವೀರ್ ಸೇಟ್ ನಗರ, ಸೋನಿಯಾ ಬಡಾವಣೆ ಸುತ್ತ–ಮುತ್ತಲ ಪ್ರದೇಶಗಳು. ರಮ್ಮನಹಳ್ಳಿ, ಹಂಚ್ಯಾ, ಕಾಳಿಸಿದ್ದನಹುಂಡಿ, ಗಳಿಗರ ಹುಂಡಿ, ಆಶ್ರಯ ಬಡಾವಣೆ ಹಾಗೂ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.2.2026 ಮಂಗಳವಾರ, ಮಳೆ ನಕ್ಷತ್ರ: ಧನಿಷ್ಠ 6.02.2026 ರಿಂದ 18.02.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ಅಮಾವಾಸ್ಯೆ, ನಕ್ಷತ್ರ: ಧನಿಷ್ಟ ರಾಹುಕಾಲ: ಮಧ್ಯಾಹ್ನ 3ರಿಂದ 4–30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ**: ಪಾರ್ಕಿಸನ್ ಕಾಯಿಲೆ, ಮೈಗ್ರೇನ್, ಕಣ್ಣು–ಮೂಗಿನ ಅಲರ್ಜಿ ಮತ್ತು ಕೊಲೆಸ್ಟ್ರಾಲ್‌ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ**: ಸೋರಿಯಾಸಿಸ್(ಕಿಟಿಬಾ ಕುಷ್ಠ), ಶ್ರವಣ ಮತ್ತು ಕಿವಿಯ ಆರೈಕೆ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ
- **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ:** ಸಂಸ್ಥೆಯ 90ನೇ ವಾರ್ಷಿಕೋತ್ಸವ, ಮಹಾಶಿವರಾತ್ರಿ ಪ್ರಯುಕ್ತ ಗುಜರಾತಿನ ಸುಪ್ರಸಿದ್ಧ ಶ್ರೀ ಸೋಮನಾಥ ದಿವ್ಯ ದರ್ಶನ: ಸಂಜೆ. 6.15ಕ್ಕೆ 'ಸಂಬಂಧಗಳಲ್ಲಿ ಸಾಮರಸ್ಯ' ಕುರಿತು ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಸಂಚಾಲಕರಾದ ಬಿ.ಕೆ ಸಂಧ್ಯಾ ಅವರಿಂದ ಪ್ರವಚನ, 7 ಗಂಟೆಗೆ ಹುಣಸೂರಿನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ.ಬಿ.ವಿ ವಸಂತಕುಮಾರ್ ಅವರಿಂದ 'ಭಾರತ ಮತ್ತು ಶಿವ ಪ್ರಜ್ಞೆ' ಕುರಿತು ಉಪನ್ಯಾಸ, ರಾತ್ರಿ 8 ಗಂಟೆಗೆ ಚಾಮರಾಜನಗರದ ಸರಸ್ವತಿ ಮತ್ತು ತಂಡದಿಂದ ನೃತ್ಯ ರೂಪಕ, ಸ್ಥಳ: ಹುಣಸೂರು ರಸ್ತೆ, ಐಶ್ವರ್ಯ ಪೆಟ್ರೋಲ್ ಬಂಕ್ ಎದುರು.
- **ಮೈಸೂರು ವಿವಿಯ ಇನ್ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಸ್ಟಡೀಸ್, ಮಾಳವೀಯ ಮಿಷನ್ ಟೀಚರ್ ಟ್ರೈನಿಂಗ್ ಸೆಂಟರ್, ರೂಸಾ 2.0**: ಸಾವಯವ ಕೃಷಿ ವ್ಯವಹಾರದಲ್ಲಿ ಉದಯೋನ್ಮುಖ ಪ್ರವೃತ್ತಿಗಳು ಮತ್ತು ಗ್ರಾಮೀಣ ಅಭಿವೃದ್ಧಿಯ ಮೇಲೆ ಅದರ ಪ್ರಭಾವ ಕುರಿತು ವಿಚಾರ ಸಂಕಿರಣ, ಸ್ಥಳ: ಪ್ರೊ. ಆರ್.ಪಿ.ಮಿಶ್ರಾ ಹಾಲ್, ಇನ್ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಸ್ಟಡೀಸ್, ಮಾನಸ ಗಂಗೋತ್ರಿ, ಬೆಳಗ್ಗೆ 10.30 ರಿಂದ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ 6.35 ಮತ್ತುಸಂಜೆ 6.10 ಸಾಧಕರ ಸೋಪಾನ–ಲೇಖನ ಮತ್ತು ಪ್ರಸ್ತುತಿ: ಟಿ.ಎಸ್.ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ರೋಹಿಣಿ ಸುಧಾಂ, ವ್ಯಾಖ್ಯಾನ–ಡಾ.ಪ್ರದೀಪ್‌ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40–ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು. ಮುಕ್ತವಾಣಿ. ಪ್ರಾಯೋಜಕರು: ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ವಿಷಯ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ ವಿಭಾಗದ ಅಧ್ಯಯನ ಮತ್ತು ಸಂಶೋಧನಾ ಅವಕಾಶಗಳನ್ನು ಕುರಿತು ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಎಂ. ಉಮಾಶಂಕರ್ ಅವರೊಂದಿಗಿನ ಸಂದರ್ಶನದ ಮೊದಲ ಭಾಗ, ಸಂದರ್ಶಕರು–ಲಕ್ಷ್ಮೀನಾರಾಯಣ .ಎಸ್., ನಿರ್ಮಾಣ: ಎನ್.ಕೇಶವಮೂರ್ತಿ, 8.30 ಕರೆಗೊಂದು ಗೀತೆ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಲಕ್ಷ್ಮೀನಟರಾಜ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ. ಪ್ರಸ್ತುತಿ: ಆರ್.ಲೋಕೇಶ್ವರಿ ಬಿ.ಜಿ. ಕವಿತಾ ಹಾಗೂ ಲಕ್ಷ್ಮೀನಾರಾಯಣ, **ಮಧ್ಯಾಹ್ನ:** 12.05 ವನಿತಾ ವಿಹಾರ–ಶಿವರಾತ್ರಿ ಹಬ್ಬದ ಕುರಿತು ಮೈಸೂರಿನ ರಾಮಕೃಷ್ಣ ನಗರದ ಶಾರದಾದೇವಿ ಮಹಿಳಾ ಸಮಾಜದ ಸದಸ್ಯೆಯರಿಂದ ಕಾರ್ಯಕ್ರಮ ವೈವಿಧ್ಯ, 12.35 ದೇವರನಾಮ ಸಂಕೀರ್ತನಾ ಪ್ರಿಯಾ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ. 1.20 ಭಾವಗೀತೆಗಳು–ಮಧುಲಿಕಾ ಶ್ರೀನಿವಾಸ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಓ.ಎಸ್.ತ್ಯಾಗರಾಜನ್–ಹಾಡುಗಾರಿಕೆ, 3.30 ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮ, ಉಮಂಗ್, 4.00 ಕಥಾಕಾಲಕ್ಷೇಪ ಭೀಷ್ಮಾಚಾರ್ಯ, ಪ್ರಸ್ತುತಿ–ಸಂತಶ್ರೀ ಕೇಶವದಾಸರು, 5.00 ಪ್ರಾಯೋಜಿತ ಕಾರ್ಯಕ್ರಮ: ನಿರಾಮಯ ನಿಮ್ಮ ಆರೋಗ್ಯ ನಮ್ಮ ಮಾತು, ಪ್ರಾಯೋಜಕರು: ನಿರಾಮಯ ಹೆಲ್ತ್ ಕೇರ್, ಸರಸ್ವತಿಪುರಂ, ಮೈಸೂರು. ಭಾಗವಹಿಸುತ್ತಾರೆ–ಡಾ.ದಿನೇಶ್‌ಕುಮಾರ್, ವಿಷಯ –ವೃದ್ಧಾಪ್ಯದ ಮೂತ್ರಕೋಶದ ತೊಂದರೆಗಳು ಮತ್ತು ಪರಿಹಾರ, ಪ್ರಸ್ತುತಿ– ಡಾ.ಕುಲದೀಪ್.ಎನ್ ಹಾಗೂ ತೇಜಸ್ವಿನಿ ಗಿರೀಶ್, 5.35 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್ ವಾಣಿ –ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ್ಯ ತರಂಗ ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಮತ್ಸ ಸಂಜೀವಿನಿ ಯೋಜನೆ ಈ ಕುರಿತು ಗುಂಡ್ಲುಪೇಟೆ ತಾಲೂಕು ಮೀನುಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕರಾದ ಎಸ್.ವಿವೇಕ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ. ಪ್ರಸ್ತುತಿ–ದಿಗ್ವಿಜಯ್. ಬಿ, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಪಂಡಿತ್ ರಾಮ್ ನಾರಾಯಣ್–ಸಾರಂಗಿ ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಎಂ.ಕೆ.ಶಂಕರನ್ ನಂಬೂದರಿ–ಹಾಡುಗಾರಿಕೆ, 10.00 ಆಕಾಶವಾಣಿ ಸಂಗೀತ ಸಮ್ಮೇಳನ 1. ಡಾ. ದೀಪಾಲಿ ವಟ್ಟಲ್ ಘಜಲ್, ಲಘು ಸಂಗೀತ, 2. ಶ್ರೀ ಮನ್ನ ಲಾಲ್ ಯಾದವ್ ಮತ್ತು ಸಂಗಡಿಗರಿಂದ ಜನಪದ ಸಂಗೀತ.

ಮೈಸೂರು ಮಿತ್ರ

ಮಂಗಳವಾರ 17 ಫೆಬ್ರವರಿ 2026

ಕೆ.ಸಿ.ನಗರದ ಕೆರೆ ಒತ್ತುವರಿ ತೆರವು ಬೆನ್ನಲ್ಲೆ ಮತ್ತೊಂದು ವಿವಾದ

ಕೆರೆ ಜಾಗ ಸೇರಿಸಿ ಬಡಾವಣೆ ನಿರ್ಮಾಣ; ನಿವೇಶನ ಹಂಚಿ ಕೈ ತೊಳೆದುಕೊಂಡ ಮುಡಾ

ಮೈಸೂರು, ಫೆ.16(ಬಿಎಲ್‌ಯು)– ಮೈಸೂರಿನ ಕೆ.ಸಿ.ನಗರದ ಕೆರೆ ಒತ್ತುವರಿಯ ಒಂದು ಸಮಸ್ಯೆ ಸದ್ಯ ಪರಿಹಾರವಾಯ್ತು. ಈಗ ಅದೇ ಬಡಾವಣೆಯಲ್ಲಿ ಮತ್ತೊಂದು ಸಮಸ್ಯೆ ತಲೆದೋರಿದೆ.

ಕೆ.ಸಿ.ನಗರ ಬಡಾವಣೆ ನಿರ್ಮಾಣದ ವೇಳೆ ಮುಡಾ, ಕೆರೆ ಜಾಗವನ್ನು ಸೇರಿಸಿಕೊಂಡು ಬಡಾವಣೆ ನಿರ್ಮಾಣ ಮಾಡಿರುವುದು ಬೆಳಕಿಗೆ ಬಂದಿದೆ.

ಇದರಿಂದ ಕೆ.ಸಿ.ನಗರದಲ್ಲಿರುವ 10 ಮನೆ ಹಾಗೂ 20 ನಿವೇಶನಗಳ ಜಾಗ ಕೆರೆಗೆ ಸೇರಿದೆ ಎಂದು ಸರ್ಕಾರದ ನಕ್ಷೆ ಸೇರಿದಂತೆ ದಾಖಲಾತಿಯಲ್ಲಿ ನಮೂದಾಗಿದೆ.

ಕೆರೆ ಜಾಗದಲ್ಲಿ ಮುಡಾದಿಂದ ನಿವೇಶನ ಪಡೆದವರಿಗೆ ಏನೇ ಸಮಸ್ಯೆ ಎದುರಾದರೂ ಅದನ್ನು ಸರ್ಕಾರವೇ ಬಗೆಹರಿಸಬೇಕಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವೇ ಅಧಿಕೃತವಾಗಿ ಬಡಾವಣೆ ನಿರ್ಮಾಣ ಮಾಡಿ ನಿವೇಶನ ನೀಡಿರುವುದರಿಂದ ಜನ ವಿಶ್ವಾಸದಿಂದಿದ್ದಾರೆ.



ಕೆರೆ ಅಂಗಳದಲ್ಲಿ ಮುಡಾದಿಂದ ನಿವೇಶನ ಹಂಚಿಕೆ ನಕ್ಷೆ.

ಆದರೆ, ಇಂತಹ ಮನೆ ಹಾಗೂ ನಿವೇಶನಗಳು ಸರ್ಕಾರದ ಮೂಲ ದಾಖಲಾತಿಯಲ್ಲಿ ಕೆರೆ ಎಂದು ನಮೂದಾಗಿದೆ. ಇದರಿಂದ ತಮ್ಮ ನಿವೇಶನ ಹಾಗೂ ಮನೆಗೆ ಕಾನೂನಿನ ಬದ್ಧತೆ ಇದೆಯೇ ಎಂಬ ಗೊಂದಲ ನಿವೇಶನಗಳ ಮಾಲೀಕರನ್ನು ಕಾಡಬಹುದು. ಈ ವಿಚಾರ ಜಿಲ್ಲಾಡಳಿತ ಅರಿವಿಗೆ ಬಂದಿದ್ದು, ಒಂದು ವೇಳೆ ಸಮಸ್ಯೆ ಎದುರಾದರೆ ಸರ್ಕಾರದ ಮಟ್ಟದಲ್ಲಿ ಬಗೆಹರಿಯುತ್ತದೆ ಎಂಬ ವಿಶ್ವಾಸ ಅಧಿಕಾರಿಗಳಲ್ಲೂ ಇದೆ.

ಇದು ಸರ್ಕಾರದ ಮಟ್ಟದಲ್ಲಿ ತೀರ್ಮಾನವಾಗಬೇಕು

ಕೆ.ಸಿ.ನಗರದ 6 ಎಕರೆ 10 ಗುಂಟೆ ಕೆರೆ ಜಾಗದಲ್ಲಿ 3 ಎಕರೆ 17 ಗುಂಟೆಯನ್ನು ನಾವು ಈಗ ತೆರವು ಮಾಡಿದ್ದೇವೆ. ಉಳಿದ ಜಾಗದಲ್ಲಿ ಮುಡಾ ಬಡಾವಣೆ ನಿರ್ಮಾಣ ಮಾಡಿ ನಿವೇಶನ ಹಂಚಿಕೆ ಮಾಡಿದೆ. ಇದರಲ್ಲಿ 10 ನಿವೇಶನಗಳಲ್ಲಿ ಮನೆ ನಿರ್ಮಾಣವಾಗಿದ್ದು, 20 ಖಾಲಿ ನಿವೇಶನಗಳಿವೆ ಎಂದು ತಹಸೀಲ್ದಾರ್ ಮಹೇಶ್ ಕುಮಾರ್ ಸ್ಪಷ್ಟಪಡಿಸಿದ್ದಾರೆ.



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವು ಅಂದು ಬಡಾವಣೆ ನಿರ್ಮಿಸಿ ನಿವೇಶನ ಹಂಚಿಕೆ ಮಾಡಿತು. ಆದರೆ ಕೆರೆಗೆ ಸೇರಿದ ಜಾಗವನ್ನು ಸೇರಿಸಿ ಬಡಾವಣೆ ನಿರ್ಮಾಣ ಮಾಡಿ ನಿವೇಶನ ಹಂಚಿಕೆ ಮಾಡಿದೆ ಎಂದು ಹೇಳಿದರು.


ಕೆ.ಸಿ.ಬಡಾವಣೆಯ 10 ಮನೆ ಹಾಗೂ 20 ನಿವೇಶನದ ಜಾಗ ಕೆರೆ ಜಾಗ ಎಂದು ಸರ್ಕಾರದ ನಕ್ಷೆ ಹಾಗೂ ದಾಖಲಾತಿಯಲ್ಲಿ ಸ್ಪಷ್ಟವಾಗಿ ಉಲ್ಲೇಖವಾಗಿದೆ. ಇದರ ವ್ಯಾಪ್ತಿಯನ್ನು ನಾವು ಗುರುತಿಸಿದ್ದೇವೆ.

ಆದರೆ ಈ ಕುರಿತ ಸಮಸ್ಯೆಯನ್ನು ನಾವು ತೀರ್ಮಾನ ಮಾಡಲು ಸಾಧ್ಯವಿಲ್ಲ. ಸರ್ಕಾರದ ಉನ್ನತ ಮಟ್ಟದಲ್ಲಿ ನಿರ್ಧಾರವಾಗಬೇಕಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಏನು ನಿರ್ಧಾರ ಕೈಗೊಳ್ಳುತ್ತದೆ ಎಂದು ಕಾದು ನೋಡಬೇಕಿದೆ ಎಂದು ಮಹೇಶ್ ಕುಮಾರ್ ಹೇಳಿದರು.


ಅಭಿನಂದನೆ...



ಸೋಮವಾರ 'ಸ್ಟಾರ್ ಆಫ್ ಮೈಸೂರ್' 49ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ ಅವರನ್ನು ಮೈಸೂರಿನ ಕನ್ನೇಗೌಡನಕೊಪ್ಪಲು ಮುಖಂಡರು ಆತ್ಮೀಯವಾಗಿ ಅಭಿನಂದಿಸಿದರು. ಚಿತ್ರದಲ್ಲಿ ಕಾಂಗ್ರೆಸ್ ಉಪಾಧ್ಯಕ್ಷರಾದ ವಿಕ್ರಾಂತ್ ಪಿ.ದೇವೇಗೌಡ, ಭೈರವ ಗ್ರೂಪ್ ಮಾಲೀಕರಾದ ಬಿ. ಮಹದೇವ್, ಮುಖಂಡರಾದ ಪಿ. ಬಂದೇಗೌಡ, ಗಿರೀಶ್ ಡಿ.ಗೌಡ, ಕೊಪ್ಪಲ್ ದೀಪು ಇತರರಿದ್ದಾರೆ.



ಹಿರಿಯ ಪತ್ರಕರ್ತ ಅಪ್ಸರ್ ಪಾಷ, ಅವರ ಪುತ್ರ ಮಹಮ್ಮದ್ ತನ್ಜಿಲ್ ಫೈಜಾನ್ ಅವರು ವಿಕ್ರಂ ಮುತ್ತಣ್ಣ ಅವರನ್ನು ಆತ್ಮೀಯವಾಗಿ ಅಭಿನಂದಿಸಿದರು.



ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ ಅವರನ್ನು ಅಭಿನಂದಿಸಿ, ಶುಭ ಕೋರಿದರು.



ಮೈಸೂರಿನ ಹೆಸರಾಂತ 'ಸ್ಟಾರ್ ಆಫ್ ಮೈಸೂರ್' ಸಂಜೆ ಇಂಗ್ಲಿಷ್ ದೈನಿಕ ಪತ್ರಿಕೆಯ 49ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ಅದರ ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ ಅವರನ್ನು ಮೈಸೂರು ಜಿಲ್ಲಾ ಪತ್ರಿಕಾ ಛಾಯಾಗ್ರಾಹಕರ ಸಂಘದ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಪ್ರಗತಿ ಗೋಪಾಲಕೃಷ್ಣ, ಉಪಾಧ್ಯಕ್ಷ ಕೆ.ಹೆಚ್.ಚಂದ್ರು, ಪ್ರಧಾನ ಕಾರ್ಯದರ್ಶಿ ಲಕ್ಷ್ಮೀನಾರಾಯಣ ಯಾದವ್, ಖಜಾಂಚಿ ಎಸ್.ಉದಯ್ ಶಂಕರ್, ಸದಸ್ಯರಾದ ಎಂ.ಎಸ್.ಬಸವಣ್ಣ, ಹಂಪ ನಾಗರಾಜು, ಗವಿಮಠ ರವಿ ಮತ್ತಿತರರಿದ್ದರು.

ರಾಜಸ್ಥಾನದಲ್ಲಿ ಪಟಾಕಿ ಕಾರ್ಖಾನೆಯಲ್ಲಿ ಅಗ್ನಿ ಅವಘಡ; ಏಳು ಮಂದಿ ಸಜೀವ ದಹನ

ಭಿವಾಡಿ: ರಾಜಸ್ಥಾನದ ಖೈರ್ತಾಲ್–ತಿಜಾರಾ ಜಿಲ್ಲೆಯ ಭಿವಾಡಿ ಪಟ್ಟಣದಲ್ಲಿ ಸೋಮವಾರ ಅಕ್ರಮ ಪಟಾಕಿ ತಯಾರಿಕೆ ಕಾರ್ಖಾನೆಯಲ್ಲಿ ಭಾರೀ ಅಗ್ನಿ ಅವಘಡ ಸಂಭವಿಸಿದ್ದು, ಘಟನೆಯಲ್ಲಿ ಕನಿಷ್ಠ ಏಳು ಜನ ಸಜೀವ ದಹನಗೊಂಡಿದ್ದಾರೆ.

"ಘಟನೆಯಲ್ಲಿ ಏಳು ಜನರು ಸಾವನ್ನಪ್ಪಿದ್ದಾರೆ. ಅದು ಗಾರ್ಮೆಂಟ್ ಕಾರ್ಖಾನೆಯಾಗಿತ್ತು ಆದರೆ ಅದರೊಳಗೆ ಅಕ್ರಮವಾಗಿ ಪಟಾಕಿಗಳನ್ನು ತಯಾರಿಸಲಾಗುತ್ತಿತ್ತು" ಎಂದು ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಸುಮಿತ್ರಾ ಪರೀಕ್ ಅವರು ತಿಳಿಸಿದ್ದಾರೆ. ಕಾರ್ಖಾನೆಯಲ್ಲಿ ಇನ್ನೂ ಇಬ್ಬರು ಸಿಲುಕಿಕೊಂಡಿದ್ದಾರೆ ಎಂದು ಅವರು ಹೇಳಿದ್ದಾರೆ.

'ಇಂಡಿಯಾ ಎಐ ಇಂಪ್ಯಾಕ್ಟ್ ಎಕ್ಸ್‌ಪೋ'ಗೆ ಪ್ರಧಾನಿ ಮೋದಿ ಚಾಲನೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ನವದೆಹಲಿಯಲ್ಲಿ ಇಂಡಿಯಾ ಎಐ ಇಂಪ್ಯಾಕ್ಟ್ ಎಕ್ಸ್‌ಪೋವನ್ನು ಉದ್ಘಾಟಿಸಿದರು. ವಿವಿಧ ಮಳಿಗೆಗಳಿಗೆ ಭೇಟಿ ನೀಡಿದ ಪ್ರಧಾನಿ, ಎಕ್ಸ್‌ಪೋದಲ್ಲಿ ಭಾಗವಹಿಸಿದ್ದ ಕಂಪನಿಗಳೊಂದಿಗೆ ಮಾತನಾಡಿದರು.

ಫೆಬ್ರವರಿ 16–20 ರವರೆಗೆ ನವದೆಹಲಿಯ ಭಾರತ್ ಮಂಟಪದಲ್ಲಿ ಎಕ್ಸ್‌ಪೋ ಜೊತೆಗೆ ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗಸಭೆಯನ್ನು ಆಯೋಜಿಸಲಾಗಿದೆ. ರಾಷ್ಟ್ರಗಳು ತಮ್ಮ ಎಐ ಕಾರ್ಯಸೂಚಿಯನ್ನು ವ್ಯಾಖ್ಯಾನಿಸಲು ಹೆಚ್ಚಿನ ಆಸಕ್ತಿ ತೋರುತ್ತಿರುವ ಸಮಯದಲ್ಲಿ ನೀತಿ ನಿರೂಪಕರು, ಉದ್ಯಮದ ನಾಯಕರು ಮತ್ತು ತಂತ್ರಜ್ಞಾನ ನಾವೀನ್ಯಕಾರರನ್ನು ಇದು ಒಟ್ಟುಗೂಡಿಸುತ್ತದೆ.



ಎಕ್ಸ್‌ಪೋದಲ್ಲಿ 600 ಕ್ಕೂ ಹೆಚ್ಚು ಉನ್ನತ–ಸಾಮರ್ಥ್ಯದ ಸ್ಟಾರ್ಟ್‌ಅಪ್‌ಗಳು ಮತ್ತು 13 ದೇಶದ ಪೆವಿಲಿಯನ್‌ಗಳಿದ್ದು, ಎಐ ಪರಿಸರ ವ್ಯವಸ್ಥೆಯಲ್ಲಿ ಅಂತಾರಾಷ್ಟ್ರೀಯ ಸಹಯೋಗವನ್ನು ಪ್ರದರ್ಶಿಸಿದೆ. ಎಕ್ಸ್‌ಪೋ ಜಾಗತಿಕ ತಂತ್ರಜ್ಞಾನ ಸಂಸ್ಥೆಗಳು, ಸ್ಟಾರ್ಟ್‌ಅಪ್‌ಗಳು, ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮತ್ತು ಅಂತಾರಾಷ್ಟ್ರೀಯ ಪಾಲುದಾರರನ್ನು ಒಗ್ಗೂಡಿಸಿದೆ.

ಪ್ರಧಾನಿ ನರೇಂದ್ರ ಮೋದಿಯವರ ಆಹ್ವಾನದ ಮೇರೆಗೆ, ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರೋನ್ ಮತ್ತು ಬ್ರೆಜಿಲ್ ಅಧ್ಯಕ್ಷ ಲುಲಾ ಡಾ ಸಿಲ್ವಾ ಸೇರಿದಂತೆ ಹಲವು ಜಾಗತಿಕ ನಾಯಕರು ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. 45ಕ್ಕೂ ಹೆಚ್ಚು ದೇಶಗಳ ಸಚಿವರ ನಿಯೋಗಗಳು ಶೃಂಗಸಭೆಯಲ್ಲಿ ಭಾಗವಹಿಸಲಿವೆ.

ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಸೇರಿದಂತೆ ಹಲವು ಅಂತಾರಾಷ್ಟ್ರೀಯ ಸಂಸ್ಥೆಗಳ ಹಿರಿಯ ಅಧಿಕಾರಿಗಳು ಸಹ ಚರ್ಚೆಯಲ್ಲಿ ಭಾಗವಹಿಸಲಿದ್ದಾರೆ. ಪ್ರಧಾನಿ ಮೋದಿ ಅವರು ಶೃಂಗಸಭೆಯನ್ನು ಉದ್ದೇಶಿಸಿ, ಮಾತನಾಡಲಿದ್ದು, ಎಕ್ಸ್‌ಪೋಗೆ ಭೇಟಿ ನೀಡಲಿದ್ದಾರೆ ಮತ್ತು ಸಿಇಒಗಳೊಂದಿಗೆ ಸಮಾಲೋಚನೆ ನಡೆಸಲಿದ್ದಾರೆ.

ಕರ್ನಾಟಕ ಅನುಸೂಚಿತ ಜಾತಿಗಳ–2025 ವಿಧೇಯಕ ಅಂಗೀಕರಿಸದಂತೆ ಮನವಿ

ಮೈಸೂರು,ಫೆ.16(ಪಿಎಂ)– ಕರ್ನಾಟಕ ಸರ್ಕಾರವು ಅನುಮೋದನೆಗೆ ಸಲ್ಲಿಸಿರುವ ಅನುಸೂಚಿತ ಜಾತಿಗಳ (ಉಪ ವರ್ಗೀಕರಣ) 2025 ವಿಧೇಯಕ ಅಂಗೀಕರಿಸಬಾರದೆಂದು ರಾಜ್ಯಪಾಲರು ಹಾಗೂ ಮುಖ್ಯಮಂತ್ರಿಗಳಲ್ಲಿ ಪತ್ರ ಮುಖೇನ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಮನವಿ ಮಾಡಿದ್ದಾರೆ.



ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಜಾರಿಗೆ ತರಲು ಕರ್ನಾಟಕ ಅನುಸೂಚಿತ ಜಾತಿಗಳ (ಉಪ ವರ್ಗೀಕರಣ) ವಿಧೇಯಕ 2025 ಅನ್ನು ರೂಪಿಸಿ ಎರಡೂ ಸದನಗಳಲ್ಲಿ ಅನುಮೋದನೆ ಪಡೆದು ತಮ್ಮ ಅಂಗೀಕಾರಕ್ಕೆ ಸಲ್ಲಿಸಲಾಗಿದೆ. ಸದರಿ ವಿಧೇಯಕವು ತಮ್ಮ ಅಂಕಿತದೊಡನೆ ಕಾನೂನು ಆದಲ್ಲಿ ಹಲವು ಸಮಸ್ಯೆಗಳು ಪರಿಶಿಷ್ಟ ಜಾತಿಯ ಎಲ್ಲಾ ಸಮುದಾಯಗಳಿಗೂ ಉಂಟಾಗುತ್ತದೆ. ಆದ್ದರಿಂದ ಸದರಿ ವಿಧೇಯಕಕ್ಕೆ ಒಪ್ಪಿಗೆ ನೀಡಬಾರದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯದವರು ಜನರಲ್ ಮೆರಿಟ್‌ನಡಿ ಆಯ್ಕೆಯಾದವರನ್ನು ಶೇ.17 ಪ್ರಾತಿನಿಧ್ಯದಲ್ಲಿ ಸೇರಿಸಿ ಲೆಕ್ಕ ಹಾಕುವ ಸಾಧ್ಯತೆ ಇರುತ್ತದೆ. ಆದ್ದರಿಂದ ಸದರಿ ವಿಧೇಯಕವು ಪರಿಶಿಷ್ಟ ಜಾತಿಯವರಿಗೆ ಪೂರಕವಾಗಿಲ್ಲ. ನ್ಯಾ.ನಾಗಮೋಹನ್ ದಾಸ್ ಆಯೋಗದ ವರದಿಯಿಂದ ಪರಿಶಿಷ್ಟ ಜಾತಿಯ ಬಲಗೈ ಸಮುದಾಯಕ್ಕೆ ಅನ್ಯಾಯವಾಗಿದ್ದು, ಸದರಿ ಅನ್ಯಾಯವನ್ನು ಸರಿಪಡಿಸದೇ ವಿಧೇಯಕ ಸಿದ್ಧಪಡಿಸಿರುವುದು ಸರಿಯಲ್ಲ.

ಪ್ರಸ್ತುತ ರಾಜ್ಯ ಸರ್ಕಾರವು ಹೊರಡಿಸಿರುವ ಆದೇಶದಲ್ಲಿ 19 ಜಾತಿಗಳನ್ನು ಬಲಗೈ ಸಮುದಾಯವೆಂದು ನಮೂದಿಸಲಾಗಿದೆ. ಆದರೆ ರಾಜ್ಯ ಸರ್ಕಾರವು 2025ರ ನ.13ರಂದು ಸೌಲಭ್ಯ ಪಡೆಯಲು ಹೊರಡಿಸಿರುವ ಆದೇಶದಲ್ಲಿ 63 ಜಾತಿಗಳನ್ನು ಬಲಗೈ ಸಮುದಾಯವೆಂದು ಗುರುತಿಸಿದೆ. ಈ ಸಮುದಾಯದ ಎಲ್ಲಾ 63 ಜಾತಿಗಳು ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ಪಡೆಯಲು ಮಸೂದೆಯಲ್ಲಿ ಅವಕಾಶ ಕಲ್ಪಿಸಿಲ್ಲ.

ಆದ್ದರಿಂದ ರಾಜ್ಯ ಸರ್ಕಾರವು ಒಳಮೀಸಲಾತಿ ಗೊಂದಲಗಳನ್ನು ಬಗೆಹರಿಸಿ ನ್ಯಾಯಾಲಯದ ಅಡೆತಡೆಗಳು ನಿವಾರಣೆಯಾಗುವವರೆಗೆ ಒಳಮೀಸಲಾತಿ ರಹಿತ ಹಳೇ ಮೀಸಲಾತಿ ಪದ್ಧತಿಯನ್ನು ಮರುಜಾರಿ ಮಾಡಲು ಸೂಚಿಸಿ ಕರ್ನಾಟಕ ಅನು ಸೂಚಿತ ಜಾತಿಗಳ (ಉಪ ವರ್ಗೀಕರಣ) ವಿಧೇಯಕ 2025 ಅನ್ನು ಕೈಬಿಡಬೇಕೆಂದು ಕೋರಿದ್ದಾರೆ.

ಶಿವರಾತ್ರಿ ಬಳಿಕ ಡಿ.ಕೆ. ಶಿವಕುಮಾರ್‌ಗೆ ಒಳ್ಳೆದಾಗುತ್ತೆ...

ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಡಾ. ಯತೀಂದ್ರ ಹೇಳಿಕೆಗೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಟಾಂಗ್

ಬೆಂಗಳೂರು, ಫೆ16(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಸುಪುತ್ರ ಯತೀಂದ್ರ ಶಿವರಾತ್ರಿ ಕಳೆದ ಮೇಲೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಎಲ್ಲರಿಗೂ ಒಳ್ಳೆಯದಾಗಲಿದೆ ಎಂದಿರುವುದು ನಾಯಕತ್ವ ಬದಲಾವಣೆಯ ಮುನ್ಸೂಚನೆಯೇ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ಪ್ರಶ್ನಿಸಿದ್ದಾರೆ.



ವಿಜಯೇಂದ್ರ

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಜನತೆಗೆ ಒಳ್ಳೆಯದಾಗಲಿದೆ ಎಂಬುದಾಗಿ ಹೇಳಿಲ್ಲ. ಮುಖ್ಯಮಂತ್ರಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವುದನ್ನು ಬಹಳ ಸೂಕ್ಷ್ಮವಾಗಿ ಮುಖ್ಯಮಂತ್ರಿ ಸುಪುತ್ರರು ಬಿಚ್ಚಿಟ್ಟಿದ್ದಾರೆ, ಮುಖ್ಯಮಂತ್ರಿ ರಾಜೀನಾಮೆ ಕೊಟ್ಟರೆ ತಾವು ಕ್ಯಾಬಿನೆಟ್ ಸೇರುವ ಸುಳಿವನ್ನೂ ಯತೀಂದ್ರ ನೀಡಿದ್ದಾರೆ ಎಂದರು. ಎಲ್ಲಕ್ಕಿಂತ ಮಿಗಿಲಾಗಿ ಕಳೆದ ಎರಡೂವರೆ ವರ್ಷಗಳಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ರಾಜ್ಯದ ಜನತೆಗೆ ಅನ್ಯಾಯ ಮಾಡಿದೆ, ದ್ರೋಹ ಎಸಗಿದೆ ಎಂಬುದನ್ನು ಯತೀಂದ್ರ ಒಪ್ಪಿರುವುದು ಜಗಜ್ಜಾಹೀರಾಗಿದೆ.

ಅವರ ಅಂತರಾಳದ ಮಾತನ್ನು ಆಡಿದ್ದಾರೆ. ಜೊತೆೇ ನಾಡಿನ ಜನರು ನಾಡಿಮಿಡಿತವನ್ನೂ ಯತೀಂದ್ರ ಅರ್ಥ ಮಾಡಿ ಕೊಂಡೇ ಶಿವರಾತ್ರಿ ಬಳಿಕ ಒಳ್ಳೆಯದಾಗಲಿದೆ ಎಂಬ ಆಶಾಭಾವನೆ ವ್ಯಕ್ತಪಡಿಸಿದ್ದಾರೆ ಎಂಬುದು ಸ್ಪಷ್ಟವಾಗುತ್ತಿದೆ. ಸಿದ್ದರಾಮಯ್ಯ ಅವರಿಗೆ ಕುರುಬ ಸಮುದಾಯ ರಾಜಕೀಯ ಶಕ್ತಿ ಕೊಡಬೇಕು ಎಂದಿದೆ. ಇನ್ನೂ ಎಷ್ಟು ರಾಜಕೀಯ ಶಕ್ತಿ ಬೇಕು, ಕನಿಷ್ಠ ರಾಜ್ಯದಲ್ಲಿರುವ ಕುರಿ ಕಾಯುವವರ ಸಮಸ್ಯೆ ಪರಿಹರಿಸಿ ಎಂದರು.



ಯತೀಂದ್ರ

ಕುರಿಗಳು ಅಚಾನಕ್ ಸತ್ತಾಗ ಅನುಗ್ರಹ ಯೋಜನೆಯಡಿ ಸರ್ಕಾರ ಪರಿಹಾರ ಕೊಡುತ್ತಿಲ್ಲ, 90 ಸಾವಿರ ಕುರಿ, ಮೇಕೆಗಳು ಸತ್ತಿದ್ದು, 45 ಕೋಟಿ ರೂ. ಬಾಕಿ ಉಳಿದಿದೆ, ಕೇವಲ 30 ಸಾವಿರಕ್ಕೆ ಪರಿಹಾರ ಕೊಟ್ಟಿದ್ದಾರೆ. ಶೋಷಿತ–ಪೀಡಿತ ಸಮುದಾಯಗಳ ಯುವಜನರ ಅಭಿವೃದ್ಧಿಗೆ ಈ ಹಿಂದೆ ಯಡಿಯೂರಪ್ಪ ಸರ್ಕಾರ ವಿವಿಧ ಮಂಡಳಿಗಳ ಮೂಲಕ 550 ಕೋಟಿ ರೂ. ನೀಡಿದ್ದರು. ಸಿದ್ದರಾಮಯ್ಯ ಬಜೆಟ್ ಮಂಡಿಸುವುದಾದರೆ, ಕನಿಷ್ಠ ಒಂದು ಸಾವಿರ ಕೋಟಿ ರೂ. ನೀಡಲಿ, ಪರಿಶಿಷ್ಟ ವರ್ಗ, ಪಂಗಡ ಗಳಿಗೂ ಶಕ್ತಿ ತುಂಬಲಿ.

ಶಾಸಕರಿಗೆ ವಿದೇಶ ಪ್ರವಾಸ ಭಾಗ್ಯ ದಯಪಾಲಿಸಿದ ಮುಖ್ಯಮಂತ್ರಿ ಆರೋಗ್ಯ ಸಚಿವರನ್ನೂ ಆಸ್ಟ್ರೇಲಿಯಾ, ನ್ಯೂಜಿಲೆಂಡ್‌ಗೆ ಕಳುಹಿಸಿದರೆ ಬಡವರ ಪರಿಸ್ಥಿತಿ ಏನಾದೀತು.

ಗ್ರಾಮೀಣ ಭಾಗದ ಸರ್ಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಔಷಧಿ ಸಿಗದೇ ಬಡಜನರು ಪರದಾಡುತ್ತಿದ್ದಾರೆ, ಹಲವೆಡೆ ಶಸ್ತ್ರಚಿಕಿತ್ಸೆಗಳನ್ನು ಮುಂದೂಡಿದ ಮಾಹಿತಿ ಬರುತ್ತಿದೆ. ಆರೋಗ್ಯ ಇಲಾಖೆ ಸಚಿವರು ಹಾಗೂ ಮುಖ್ಯಮಂತ್ರಿ ಈ ಕುರಿತು ಗಮನ ಹರಿಸಿಲ್ಲ, ಔಷಧಿ ಸಮರ್ಪಕ ಸರಬರಾಜಿಗೆ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು.

ಪ್ರಧಾನಮಂತ್ರಿ ನರೇಂದ್ರ ಮೋದಿ ಜನಪ್ರಿಯತೆ ಸಹಿಸಲು ಸಾಧ್ಯವಾಗದೇ ಜನೌಷಧಿ ಕೇಂದ್ರಗಳಿಗೂ ಕಲ್ಲು ಹಾಕುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡಿತ್ತು, ಗ್ರಾಮೀಣ ಭಾಗದಲ್ಲಿ ಕೃತಕ ಔಷಧ ಕೊರತೆ ಸೃಷ್ಟಿಸಿ, ಟೆಂಡರ್ ಕರೆಯದೇ ಕಳ್ಳ ದಂಧೆ ಮೂಲಕ ತುರ್ತು ಖರೀದಿಗೆ ಸರ್ಕಾರ ಮುಂದಾಗಿದೆಯೇ ಎಂಬ ಅನುಮಾನ ಜನರಿಗೆ ಬರುವುದು ಸಹಜ ಎಂದರು.

ಯತೀಂದ್ರ ಕೂಡ ವಿಜಯೇಂದ್ರನಂತೆ ವಸೂಲಿಗೆ ಇಳಿದಿದ್ದಾನೆ: ಯತ್ನಾಳ್

ವಿಜಯಪುರ: ವಿಜಯೇಂದ್ರ ಹೇಗೆ ಯಡಿಯೂರಪ್ಪ ಸಿಎಂ ಇದ್ದಾಗ ವಸೂಲಿ ಮಾಡಿದ್ದ, ಹಾಗೆ ಸಿದ್ದರಾಮಯ್ಯ ಮಗ ಕೂಡ ವಿಜಯೇಂದ್ರನಂತೆ ವಸೂಲಿಗೆ ನಿಂತಿದ್ದಾನೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಾಗ್ದಾಳಿ ನಡೆಸಿದ್ದಾರೆ. ಜಿಲ್ಲೆಯಲ್ಲಿ ಮಾತನಾಡಿದ ಅವರು, ಯತೀಂದ್ರ ಕೂಡ ವಸೂಲಿ ಕಂಪನಿಯಾಗಿದ್ದಾನೆ. ವಿಜಯೇಂದ್ರ ಹೇಗೆ ಯಡಿಯೂರಪ್ಪ ಸಿಎಂ ಇದ್ದಾಗ ವಸೂಲಿ ಮಾಡಿದ್ದ. ಹಾಗೆ ಸಿದ್ದರಾಮಯ್ಯ ಮಗ ಕೂಡ ವಿಜಯೇಂದ್ರ ಹಾಗೆ ವಸೂಲಿಗೆ ನಿಂತಿದ್ದಾನೆ. ವಿಜಯೇಂದ್ರ ಕಡೆ ರಾತ್ರಿ ಟ್ರೈನಿಂಗ್ ತೆಗೆದುಕೊಳ್ಳುತ್ತಾನಂತೆ. ಹೇಗೆ ನಕಲಿ ಸಹಿ ಮಾಡಬೇಕು ಅಂತ ತಿಳಿಸಿಕೊಳ್ಳುತ್ತಿದ್ದಾನೆ ಟ್ರೈನಿಂಗ್ ಕೊಡುವ ಮಾಸ್ಟರ್ ನಮ್ಮವನೇ. ಹೀಗಾಗಿ ಸಿದ್ದರಾಮಯ್ಯ ಸಿಎಂ ಸ್ಥಾನ ಬಿಡುವುದಿಲ್ಲ, ಡಿಕೆಶಿ ಸಿಎಂ ಆಗುವುದಿಲ್ಲ. ವಿಧಾನಸಭೆ ವಿಸರ್ಜನೆ ನಿಶ್ಚಿತ ಎಂದಿದ್ದಾರೆ.



ಗದ್ದುಗೆ ಗುದ್ದಾಟ ಜಗಳ ವಿಧಾನಸಭೆ ವಿಸರ್ಜನೆವರೆಗೆ ಬಂದ್ರೆ ಆಶ್ಚರ್ಯ ಇಲ್ಲ. ಡಿಕೆಶಿ ಅವರಿಗೆ ಡೂ ಆರ್ ಡೈ ಇದೆ. ಸಿದ್ದರಾಮಯ್ಯ ಅವರಿಗೆ ಏನಿದೆ ಇನ್ನೊಮ್ಮೆ ಸಿಎಂ ಆಗಲ್ಲ, ಹೇಗಿದ್ರೂ ಮನೆಗೆ ಹೋಗುತ್ತೇನೆ ಅಂತಾ ಗೊತ್ತಿದೆ. ನನ್ನ ಮಗ ಅಂತೂ ಅಷ್ಟು ಯೋಗ್ಯನಲ್ಲ ಅಂತಾ ಗೊತ್ತಾಗಿದೆ. ವಿಸರ್ಜನೆ ಆಗೇ ಆಗುತ್ತೆ, ಮುಂದೆ ಮತ್ತೆ ಒಳ್ಳೆಯ ಸರ್ಕಾರ ಬರುತ್ತೆ. ರಾಜ್ಯದಲ್ಲಿ ನಡೆದಿರುವ ಭೂಕಬಳಿಕೆ, ಹಿಂದೂ ದೇವಸ್ಥಾನಗಳಿಗೆ ಕಲ್ಲು ಎಸೆಯುವುದು. ನಿನ್ನೆ ಒಂದು ಮೂರ್ತಿ ಭಗ್ನ ಮಾಡಿದ್ದಾರೆ. ಇದಕ್ಕೆಲ್ಲ ಶಾಶ್ವತ ಪರಿಹಾರ ಅಂದ್ರೆ ನಮ್ಮ ಜೆಸಿಬಿ ಒಂದೇ ಎಂದು ಹೇಳಿದ್ದಾರೆ.

ಬಾಗಲಕೋಟೆಯಲ್ಲಿ ಬೇರೆ ಕ್ಷೇತ್ರಗಳಲ್ಲಿ ಏನಾಗುತ್ತಿದೆ ಎಂಬುದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ, ನಿಮ್ಮ ಕ್ಷೇತ್ರದ ಬಗ್ಗೆ ತಲೆಕೆಡಿಸಿಕೊಳ್ಳಿ ಎಂಬ ವಿಜಯೇಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿ ಅವರು ಶಿಕಾರಿಪುರದ ಬಗ್ಗೆ ಅಷ್ಟೆ ತಲೆಕೆಡಿಸಿಕೊಳ್ಳಲಿ. ಶಿಕಾರಿಪುರನೇ ಅಲ್ಲಾಡುತ್ತಿದೆ, ಮೈಸೂರು ನಿಲ್ಲ ಬೇಕಾ, ತುಮಕುರು ನಗರಕ್ಕೆ ನಿಲ್ಲಬೇಕಾ, ರಾಜಾಜಿನಗರಕ್ಕೆ ನಿಲ್ಲಬೇಕಾ ಅಂತಾ ಓಡಾಡುತ್ತಿದ್ದಾನೆ. ಇಲ್ಲಿ ಬಂದು ಬಾಗಲ ಕೋಟೆಯವರು ವಿಜಯಪುರದ ಬಗ್ಗೆ, ವಿಜಯಪುರದವರು ಬಾಗಲಕೋಟೆ ಬಗ್ಗೆ ಮಾತನಾಡುವುದು ಬೇಡ ಅಂತಾ ಹೇಳ್ತಾನೆ. ಮೊದಲು ಶಿಕಾರಿಪುರ ಗಟ್ಟಿ ಮಾಡಿಕೊಳ್ಳಲಿ. ಯಾರಿಗಾದ್ರು ಮೊದಲು ಸಲಹೆ, ಮಾರ್ಗದರ್ಶನ ಮಾಡಬೇಕಾದ್ರೆ ಮೊದಲು ತಮ್ಮ ಕುರ್ಚಿ ಗಟ್ಟಿ ಇರಬೇಕು ಎಂದು ಕಾಲೆಳೆದಿದ್ದಾರೆ.

ಅಪರಾಧ ಪ್ರಕರಣಗಳ ಇಳಿಕೆ; ಮೈಸೂರು ಪೊಲೀಸರ ಬಗ್ಗೆ ಎಡಿಜಿಪಿ ಹರಿಶೇಖರನ್ ಮೆಚ್ಚುಗೆ

ಮೈಸೂರು, ಫೆ16(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ 2024 ಕ್ಕಿಂತ 2025 ರಲ್ಲಿ ಅಪರಾಧ ಪ್ರಕರಣಗಳ ಸಂಖ್ಯೆ ಇಳಿಮುಖಗೊಂಡಿರುವ ಬಗ್ಗೆ ಎಡಿಜಿಪಿ ಪಿ.ಹರಿಶೇಖರನ್ ಅವರು ಮೈಸೂರು ಪೊಲೀಸರ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಯ ಸಭಾಂಗಣದಲ್ಲಿ ಇಂದು ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ಎರಡು ವರ್ಷಗಳ ಅಪರಾಧ ಪ್ರಕರಣಗಳ ಕುರಿತಂತೆ ಅಂಕಿ ಅಂಶಗಳ ಮಾಹಿತಿ ಪಡೆದರು. ದರೋಡೆ, ಕಳ್ಳತನ ಸೇರಿದಂತೆ ಇತರೆ ಪ್ರಕರಣಗಳು ವರದಿ ಆಗಿರುವ ಬಗ್ಗೆ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು ಎಡಿಜಿಪಿ ಹರಿಶೇಖರನ್ ಅವರಿಗೆ ಅಂಕಿ ಅಂಶ ಸಹಿತ ಸಮಗ್ರ ವಿವರ ನೀಡಿದರು.

ಈ ವೇಳೆ ಮೈಸೂರು ನಗರದಲ್ಲಿ 2024 ಕ್ಕಿಂತ 2025 ರಲ್ಲಿ ಅಪರಾಧ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿದೆ. ಆದರೆ ಕಳೆದ ವರ್ಷಕ್ಕಿಂತ ಈ ವರ್ಷ ಅಪರಾಧ ಪ್ರಕರಣಗಳು ಮತ್ತಷ್ಟು ಕಡಿಮೆಯಾಗಬೇಕು. ಈ ನಿಟ್ಟಿನಲ್ಲಿ ಎಲ್ಲರೂ ಕಾರ್ಯೋನ್ಮುಖರಾಗಬೇಕು ಎಂದು ಹರಿಶೇಖರನ್ ಸೂಚನೆ ನೀಡಿದರು.

ಸಂಚಾರ ನಿಯಮ ಪಾಲನೆ ಬಗ್ಗೆ ಜನರಲ್ಲಿ ಪರಿಣಾಮಕಾರಿ ಜಾಗೃತಿ ಮೂಡಿಸಬೇಕು. ಅಪಘಾತಗಳಲ್ಲಿ ಮೃತಪಡುವವರ ಸಂಖ್ಯೆ ಕಡಿಮೆಯಾಗಬೇಕು. ಸಾರ್ವಜನಿಕರು ಸಂಚಾರ ನಿಯಮವನ್ನು ಕಟ್ಟು ನಿಟ್ಟಾಗಿ ಪಾಲನೆ ಮಾಡುವ ನಿಟ್ಟಿನಲ್ಲಿ ಕ್ರಮ ಜರುಗಿಸಬೇಕು ಎಂದು ಹೇಳಿದರು.



ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಸೋಮವಾರ ಎಡಿಜಿಪಿ ಪಿ.ಹರಿಶೇಖರನ್ ಅವರು ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದರು. ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿ ಸುಂದರ್ ರಾಜ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಸೈಬರ್ ಕ್ರೈಂ ಎಂಬುದು ಪ್ರತಿ ನಗರವನ್ನು ಕಾಡುತ್ತಿರುವ ದೊಡ್ಡ ಸಮಸ್ಯೆಯಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಸೈಬರ್ ಕ್ರೈ ಪ್ರಕರಣಗಳು ನಡೆಯದಂತೆ ಕ್ರಮ ವಹಿಸಬೇಕು ಎಂದು ತಿಳಿಸಿದರು.

ಡ್ರಗ್ಸ್ ಜಾಲವನ್ನು ಮಟ್ಟ ಹಾಕುವ ನಿಟ್ಟಿನಲ್ಲಿ ನೀವು ಕೈಗೊಳ್ಳುತ್ತಿರುವ ಮಾಹಿತಿ ನನಗೆ ದೊರೆಯುತ್ತಿದೆ. ಆದರೆ ಡ್ರಗ್ಸ್ ದಂಧೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಮತ್ತಷ್ಟು ಕ್ರಮವಹಿಸಿ ಎಂದು ಹರಿಶೇಖರನ್ ತಾಕೀತು ಮಾಡಿದರು. ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿ ಸುಂದರ್ ರಾಜ್ ಸೇರಿದಂತೆ ನಗರದ ಎಸಿಪಿಗಳು, ಇನ್ಸ್‌ಪೆಕ್ಟರ್‌ಗಳು ಸಭೆಯಲ್ಲಿ ಭಾಗಿಯಾಗಿದ್ದರು.

ರೌಡಿಶೀಟರ್, ಡ್ರಗ್ ಪೆಡ್ಲರ್ ಗಡಿಪಾರು

ಮೈಸೂರು,ಫೆ.16(ಪಿಎಂ)– ನಗರದಲ್ಲಿ ಮಾದಕ ವಸ್ತು ಜಾಲ ಹಾಗೂ ಅಪರಾಧ ಚಟುವಟಿಕೆಗಳ ಮಟ್ಟಹಾಕುವ ನಿಟ್ಟಿನಲ್ಲಿ ನಗರ ಪೊಲೀಸರ ಕಾರ್ಯಾಚರಣೆ ಮುಂದುವರೆದಿದೆ. ಗೂಂಡಾ ಕಾಯ್ದೆಯಡಿ ರೌಡಿಶೀಟರ್ ಒಬ್ಬನನ್ನು ಬಂಧಿಸಿ ಶಿವಮೊಗ್ಗ ಕೇಂದ್ರ ಕಾರಾಗೃಹಕ್ಕೆ ರವಾನಿಸಲಾಗಿದೆ. ಮತ್ತೊಂದು ಪ್ರಕರಣದಲ್ಲಿ ಮಾದಕ ವಸ್ತು ಜಾಲಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ಗಡಿಪಾರು ಮಾಡಲಾಗಿದೆ.

ವಿದ್ಯಾರಣ್ಯಪುರಂ ನಿವಾಸಿ ಗಣೇಶ್ ಅಲಿಯಾಸ್ ಗಣಪ (25) ಹಾಗೂ ಕೆಎನ್ ಪುರ ನಿವಾಸಿ ಮಂಜುನಾಥ ಅಲಿಯಾಸ್ ತೋಟಿ ಮಂಜ (51) ಮೈಸೂರು ನಗರದಿಂದ ಗಡಿಪಾರು ಶಿಕ್ಷೆಗೆ ಒಳಗಾದ ವರು. ರೌಡಿಶೀಟರ್ ಗಣೇಶ್, ಪದೇ ಪದೆ ಹೊಡೆದಾಟ, ಹಲ್ಲೆ, ಮಾರಣಾಂತಿಕ ಹಲ್ಲೆಯಂತಹ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದ. ಈತನ ವಿರುದ್ಧ ಮೇಲೆ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯಲ್ಲಿ 3 ಪ್ರಕರಣ, ಕೃಷ್ಣರಾಜ ಪೊಲೀಸ್ ಠಾಣೆಯಲ್ಲಿ 1 ಪ್ರಕರಣ, ಟಿ.ನರಸೀಪುರ ಪೊಲೀಸ್ ಠಾಣೆಯಲ್ಲಿ 1 ಪ್ರಕರಣ ಹಾಗೂ ಇಲವಾಲ ಪೊಲೀಸ್ ಠಾಣೆಯಲ್ಲಿ 1 ಪ್ರಕರಣ ಸೇರಿದಂತೆ ಒಟ್ಟು 6 ಪ್ರಕರಣಗಳು ದಾಖಲಾಗಿವೆ.

ಈತನ ರೌಡಿ ಚಟುವಟಿಕೆಗಳನ್ನು ನಿಗ್ರಹಿಸುವ ನಿಟ್ಟಿನಲ್ಲಿ ಗೂಂಡಾ ಕಾಯ್ದೆಯಡಿ ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿಗಳು ಮತ್ತು ಪೊಲೀಸ್ ಆಯುಕ್ತರು ಬಂಧನದ ಆದೇಶ ಹೊರಡಿಸಿದ್ದರು. ಅದರಂತೆ ಭಾನುವಾರ ಈತನನ್ನು ಪೊಲೀಸರು ಬಂಧಿಸಿ, ಶಿವಮೊಗ್ಗ ಕೇಂದ್ರ ಕಾರಾಗೃಹಕ್ಕೆ ರವಾನಿಸಿದ್ದಾರೆ.

ಪೆಡ್ಲರ್ ಗಡಿಪಾರು: ಮತ್ತೊಂದು ಪ್ರಕರಣದಲ್ಲಿ ಪದೇ ಪದೆ ಮಾದಕ ವಸ್ತು ಮಾರಾಟ ಮತ್ತು ಸಾಗಾಟ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಮಂಜುನಾಥ ಎಂಬಾತನನ್ನು ಬಂಧಿಸಿ ಗಡಿಪಾರು ಮಾಡಲಾಗಿದೆ. ಈತನ ವಿರುದ್ಧ ಉದಯಗಿರಿ ಪೊಲೀಸ್ ಠಾಣೆ ಹಾಗೂ ಲಷ್ಕರ್ ಪೊಲೀಸ್ ಠಾಣೆಯಲ್ಲಿ ತಲಾ ಒಂದು ಪ್ರಕರಣ, ಶಿವಮೊಗ್ಗ ಜಿಲ್ಲೆ ಭದ್ರಾವತಿ ಪೊಲೀಸ್ ಠಾಣೆಯಲ್ಲಿ 1 ಪ್ರಕರಣ ಸೇರಿದಂತೆ ಒಟ್ಟು 3 ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣಗಳು ದಾಖಲಾಗಿವೆ. ಅಲ್ಲದೆ, ಈತನ ವಿರುದ್ಧ ಮೈಸೂರು ನಗರದ ಸರಸ್ವತಿಪುರಂ ಪೊಲೀಸ್ ಠಾಣೆ, ವಿದ್ಯಾರಣ್ಯಪುರಂ ಪೊಲೀಸ್ ಠಾಣೆ, ಕುವೆಂಪು ನಗರ ಪೊಲೀಸ್ ಠಾಣೆ, ವಿಜಯನಗರ ಪೊಲೀಸ್ ಠಾಣೆ ಹಾಗೂ ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮನೆಗಳ್ಳತನ ಪ್ರಕರಣಗಳು ದಾಖಲಾಗಿವೆ. ಈತನ ಅಪರಾಧ ಕೃತ್ಯಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿಗಳು ಹಾಗೂ ಪೊಲೀಸ್ ಆಯುಕ್ತರು, ಗಡಿಪಾರು ಆದೇಶ ಹೊರಡಿಸಿದ್ದರು. ಅದರಂತೆ ಭಾನುವಾರ ಈತನನ್ನು ಬಂಧಿಸಿ ಶಿವಮೊಗ್ಗ ಜಿಲ್ಲೆ ಸಾಗರ ಟೌನ್ ಪೊಲೀಸ್ ಠಾಣಾ ವ್ಯಾಪ್ತಿಗೆ ಗಡಿಪಾರು ಮಾಡಲಾಗಿದೆ.

ನಕ್ಕರೆ ಅದೇ ಸ್ವರ್ಗ

ಮಗು : ಪಪ್ಪಾ ನಾನು ಸ್ಕೂಲಿಗೆ ಹೋಗಲ್ಲ, ಜಾಬ್ ಮಾಡ್ತಿನಿ
ತಂದೆ : ನೀನು ಓದಿರುವುದೇ ಯುಕೆಜಿ, ಏನ್ ಕೆಲಸ ಮಾಡ್ತಿಯೊ
ಮಗು : ಎಲ್‌ಕೆಜಿ ಹುಡುಗಿಯರಿಗೆ ಟ್ಯೂಷನ್ ಮಾಡ್ತಿನಿ.

ಮೈಸೂರು ಮಿತ್ರ
ಮಂಗಳವಾರ, ಫೆಬ್ರವರಿ 17, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ತೇಲುವ ಶವವನ್ನು ನೋಡಿದ ಮೇಲೆ ತಿಳಿಯಿತು.
ತೂಕ ಶರೀರದ್ದಲ್ಲ, ಉಸಿರಿನದು ಅಂತ!

ವೇದ ಸುಳ್ಳಾದರೂ { ಹೊರೆ ಹೊತ್ಕೊಂಡು
ಗಾದೆ ಸುಳ್ಳಾಗದು { ಗ್ರಹಗತಿ ಕೇಳ್ದಂಗೆ

ನಿಮ್ಮ ಪತ್ರಗಳು

ಬ್ಯಾಂಕ್ ಕನಿಷ್ಠ ಮೊತ್ತ: ಆರ್‌ಬಿಐ ಆದೇಶವಾಗಲಿ

ಮಾನ್ಯರೆ,

ಖಾಸಗಿ ಹಾಗೂ ಸರ್ಕಾರಿ ಬ್ಯಾಂಕುಗಳು ಈಗಲೂ ಉಳಿತಾಯ ಖಾತೆಯಲ್ಲಿ ಕನಿಷ್ಠ ಮೊತ್ತ ಇಲ್ಲ ಎಂಬ ಕಾರಣಕ್ಕೆ ದಂಡ ವಿಧಿಸುತ್ತಿದ್ದು, ಕೇವಲ 24–25ನೇ ಸಾಲಿನಲ್ಲೇ 4087 ಕೋಟಿ ರೂ. ದಂಡ ವಸೂಲಿ ಮಾಡಿರುವುದು ವರದಿಯಾಗಿದೆ. ಅಷ್ಟೇ ಅಲ್ಲದೆ ಮಹಿಳೆಯೊಬ್ಬರ ಖಾತೆಗೆ ಜಮೆಯಾದ ಮನ್ರೇಗಾದ ಐದು ನೂರು ರೂಪಾಯಿಗಳಲ್ಲಿ ರೂ 440 ಕಡಿತಗೊಳಿಸಿ ದಂಡ ವಸೂಲಿ ಮಾಡಿರುವುದು, ವ್ಯಕ್ತಿಯೊಬ್ಬರು ತಮ್ಮ ಮಗನ ಖಾತೆಯಲ್ಲಿ ಠೇವಣಿ ಇಟ್ಟಿದ್ದ 5 ಸಾವಿರ ಪೈಕಿ 2500 ರೂ. ಹಣ ದಂಡವಾಗಿ ಕಡಿತ ಮಾಡಿರುವುದೂ ವರದಿಯಾಗಿದೆ.

ಸಾರ್ವಜನಿಕರ ದುಡಿಮೆ ಹಣವನ್ನು ಬ್ಯಾಂಕ್‌ಗಳು ಈ ರೀತಿ ನಿಯಮದ ಹೆಸರಿನಲ್ಲಿ ಲೂಟಿ ಮಾಡುತ್ತಿವೆ. 2016–17ರಲ್ಲಿ ಕೂಡ ಬ್ಯಾಂಕ್‌ಗಳು ಉಳಿತಾಯ ಖಾತೆಯಲ್ಲಿ ಕನಿಷ್ಠ ಮೊತ್ತ ಇಲ್ಲ ಎಂಬ ಕಾರಣಕ್ಕೆ, ಗ್ರಾಹಕರಿಗೆ ಸೂಚನೆಯನ್ನೂ ನೀಡದೆ ಭಾರಿ ದಂಡ ವಿಧಿಸಿ ಹಲವು ತಿಂಗಳುಗಳ ಕಾಲ ದಂಡದ ಹೆಸರಿನಲ್ಲಿ ಗ್ರಾಹಕರ ಸಾವಿರಾರು ಕೋಟಿ ಹಣವನ್ನು ಲೂಟಿ ಮಾಡಿದ್ದವು. ಈ ಪೈಕಿ ದೇಶದ ದೊಡ್ಡ ಬ್ಯಾಂಕ್ ಎಂದು ಹೇಳಿಕೊಳ್ಳುವ ಎಸ್‌ಬಿಐ, ಒಂದೇ ಗ್ರಾಹಕರ ಸುಮಾರು 25 ಸಾವಿರ ಕೋಟಿ ಹಣವನ್ನು ಲೂಟಿ ಮಾಡಿತ್ತು.

ದೇಶಾದ್ಯಂತ ಈ ಬಗ್ಗೆ ಆಕ್ರೋಶ ವ್ಯಕ್ತವಾಗಿತ್ತು. ಆದರೂ ಬ್ಯಾಂಕ್ ಈ ದಂಡದ ಮೊತ್ತವನ್ನು ಗ್ರಾಹಕರಿಗೆ ವಾಪಸ್ ನೀಡಲಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದರೂ ಮೌನ ವಹಿಸಿತು. ಆರ್‌ಬಿಐ ಕ್ರಮ ವಹಿಸಲಿಲ್ಲ. ಇದೀಗ ಬೆಂಗಳೂರಿನ ಗ್ರಾಹಕರೊಬ್ಬರು ನೀಡಿದ ದೂರನ್ನು ಅಧರಿಸಿ ಲೋಕಸಭೆಯ ಅರ್ಜಿಗಳ ಸಮಿತಿಯು ಕನಿಷ್ಠ ಮೊತ್ತ ಇಲ್ಲವೆಂಬ ಕಾರಣಕ್ಕೆ ಬ್ಯಾಂಕ್‌ಗಳು ದಂಡ ವಿಧಿಸದಂತೆ ಶಿಫಾರಸ್ಸು ಮಾಡಿದ ವರದಿಯನ್ನು ಲೋಕಸಭೆಯಲ್ಲಿ ಮಂಡಿಸಿದೆ. ಸ್ಥಿರ ಠೇವಣಿಗಳ ಮೇಲೆ ಹೆಚ್ಚಿನ ಬಡ್ಡಿ ದರ ನೀಡಬೇಕು ಎಂದೂ ಅದು ಹೇಳಿದೆ.

ಅಷ್ಟೇ ಅಲ್ಲದೆ ಎಸ್‌ಬಿ ಖಾತೆಯಲ್ಲಿ ಒಂದು ತಿಂಗಳಿಗೂ ಅಧಿಕ ದಿನಗಳು ಇರುವ ಮೊತ್ತಕ್ಕೆ ಕನಿಷ್ಠ ವಾರ್ಷಿಕ ಶೇ.5ರಷ್ಟು ಬಡ್ಡಿ ನೀಡುವಂತೆ ಸರ್ಕಾರ ಆದೇಶ ನೀಡಲಿ. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಈಗ ಕೇವಲ ಶೇ.2.5ರಷ್ಟು ಬಡ್ಡಿ ನೀಡುತ್ತಿವೆ. ಪ್ರತಿ ತ್ರೈಮಾಸಿಕಕ್ಕೆ ಸಾವಿರಾರು ಕೋಟಿ ಲಾಭ ಗಳಿಸುವ ಬ್ಯಾಂಕ್‌ಗಳು ಎಸ್‌ಬಿ ಖಾತೆದಾರರಿಗೆ ಸರಿಯಾದ ಬಡ್ಡಿ ನೀಡದೆ ವಂಚಿಸುತ್ತಿವೆ. ಇವರಷ್ಟು ಆದಾಯ ವಿಲ್ಲದಿದ್ದರೂ ಅಂಚೆ ಇಲಾಖೆ ಎಸ್‌ಬಿ ಖಾತೆದಾರರಿಗೆ ಶೇ.4ಬಡ್ಡಿ ನೀಡುತ್ತಿದೆ. ಅರ್‌ಬಿಐ, ಹಣಕಾಸು ಇಲಾಖೆ, ಕೇಂದ್ರ ಸರ್ಕಾರ ಇಂತಹ ಅನ್ಯಾಯವನ್ನು ಸರಿಪಡಿಸಲು ಕ್ರಮವಹಿಸಲಿ. **–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.**

ಗ್ರಾಮ ಪಂಚಾಯಿತಿಗಳು ಪಟ್ಟಣ ಪಂಚಾಯತ್ ಮಾದರಿಯಾಗಲಿ

ಮಾನ್ಯರೆ,

ಕೆಲವು ದಿನಗಳ ಹಿಂದೆ ಪತ್ರಿಕೆಗಳಲ್ಲಿ ಉದ್ಯೋಗ ಖಾತ್ರಿ ಯೋಜನೆಗೆ ಸಂಬಂಧಿಸಿದ ಸಂಗಪ್ಪ ವರ್ಸಸ್ ಮಲ್ಲಪ್ಪ ಜಾಹಿರಾತು ನೋಡಿ ನಸುನಕ್ಕು. ಉದ್ಯೋಗ ಖಾತ್ರಿ ಯೋಜನೆ ಅನುಕೂಲಕ್ಕಿಂತ ದುರುಪಯೋಗ ಭ್ರಷ್ಟಾಚಾರ ಆಗಿದ್ದೆ ಹೆಚ್ಚು. ಸರ್ಕಾರಗಳು ಸಾರ್ವಜನಿಕರಿಗೆ ಅನುಕೂಲವಾಗಲಿ ಎನ್ನುವುದ ಕೋಸ್ಕರ ಹಲವು ಯೋಜನೆಗಳು, ಕಾಯ್ದೆಗಳು ರಚನೆ ಮಾಡುತ್ತಿವೆ.

ಆದರೆ ಆ ಯೋಜನೆ, ಕಾಯ್ದೆಗಳು ದುರುಪಯೋಗವಾಗುತ್ತಿದೆ. ಅಲ್ಲದೇ ಉದ್ಯೋಗ ಖಾತ್ರಿ ಯೋಜನೆ ಬಗ್ಗೆ ಹೇಳುವುದಾದರೆ ಹಳೆ ಕಲ್ಲು ಹೊಸ ಬಿಲ್ಲು ಅಷ್ಟೇ. ಗ್ರಾಮ ಪಂಚಾಯತ್ ಎಲ್ಲ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ಎನ್ನುವಂತಾಗಿದೆ. ಸಾಕಷ್ಟು ಗ್ರಾಮಗಳು 15,000ಕ್ಕೂ ಮೇಲ್ಪಟ್ಟ ಜನಸಂಖ್ಯೆ ಮೀರಿದರು ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆ ಗೇರಿಸಬೇಕಾಗಿತ್ತು. ಆದರೆ ಉದ್ಯೋಗ ಖಾತ್ರಿ ಯೋಜನೆ ತಪ್ಪುತ್ತದೆ ಎಂಬ ಮನೋಭಾವನೆಯಿಂದ ತಕರಾರು ತೆಗೆದು ಸರ್ಕಾರ ಮೇಲ್ದರ್ಜೆಗೇರಿಸುವುದನ್ನು ತಪ್ಪಿಸಿರುತ್ತಾರೆ. ಉದ್ಯೋಗ ಖಾತ್ರಿ ಯೋಜನೆಯ ಕಾಮಗಾರಿ ಬಗ್ಗೆ ಮಾಹಿತಿ ಹಕ್ಕು ಅಧಿನಿಯಮದಡಿ ಅರ್ಜಿ ಸಲ್ಲಿಸಿದರು ಅಧಿಕಾರಿಗಳು ಮಾಹಿತಿ ನೀಡುವು ದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಉದ್ಯೋಗ ಖಾತ್ರಿ ಯೋಜನೆ ಒಂದಿಲ್ಲೊಂದು ಸುದ್ದಿಯಲ್ಲಿದೆ. ಉದ್ಯೋಗ ಖಾತ್ರಿ ಯೋಜನೆ ಬದಲಾಗಿ ಪರ್ಯಾಯವಾಗಿ ಪಟ್ಟಣ ಪಂಚಾಯತ್ ಮಾದರಿ ಅನುದಾನ ಗ್ರಾಮ ಪಂಚಾಯಿತಿಗೆ ಒದಗಿಸಲು ರಾಜ್ಯ ಕೇಂದ್ರ ಸರ್ಕಾರ ಚಿಂತನೆ ನಡೆಸಬೇಕು. **–ವೀರೇಶ ಧೂಪದಮಠ**

ಬಸ್ ನಿಲ್ದಾಣ ನಿರ್ಮಿಸಿ

ಮಾನ್ಯರೆ,

ಮೈಸೂರು ನಗರದ ರಾಮಕೃಷ್ಣನಗರದಲ್ಲಿರುವ ರಾಮಕೃಷ್ಣ ವೃತ್ತದಿಂದ (ಆಂದೋಲನ ಸರ್ಕಲ್), ಕುವೆಂಪುನಗರದ ಕಾಂಪ್ಲೆಕ್ಸ್ ತನಕದ ಎಲ್ಲೂ ಬಸ್ ಪ್ರಯಾಣಿಕರ ತಂಗುದಾಣ ಇರುವುದಿಲ್ಲ. ಈ ಮುಖ್ಯ ರಸ್ತೆಯ ಅಮ್ಮ ಕಾಂಪ್ಲೆಕ್ಸ್ (ಮಾರ್ ಲ್ಯಾಬ್),



ಮುಂಭಾಗದ ರಸ್ತೆಯಲ್ಲೇ ಬಿಸಿಲು, ಮಳೆ, ಗಾಳಿ, ಚಳಿ ಎನ್ನದೆ ಮರದ ಕೆಳಗಡೆಯೇ ಕೆಎಸ್‌ಆರ್‌ಟಿಸಿ ಬಸ್ಸಿಗಾಗಿ ಹಿರಿಯ ನಾಗರಿಕರು, ಮಹಿಳೆಯರು ಮತ್ತು ಮಕ್ಕಳು ಕಾಯುತ್ತಿರುತ್ತಾರೆ. ಇದು ಸಾಕಷ್ಟು ಜನ ನಿಬಿಡ ಪ್ರದೇಶವಾಗಿರುವುದರಿಂದ ನೂರಾರು ಪ್ರಯಾಣಿಕರು ಇಲ್ಲಿಂದಲೇ ವಿವಿಧೆಡೆಗಳಿಗೆ ಪ್ರಯಾಣಿಸುತ್ತಾರೆ. ಈ ಮುಖ್ಯ ರಸ್ತೆಯ ಅಮ್ಮ ಕಾಂಪ್ಲೆಕ್ಸ್ ಬಳಿ ಸಾಕಷ್ಟು ಜಾಗವೂ ಇರುವುದರಿಂದ ಇಲ್ಲಿ ಬಸ್ ನಿಲ್ದಾಣ ನಿರ್ಮಿಸಿ, ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕು. ಈ ಬಗ್ಗೆ ನಗರಪಾಲಿಕೆ ಅಧಿಕಾರಿಗಳು ಸ್ಪಂದಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. **–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.**



ಡಾ. ಗುಬ್ಬಿಗೂಡು ರಮೇಶ್
ಮೊ. 97429 34512

ದೀಪ ಸಾಲು

ಐ ಆಮ್ ಸಾರಿ, ಪ್ಲೀಸ್ ಎಕ್ಸ್‌ಕ್ಯೂಸ್ ಮಿ...

ಒಮ್ಮೊಮ್ಮೆ ನಮ್ಮ ತಾಳ್ಮೆ, ನಮ್ಮ ಸಹಿಷ್ಣುತೆ, ಬೇರೆಯವರಿಗೆ ದೌರ್ಬಲ್ಯದಂತೆ ಕಾಣುತ್ತದೆ. ಗೂಳಿ ಗುಟುರು ಹಾಕಿದಂತೆ ಮಾತಾಡುವವರು ಹೀರೋಗಳಂತೆ ಕಾಣುತ್ತಿರುತ್ತಾರೆ. ಕಚೇರಿಯಲ್ಲಿ, ಒಮ್ಮೆ ನನ್ನ ಗೆಳೆಯನೊಬ್ಬ ಅವನ ಮೇಲಾಧಿಕಾರಿ ಕಪಾಳಕ್ಕೆ ಹೊಡೆದಂತೆ ಮಾತಾಡಿಬಿಟ್ಟಿದ್ದರು.


ಆತ ತುಂಬ ಸೂಕ್ಷ್ಮ, ದಕ್ಷ ಕೆಲಸಗಾರ, ಸಮಯದ ಪರಿವೆಯೇ ಇಲ್ಲದೆ ಕೆಲಸ ಮಾಡುತ್ತಿದ್ದ ಕೆಲಸಗಾರ ಮತ್ತೂ ಆತನ ಅಧಿಕಾರಿಯಾಗಿದ್ದ, ಪ್ರಾಮಾಣಿಕ, ದುಡ್ಡು ಮಾಡುವ ಅಯಕಟ್ಟಿನ ಜಾಗದಲ್ಲಿದ್ದರೂ ದುಡ್ಡು ಅವನ ಆದ್ಯತೆ ಆಗಿರಲಿಲ್ಲ. ನಿರುಪದ್ರವಿಜೀವಿ.

ಆದರೆ ಅವನ ಮೇಲಾಧಿಕಾರಿಗೆ ಕೂಡ ಅವನನ್ನು ಬಿಟ್ಟರೆ ಅನ್ಯ ಮಾರ್ಗವಿಲ್ಲ ಎಂಬಂತೆ ಅನಿವಾರ್ಯತೆ ಸೃಷ್ಟಿಯಾಗಿದ್ದಂತಹ ಅಧಿಕಾರಿ ಆತ. ಆದರೆ ಈತನಿಗಿಂತ ವಯೋಮಾನದಲ್ಲಿ ಚಿಕ್ಕವರಾದ ಮೇಲಾಧಿಕಾರಿಯೊಬ್ಬರು ಈತನಿಗೆ ಬಾಸ್ ಆಗಿ ಬಂದರು. ಅವರ ವೇಗಕ್ಕೆ ತಕ್ಕಂತೆ ಕೆಲಸ ಮಾಡುತ್ತಿದ್ದ ಈತನ ಮೇಲೆ ವಿನಾ ಕಾರಣ ಯಾರದೋ ಮೇಲಿನ ಕೋಪ ತಂದು ವಿಪರೀತ ಸ್ಟ್ರೆಸ್‌ಗೆ ಒಳಗಾಗಿ ಆ ಮೇಲಾಧಿಕಾರಿ ಈತನಿಗೆ ಎಲ್ಲರೆದರೆ ಬೈದು ಬಿಟ್ಟರು. ಆದರೆ ಕೆಲಸದಲ್ಲಿ, ಪರಿಣಿತ, ಶ್ರದ್ಧೆ, ಶಿಸ್ತು, ದಕ್ಷತೆ ಎಲ್ಲದರಲ್ಲೂ ಪರಿಪೂರ್ಣನಾಗಿದ್ದ ಈ ವ್ಯಕ್ತಿ ಮಾತ್ರ ಎಲ್ಲರೆದುರು ಆ ಮೇಲಾಧಿಕಾರಿಗೆ ತಿರುಗಿ ಮಾತಾಡದೆ ಎದ್ದು ಹೊರಟುಬಿಟ್ಟರು. ಆಚೆ ಬಂದ ಮೇಲೆ ಆತನ ಗೆಳೆಯರ ವೃಂದ ಮತ್ತೆ ಆತನನ್ನು ಹಂಗಿಸಿ ಮಾತಾಡಿದರು. ಅಲ್ಲಿ ನೀನೇಕೆ ತಿರುಗಿ ಮಾತನಾಡಲಿಲ್ಲ! ನನ್ನಂಥವನಾಗಿದ್ದರೆ, ಹಾಗೆ ಮಾಡುತ್ತಿದ್ದೆ, ಹೀಗೆ ಮಾತಾಡುತ್ತಿದ್ದೆ, ಸರಿಯಾಗಿ ಉತ್ತರ ಕೊಡುತ್ತಿದ್ದೆ, ಏನೆಂದು ತಿಳಿದುಕೊಂಡಿದ್ದಾರೆ ಅವರು, ಇಷ್ಟೆಲ್ಲಾ ಕೆಲಸ ಮಾಡಿಯೂ ಮುಖಕ್ಕೆ ಮಂಗಳಾರತಿ ಮಾಡಿಸಿಕೊಳ್ಳಬೇಕು ಎಂದರೆ ಯಾರಿಗೆ ತಾನೆ ಮನಸ್ಸು ಬರುತ್ತದೆ ಎಂಬಿತ್ಯಾದಿ ವೈಖರಿಗಳು, ವೀರಾವೇಶದ ನುಡಿಗಳು ಆ ವ್ಯಕ್ತಿಯನ್ನು ಕಂಗೆಡಿಸಿ ಮನಸ್ಸಿನ ಮೂಲೆ ಯಲ್ಲೆಲ್ಲೋ ಹೌದಲ್ಲಿ ನಾನು ಮಾತಾಡಬೇಕಿತ್ತು.

ನಾನೇಕೆ ಮೌನಿಯಾದೆ, ಕೆಲಸ ಮಾಡಿಯೂ ಬೈಸಿಕೊಳ್ಳುವುದು ಯಾವ ನ್ಯಾಯ, ಸುಖಾಸುಮ್ಮನೆ ವಿನಾ ಕಾರಣ ಯಾರಾದರೂ ನಮ್ಮನ್ನು ಹಂಗಿಸಿ ಹಿಂಸಿಸಿದಾಗ ಸುಮ್ಮನಿರುವುದು ಕೂಡ ದೌರ್ಬಲ್ಯವೇ ಅಲ್ಲವೇ? ನಮ್ಮ ಮನಸ್ಸಿಗೆ ಘಾಸಿಯಾದರೂ ನಮಗೆ ಅಪಮಾನವಾದರೂ ಸುಮ್ಮನಿರಬೇಕೇಕೆ? ಎದುರಿಗಿದ್ದ ಜನ ತಪ್ಪು ತಿಳಿಯುವುದಿಲ್ಲವೆ?

ಶಾಂತಿ, ಸಮಾಧಾನ, ಸಹೃದಯತೆಗಳು ಎಲ್ಲಿ ಪ್ರದರ್ಶನವಾಗಬೇಕು ಅಲ್ಲಿಯೇ ಪ್ರದರ್ಶನವಾಗಬೇಕಲ್ಲವೇ, ಮೌನ ನಮ್ಮ ದೌರ್ಬಲ್ಯವಲ್ಲ. ನಮ್ಮ ಸ್ವಭಾವ ಎನ್ನುವುದು ಇಂಥವರಿಗೆ ಅರ್ಥವಾಗುವುದಾದರೂ ಯಾವಾಗ? ಹೀಗೆ ಎಡೆಬಿಡದ ಪ್ರಶ್ನೆಗಳು ಮನಸ್ಸನ್ನು ಬಾಧಿಸುತ್ತಿರುವಾಗ ಆಕಸ್ಮಿಕವಾಗಿ ನಾನವರನ್ನು ಭೇಟಿಯಾದೆ, ಮಾನವದನರಾದ ಅವರು ನನ್ನನ್ನು ಒಂದು ಪ್ರಶ್ನೆ ಕೇಳಿದರು. ಸಹನೆ ದೌರ್ಬಲ್ಯವಾ? ಶಕ್ತಿಯಾ ಅಂತ.

ನಾನು ಏನೋ ಹೇಳುವಷ್ಟರಲ್ಲಿ ಅವರ ಮೊಬೈಲ್‌ನ ಮೆಸೇಜ್ ಇನ್‌ಬಾಕ್ಸ್‌ಗೆ ರಳ್ ಅಂತ ಒಂದು ಮೆಸೇಜ್ ಬಂದು ಅವರು ನನ್ನ ಮಾತಿಗಾಗಿ ಕಾಯುತ್ತ ಹಾಗೆಯೇ ಮೊಬೈಲ್‌ನಲ್ಲಿ ಬಂದ ಮೆಸೇಜ್ ಕಡೆಗೆ ಕಣ್ಣು ಹಾಯಿಸಿದರು. ಆ ಮೆಸೇಜಿನಲ್ಲಿ ಅಂಥಾದ್ದೇನಿತ್ತು ಎಂದು ನನಗೆ ಅರ್ಥವಾಗಲಿಲ್ಲ. ಆದರೆ ಅವರ ಮುಂಗೈ ನನ್ನ ಅಂಗೈಯನ್ನು ಗಟ್ಟಿಯಾಗಿ ಹಿಡಿದುಕೊಂಡು ಜೋರಾದ ನಿಟ್ಟುಸಿರೊಂದನ್ನು ಎಳೆದುಕೊಂಡರು. ಒಮ್ಮೆ ಜೋರಾಗಿ ನಕ್ಕುಬಿಟ್ಟರು. ನಾನು ಏನಾಯ್ತು? ಎಂದೆ ಅವರು ಅವರ ಮೊಬೈಲ್‌ನ ಮೆಸೇಜ್ ಇನ್‌ಬಾಕ್ಸಿನಲ್ಲಿದ್ದ ಮೆಸೇಜಿನ




> ಬುದ್ಧನಂತಹ ಅಪ್ರತಿಮ ಅರಿವಿನ ಗುರುವಿಗೇ ತಾಳ್ಮೆ ಎನ್ನುವುದು ಅನುರೂಪವಾಗಿತ್ತು ಎಂದ ಮೇಲೆ, ಹೊಲ ಗದ್ದೆಗಳಲ್ಲಿ, ಕಚೇರಿಗಳಲ್ಲಿ, ಸೋಶಿಯಲ್ ಮೀಡಿಯಾದಲ್ಲಿ, ಮನೆಗಳಲ್ಲಿ, ಕಾರ್ಪೊರೇಟರ್ ಸಂಸ್ಥೆಗಳಲ್ಲಿ ಕೆಲಸ ಮಾಡುವಾಗ ಒತ್ತಡಕ್ಕೆ ಒಳಗಾಗಿಯೇ, ಮಾಹಿತಿ ಕೊರತೆಯಿಂದಲೋ, ಅಸಹನೀಯ ಸಾಂದರ್ಭಿಕ ಕಾರಣಗಳಿಂದಲೋ ಏನೋ ಮೇಲಾಧಿಕಾರಿಗಳೋ, ದೊಡ್ಡವರೆನ್ನಿಸಿಕೊಂಡವರೋ, ಮಾಲೀಕರೋ, ಅಪ್ಪನೋ, ಅಮ್ಮನೋ, ಅಣ್ಣನೋ, ಅಕ್ಕನೋ, ಯಾರೋ ಒಬ್ಬರು ಏನಾದರು ಮನಸ್ಸಿಗೆ ನೋವಾಗುವಂಥ ಮಾತಾಡಿದಾಗ ನಾವೂ ತಿರುಗಿ ಅದನ್ನೇ ಉಲ್ಟಾ ಸೀದಾ ಬಾರಿಸಿ ಮಾತಿನಲ್ಲೇ ವಾಪಸ್ಸು ಕೊಟ್ಟು ವೀರಾಧೀವೀರರಾದರೆ ಅಲ್ಲಿಗೆ ಇಬ್ಬರ ಸಂಬಂಧವೂ ಹಾಳಾಗುತ್ತದೆ.

ತುಣುಕೊಂದನ್ನು ತೆರೆದು ತೋರಿಸಿದರು. ಅದರಲ್ಲಿ I am sorry sir please excuse me ಎಂಬ ಮೆಸೇಜು ಕಾಣುತ್ತಿತ್ತು. ಅದನ್ನು ಕಳಿಸಿದವರು ಬುದ್ಧಿವಂತ ಐ.ಎ.ಎಸ್ ಅಧಿಕಾರಿ, ಅದು ಬಂದಿದ್ದು ಸಂವೇದನಾಶೀಲ ಸೂಕ್ಷ್ಮ ಕಿರಿಯ ಮನಸ್ಸಿನ ಅವರ ಕೈಕೆಳಗೆ ಕೆಲಸ ಮಾಡುವ ಹಿರಿಯ ಸಹೋದ್ಯೋಗಿಗೆ. ಅಲ್ಲಿಗೆ ನನಗೆ ಮಾತ ನಾಡುವ ಅವಕಾಶವೇ ಬರಲಿಲ್ಲ. ಬೇಸರವಾಗಿದ್ದ ಮನಕ್ಕೆ ಬೇಸರ ಮಾಡಿದ್ದವರೇ ಸಮಾಧಾನದ ತಂಪೆರೆದು ತನಗೆ ಅಧಿಕಾರದ ಜೊತೆ ಸಹೃದಯತೆ ಕೂಡ ಇದೆ, ತಪ್ಪನ್ನು ತಿದ್ದಿಕೊಂಡು ನೊಂದುಕೊಂಡವರ ಮನಸ್ಸನ್ನು ಸರಿ ಮಾಡುವ ಸೂಕ್ಷ್ಮತೆಯೂ ಇದೆ. ವಯಸ್ಸಿನಲ್ಲಿ ಕಿರಿತನವಿದ್ದರೂ, ಆಲೋಚನೆಯಲ್ಲಿ ಹಿರಿತನವಿದೆ ಎಂಬುದನ್ನು ತೋರಿಸಿ ಕೊಟ್ಟಿದ್ದರು. ಅಲ್ಲಿಗೆ ಇವರ ತಾಳ್ಮೆ, ಗೆದ್ದಿತ್ತು, ಸಹನೆ ಸಾಕ್ಷಿಯಾಗಿತ್ತು. ಮಾತು ಬೆಳ್ಳಿ ಮೌನ ಬಂಗಾರ ಎಂಬ ಮಾತು ಘನತೆಯಿಂದ ಅವರನ್ನು ಗೆಲ್ಲಿಸಿತ್ತು. ಆ ಐಎಎಸ್ ಅಧಿಕಾರಿ ಇದನ್ನು ಅಲ್ಲಿಗೇ ಬಿಡಲಿಲ್ಲ. ಇವರನ್ನು ಕರೆದು ಗೌತಮಬುದ್ಧ ಅನುಭವಿಸಿದ ಇಂಥದ್ದೇ ಮುಜುಗರದ ಕತೆ ಹೇಳಿದರು.

ಹೆಂಡತಿ ಯಶೋಧರೆ, ಪುತ್ರ ರಾಹುಲ ನನ್ನ ಬಿಟ್ಟು ರಾಜತ್ವದಿಂದ ವೈರಾಗ್ಯದ ಕಡೆಗೆ ಹೊರಟ ಸಿದ್ಧಾರ್ಥನನ್ನು ಬುದ್ಧನ ಅವತರಣಿಕೆಯಾಗಿ ಸಮಾಜ ಕೂಡ ಸ್ವೀಕರಿಸಲಿಲ್ಲ. ಕೆಲವರು ಬುದ್ಧನನ್ನು ಅಪಮಾನಿಸಿ ಮುಜುಗರಗೊಳಿಸಿದರು ಎಂಬುದಕ್ಕೆ ಸಿದ್ಧಾರ್ಥ ಬುದ್ಧನಾದ ಮೇಲೆ ಪಾಟಲೀಪುತ್ರದ ಬೀದಿಯಲ್ಲಿ ತನ್ನ ಶಿಷ್ಯರೊಂದಿರೊಡಗೂಡಿ ತೆರಳುತ್ತಿರುವಾಗ ಮಾರ್ಗ ಮಧ್ಯದಲ್ಲಿ ಶಿಷ್ಯನೊಬ್ಬ ಗುರುಗಳಿಗೆ ಹಸಿವು ಎಂದನಂತೆ. ಅದೇ ಬೀದಿಯಲ್ಲಿ ವಾಸವಿದ್ದ ಅನುಕೂಲಸ್ಥರೊಬ್ಬರ ಮನೆಯ ಮುಂದೆ ಎರಡೂ ಕೈನೀಡಿ ಬೇಡಿದ ಗೌತನಬುದ್ಧನಿಗೆ ಎಂಥ ಮುಜುಗರ ಕಾದಿತ್ತು ಎಂದರೆ ಆ ಮನೆಯ ಜನ ಜತ್ವ, ಶ್ರೀಮಂತಿಕೆ ಅಧಿಕಾರ ತ್ಯಜಿಸಿ ಹೀಗೆ ಬೌದ್ಧ ಭಿಕ್ಷುವಾಗಿ ಪರಿವರ್ತಿತವಾದ ಬುದ್ಧನ ಬದಲಾವಣೆ ಆ ಜನಕ್ಕೆ ಇಷ್ಟವಾಗುವುದಿಲ್ಲ. ಕೈನೀಡಿ ಬೇಡಿದ ಬುದ್ಧನ ಕೈಗೆ ಎಂಜಲು ಉಗುಳಿ ಇದೇ ನಮ್ಮ ಭಿಕ್ಷೆ ಎನ್ನುತ್ತಾ ರಾಜನಾಗಿದ್ದವನು ಹೀಗಾಗಬೇಕಿತ್ತೆ ಎನ್ನುವ ನೆಟ್ಟ ನೋಟದಲ್ಲಿ ಬುದ್ಧನನ್ನು ನೋಡುತ್ತಾರೆ. ಬುದ್ಧ ವಿಚಲಿತಗೊಳ್ಳಲಿ, ಅಪಮಾನಿತನಾಗಲಿ, ಮತ್ತೆ ಪ್ರತೀಕಾರದಿಂದ ರಾಜಪ್ರಭುತ್ವದ ಕಡೆಗೆ ತೆರಳಿ ಬುದ್ಧತ್ವಕ್ಕೆ ವಿಮುಖನಾಗಿ ಸಿದ್ಧಾರ್ಥನಾಗಲಿ ಎನ್ನುವ ತವಕದಲ್ಲಿ ಹಾಗೆ ಮಾಡುತ್ತಾರೆ, ಆದರೆ ಬುದ್ಧ ಅವರು ಉಗುಳಿದ ಎಂಜಲನ್ನು ತನ್ನ ಬಟ್ಟೆಗೆ ಒರೆಸಿಕೊಂಡು ನೀವು ಕೊಟ್ಟ ಎಂಜಲಿನ ಭಿಕ್ಷೆ ನನಗಾಯಿತು. ಈಗ ಹಸಿದ ನನ್ನ ಶಿಷ್ಯಂದಿರಿಗೇನಾದರೂ ಕೊಡಿ ಎಂದು ಮತ್ತೆ ಕೈಚಾಚುತ್ತಾನೆ. ಆದರೆ ಕೈಚಾಚಿದ ಗೌತಮ ಬುದ್ಧನ ಕೈಗೆ ಭಿಕ್ಷೆ ನೀಡಲು ಅಲ್ಲಿ ನಿಂತಿದ್ದವರೆಲ್ಲ ಬುದ್ಧನ ಪ್ರಬುದ್ಧತೆ, ಶಾಂತಿ, ಸಮಾಧಾನ, ಸಹನೆ, ತಾಯ್ತನ. ಉದ್ವಿಗ್ನತೆಗೊಳಗಾಗದೇ ಗೆದ್ದು ನಿಂತ ಆತ್ಮಶಕ್ತಿಗಳ ಮುಂದೆ ನಿಲ್ಲಲಾಗದೆ ಅಲ್ಲಿದ್ದವರೆಲ್ಲ ಬುದ್ಧನ ಪಾದಗಳ ಮೇಲೆ ಬಿದ್ದು ಪಶ್ಚಾತ್ತಾಪದ ಕಣ್ಣೀರಿನಲ್ಲಿ ತೊಯ್ದು ತೊಪ್ಪೆಯಾಗಿರುತ್ತಾರೆ. ನಂತರ ಅವರ ತಪ್ಪಿನ ಅರಿವಾಗಿ ಅರಿವಿಗೆ, ಗುರುವಿಗೆ, ಸಹನೆಗೆ ಇರುವ ಶಕ್ತಿ ಎಂಥದ್ದು ಎಂಬುದಕ್ಕೆ ಮನಸೋತು ಬುದ್ಧನ ಅನುಯಾಯಿಗಳಾಗುತ್ತಾರೆ. ಅದಕ್ಕೇ 'ಬುದ್ಧಂ ಶರಣಂ ಗಚ್ಛಾಮಿ' ಎನ್ನುವುದು. ಬುದ್ಧನಂತಹ ಅಪ್ರತಿಮ ಅರಿವಿನ ಗುರುವಿಗೇ ತಾಳ್ಮೆ ಎನ್ನುವುದು ಅನುರೂಪವಾಗಿತ್ತು ಎಂದ ಮೇಲೆ, ಹೊಲ ಗದ್ದೆಗಳಲ್ಲಿ, ಕಚೇರಿಗಳಲ್ಲಿ, ಸೋಶಿಯಲ್ ಮೀಡಿಯಾದಲ್ಲಿ, ಮನೆಗಳಲ್ಲಿ, ಕಾರ್ಪೊರೇಟರ್ ಸಂಸ್ಥೆಗಳಲ್ಲಿ ಕೆಲಸ ಮಾಡುವಾಗ ಒತ್ತಡಕ್ಕೆ ಒಳಗಾಗಿಯೇ, ಮಾಹಿತಿ ಕೊರತೆಯಿಂದಲೋ, ಅಸಹನೀಯ ಸಾಂದರ್ಭಿಕ ಕಾರಣಗಳಿಂದಲೋ ಏನೋ ಮೇಲಾಧಿಕಾರಿಗಳೋ, ದೊಡ್ಡವರೆನ್ನಿಸಿ ಕೊಂಡವರೋ, ಮಾಲೀಕರೋ, ಅಪ್ಪನೋ, ಅಮ್ಮನೋ, ಅಣ್ಣನೋ, ಅಕ್ಕನೋ, ಯಾರೋ ಒಬ್ಬರು ಏನಾದರು ಮನಸ್ಸಿಗೆ ನೋವಾಗುವಂಥ ಮಾತಾಡಿದಾಗ ನಾವೂ ತಿರುಗಿ ಅದನ್ನೇ ಉಲ್ಟಾ ಸೀದಾ ಬಾರಿಸಿ ಮಾತಿನಲ್ಲೇ ವಾಪಸ್ಸು ಕೊಟ್ಟು ವೀರಾಧೀವೀರರಾದರೆ ಅಲ್ಲಿಗೆ ಇಬ್ಬರ ಸಂಬಂಧವೂ ಹಾಳಾಗುತ್ತದೆ. ಕೆಲಸ ಮಾಡುವ ಜಾಗದಲ್ಲಿ ಆತಂಕದ ವಾತಾವರಣಕ್ಕೆ ನಾವೇ ನಮ್ಮನ್ನು ಸಿಕ್ಕಿಸಿ ತೂಗು ಹಾಕುತ್ತೇವೆ. ಉತ್ತಮ ಬಾಳುವೆಗೆ, ನಿರಂತರ ಆದರಗಳಿಗೆ ಹಾಸುಹೊಕ್ಕಾಗುವುದು ನಮ್ಮ ತಾಳ್ಮೆ, ನಮ್ಮ ಸಹನೆ, ಕ್ಷಮಯಾ ಧರಿತ್ರಿ ಭೂಮಿಯಂಥ ಕ್ಷಮಾಗುಣ ನಮ್ಮನ್ನು ಆವರಿಸಿದರೆ, ನಮ್ಮ ಮನಸ್ಸೆಂಬ ಮೆಸೇಜ್ ಬಾಕ್ಸಿನಲ್ಲಿ ತಪ್ಪು ಮಾಡಿದವರ ಕ್ಷಮೆಯ ಕುಲುಮೆ ಒಂದಿಲ್ಲೊಂದು ದಿನ ಒಂದಿಲ್ಲೊಂದು ಕ್ಷಣ ತನ್ನ ಅಕ್ಷರದ ಅಚ್ಚಿನ ಮನೆಯಲ್ಲಿ ಕುಟ್ಟುತ್ತಲೇ ಇರುತ್ತದೆ. am sorry please excuse me ಅಂತ! ಏನಂತೀರಿ?

ಸ್ವಾಗತ...



ಕೆಎಸ್‌ಎಂಸಿಎ ಸಂಸ್ಥೆಯ ನೂತನ ವ್ಯವಸ್ಥಾಪಕ ನಿರ್ದೇಶಕರಾಗಿ ಬಿ.ಆನಂದ್ ಅಧಿಕಾರ ವಹಿಸಿಕೊಂಡ ಸಂದರ್ಭ ಕಾರವಾರ ಶಾಸಕರೂ ಆದ ಕೆಎಸ್‌ಎಂಸಿಎ ಅಧ್ಯಕ್ಷ ಸತೀಶ ಕೃಷ್ಣ ಸೈಲ್ ಸ್ವಾಗತಿಸಿದರು.

ವಿದ್ಯಾರ್ಥಿಗಳ ಶುಲ್ಕ ಶೈಕ್ಷಣಿಕ ಅಭಿವೃದ್ಧಿಗೆ ಬಳಕೆ

ಮೈಸೂರು, ಫೆ.16(ಎಸ್‌ಪಿಎನ್)– 2025–26ನೇ ಸಾಲಿನಲ್ಲಿ ವಿವಿಧ ಜಿಲ್ಲೆಗಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುವ ಸರ್ಕಾರ ನಿಗದಿಪಡಿಸಿರುವ ಎಲ್ಲಾ ಶುಲ್ಕಗಳನ್ನು ವಾರ್ಷಿಕ ಸಾಂಸ್ಥಿಕ ಅಭಿವೃದ್ಧಿ ಯೋಜನೆಯಡಿ ಶೈಕ್ಷಣಿಕ ಅಭಿವೃದ್ಧಿಗೆ ಉಪಯೋಗಿಸುವಂತೆ ಅನುಮತಿ ನೀಡಿ ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರ ಕಚೇರಿ ಆದೇಶಿಸಿದೆ.

2022–23ನೇ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿಗಳಿಂದ ಶುಲ್ಕಗಳನ್ನು ಸಂಗ್ರಹಿಸಲು ಹಾಗೂ ಸದರಿ ಶುಲ್ಕಗಳನ್ನು ಆಯಾಯ ಕಾಲೇಜುಗಳಲ್ಲಿ ಖಾತೆಗಳಲ್ಲಿ ಉಳಿಸಿಕೊಂಡು ಹಾಗೂ ಈಗಾಗಲೇ ಕಾಲೇಜು ಹಂತದಲ್ಲಿ ಬಳಸಿಕೊಳ್ಳಲಾಗುತ್ತಿರುವ ಅರೆ ಸರ್ಕಾರಿ ಶುಲ್ಕಗಳನ್ನು (ಸಿಡಿಸಿ ಹೊರತುಪಡಿಸಿ) ವಾರ್ಷಿಕ ಸಾಂಸ್ಥಿಕ ಅಭಿವೃದ್ಧಿ ಯೋಜನೆಯಡಿ ಅನುಮೋದನೆಗೊಂಡಿರುವ (ಪ್ರಾಂಶುಪಾಲರ ದೃಢೀಕೃತ ಪ್ರಸ್ತಾವನೆಗಳು) ಶುಲ್ಕದ ವಿವರಗಳನ್ನೊಳಗೊಂಡ 195 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅಭಿವೃದ್ಧಿಗೆ ಈ ಶುಲ್ಕವನ್ನು ಬಳಸಿಕೊಳ್ಳುವಂತೆ ಷರತ್ತು ವಿಧಿಸಿ ಅನುಮತಿ ನೀಡಲಾಗಿದೆ. ಅಂತೆಯೇ 2025–26ನೇ ಸಾಲಿನ ಕ್ರಿಯಾ ಯೋಜನೆ ಸಿದ್ದಪಡಿಸುವುದು ಇಲಾಖೆ ವರದಿ ನೀಡುವುದು ಕಡ್ಡಾಯವಾಗಿದೆ.

ಮೈಸೂರು 8, ಮಂಡ್ಯ 4, ಚಾಮರಾಜನಗರ 4, ಹಾಸನ 9 ಹಾಗೂ ಕೊಡಗು ಜಿಲ್ಲೆ 4 ಕಾಲೇಜು ಸೇರಿದಂತೆ ಒಟ್ಟು 195 ಕಾಲೇಜುಗಳ ಶುಲ್ಕವನ್ನು ಆಯಾಯ ಕಾಲೇಜು ಅಭಿವೃದ್ಧಿಗೆ ಬಳಸಿಕೊಳ್ಳುವಂತೆ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರು ಸೂಚಿಸಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ಮೈಸೂರು,ಫೆ.16–ಚಂದ್ರಮೌಳೇಶ್ವರ ವಿದ್ಯುತ್ ಮಾರ್ಗಗಳಲ್ಲಿ ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ಫೆ.18 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಕೆ.ಡಿ.ರಸ್ತೆ, ಆದಿಪಂಪಾ ರಸ್ತೆ, ಪಂಚವಟಿ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಆರ್ಕಿಯಲಾಜಿ ವಿದ್ಯುತ್ ಮಾರ್ಗದ ವಾಣಿ ವಿಲಾಸ ಲೇಔಟ್, ರೈಲ್ವೆ ಲೇಔಟ್, ಎಂ.ಜಿ.ಕೊಪ್ಪಲು, ಅಭಿಷೇಕ್ ವೃತ್ತ, ಅಂಬರೀಷ್ ರಸ್ತೆ, ಸೂರ್ಯ ಫರ್ನಿಚರ್ ಹಾಗೂ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಎಐ ಅಳವಡಿಕೆಯಿಂದ ಕೃಷಿ ಭವಿಷ್ಯ ಉಜ್ವಲ

ಮಂಡ್ಯ ಕೃಷಿ ವಿವಿ ವಿಶೇಷ ಅಧಿಕಾರಿ ಡಾ.ಕೆ.ಎಂ.ಹರಿಣಿ ಕುಮಾರ್ ಅಭಿಪ್ರಾಯ

ಮೈಸೂರು,ಫೆ.16(ಎಂಟಿವೈ)–ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ(ಎಐ) ಅಳವಡಿಸುವ ಮೂಲಕ ಕೃಷಿ ಭವಿಷ್ಯವನ್ನು ಉಜ್ವಲಗೊಳಿಸಬಹುದು ಎಂದು ಮಂಡ್ಯ ಕೃಷಿ ವಿಶ್ವವಿದ್ಯಾನಿಲಯದ ವಿಶೇಷ ಅಧಿಕಾರಿ ಡಾ.ಕೆ.ಎಂ.ಹರಿಣಿ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಭಾರತೀಯ ಭಾಷಾ ಸಂಸ್ಥೆಯ ಸಭಾಂಗಣದಲ್ಲಿ ರೇಡಿಯೋ ಕಿಸಾನ್ ದಿನದ ಅಂಗವಾಗಿ 'ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಬಳಕೆ ಹಾಗೂ ಕೃಷಿ ನವೋದ್ಯಮ' ಕುರಿತು ಆಯೋಜಿಸಿದ್ದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಕೃತಕ ಬುದ್ಧಿಮತ್ತೆ ಎಲ್ಲಾ ಕ್ಷೇತ್ರಗಳಲ್ಲೂ ಪ್ರವರ್ಧಮಾನಕ್ಕೆ ಬರುತ್ತಿದ್ದು, ಅದನ್ನು ಕೃಷಿ ಕ್ಷೇತ್ರದಲ್ಲೂ ಅಳವಡಿಸಿಕೊಳ್ಳಬಹುದಾಗಿದೆ ಎಂದರು.

ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಅಳವಡಿಸಿಕೊಂಡರೆ ಕೃಷಿ ಕ್ಷೇತ್ರ ಉಜ್ವಲಗೊಳಿಸಬಹುದಾಗಿದೆ. ಭಾರತದ ಕೃಷಿ ಭೂಮಿ ಅತ್ಯಂತ ಹೆಚ್ಚಿನ ಫಲವತ್ತ ಭೂಮಿಯಾಗಿದ್ದು, ಸ್ವರ್ಗದ ಭೂಮಿ ಎನಿಸಿದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಕೃಷಿಯಲ್ಲಿ ರಾಸಾಯನಿಕ ಪದಾರ್ಥಗಳ ಮಿತಿ ಮೀರಿದ ಬಳಕೆಯಿಂದಾಗಿ ಭೂಮಿಯ ಫಲವತ್ತತೆ ಕಳೆದುಕೊಳ್ಳುವಂತಾಗುತ್ತಿದೆ. ಇದರಿಂದ ನಾವು ಅದನ್ನು ನರಕದ ಭೂಮಿಯಾಗಿ ಬದಲಾವಣೆ ಮಾಡುತ್ತಿದ್ದೇವೆ ಎಂದು ವಿಷಾದಿಸಿದರು.

ಕೃಷಿ ಕ್ಷೇತ್ರವು ದೇಶದ ಸಾಮಾಜಿಕ ಆರ್ಥಿಕ ವ್ಯವಸ್ಥೆಯ ಅಡಿಪಾಯವಾಗಿದೆ. ಗ್ರಾಮೀಣ ಬದುಕು ಕೃಷಿಯಿಂದಲೇ ನಡೆಯುತ್ತಿದೆ. ಆಹಾರ ಭದ್ರತೆ ಹಾಗೂ ವಿವಿಧ ರೀತಿಯ ಆಹಾರ ಸಂಸ್ಕರಣೆಯಿಂದ ಅತಿ ಹೆಚ್ಚು ಉದ್ಯೋಗವನ್ನು ಸೃಷ್ಟಿಸಬಹುದು. ಕೃಷಿ ಕ್ಷೇತ್ರ ಜನಸಂಖ್ಯೆಯ ಶೇ.46ರಷ್ಟು ಜನರಿಗೆ ನೇರ ಮತ್ತು ಪರೋಕ್ಷವಾಗಿ ಉದ್ಯೋಗ ಒದಗಿಸುತ್ತಿದೆ. ಒಟ್ಟು ದೇಶಿಯ ಉತ್ಪನ್ನಕ್ಕೆ ಶೇ.18 ರಷ್ಟು ಜಿಡಿಪಿಯನ್ನು ಕೃಷಿ ಕ್ಷೇತ್ರ ಕೊಡುಗೆಯಾಗಿ ನೀಡುತ್ತಿದೆ. ಈ ಹಿನ್ನೆಲೆಯಲ್ಲಿ ಕೃಷಿಯನ್ನು ನಂಬಿ ನಡೆಯುವ ಕೈಗಾರಿಕೆಗಳು ಆರ್ಥಿಕವಾಗಿ ಸದೃಢವಾಗಲು ಹೊಸ ಆಯಾಮಗಳನ್ನು ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಆಕಾಶವಾಣಿಯ ಸಹಾಯಕ ನಿರ್ದೇಶಕ ಮಂಜುನಾಥ್ ಎನ್.ಬೇದ್ರೆ ಮಾತನಾಡಿ, ಕೃಷಿ ಕ್ಷೇತ್ರಕ್ಕೆ ಆಕಾಶವಾಣಿ ಪ್ರಾಮುಖ್ಯತೆ ನೀಡುತ್ತಾ ಬಂದಿದೆ. ಆಕಾಶವಾಣಿಯಲ್ಲಿ ಪ್ರಸಾರವಾಗುವ ಕೃಷಿ ಕಾರ್ಯಕ್ರಮಗಳ ಸರಣಿಯಲ್ಲಿ ವಿನೂತನ ಕಾರ್ಯಕ್ರಮಗಳನ್ನು ರೈತರಿಗೆ ಹಂತ ಹಂತವಾಗಿ ತಲುಪಿಸಲು ಪ್ರಯತ್ನ ಮಾಡಲಾಗುತ್ತಿದೆ ಎಂದು ಭರವಸೆ ನೀಡಿದರು.

ಆಕಾಶವಾಣಿಯ ಕೃಷಿ ರಂಗದ ಕಾರ್ಯಕ್ರಮದಲ್ಲಿ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಆ ಕ್ಷಣದ ಅಗತ್ಯಗಳನ್ನು ರೈತರಿಗೆ ತಿಳಿಸಲಾಗುತ್ತಿದೆ. ಕೃತಕ ಬುದ್ಧಿಮತ್ತೆಯನ್ನು ಇತ್ತೀಚಿನ ದಿನಗಳಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ. ಹಾಗಾಗಿ ಕೃಷಿ ಕ್ಷೇತ್ರದಲ್ಲೂ ಕೃತಕ ಬುದ್ಧಿಮತ್ತೆಯನ್ನು ಅಳವಡಿಸಿಕೊಂಡರೆ ರೈತರಿಗೆ ಸಹಾಯಕವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾರತೀಯ ಭಾಷಾ ಸಂಸ್ಥಾನ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್, ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕ ಎಸ್.ಕೇಶವಮೂರ್ತಿ, ಪಿಆರ್‌ಓ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಭಾರತೀಯ ಭಾಷಾ ಸಂಸ್ಥೆಯ ಸಭಾಂಗಣದಲ್ಲಿ 'ರಾಜಾ ಭಾಷಾ ಭಾರತಿ'ಯ ಪ್ರಕಟಣೆ: ವಿಶೇಷ ಹಿಂದಿ ಪಾಠಗಳು' ಪೋಸ್ಟರ್ ಅನ್ನು ಮಂಡ್ಯ ಕೃಷಿ ವಿಶ್ವವಿದ್ಯಾನಿಲಯದ ವಿಶೇಷ ಅಧಿಕಾರಿ ಡಾ.ಕೆ.ಎಂ.ಹರಿಣಿ ಕುಮಾರ್ ಬಿಡುಗಡೆ ಮಾಡಿದರು.

> ಸರ್ಕಾರ ಕೃಷಿ ಕ್ಷೇತ್ರಕ್ಕೆ ಬಹಳಷ್ಟು ಕೊಡುಗೆ ನೀಡುತ್ತಿದ್ದರೂ ಕೃಷಿ ಕ್ಷೇತ್ರದಲ್ಲಿ ಹವಾಮಾನ ಬದಲಾವಣೆ, ಕೃಷಿ ವೆಚ್ಚದ ಏರಿಕೆ, ಬೆಳೆಯ ಅಪಾಯಗಳು ಮಾರುಕಟ್ಟೆಯ ಅಸ್ಥಿರತೆಗಳಿಂದ ಕೃಷಿ ಕ್ಷೇತ್ರದಲ್ಲಿ ತೊಂದರೆ ಎದುರಾಗುತ್ತಿದೆ. ಇದರಿಂದ ದತ್ತಾಂಶ ಆಧಾರಿತ ಹಾಗೂ ಮುಂಚಿತ ನಿರ್ಧಾರಗಳನ್ನು ಕೈಗೊಳ್ಳಲು ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಸಹಾಯ ಬಳಸಿಕೊಳ್ಳಬಹುದು. ಇದರಿಂದ ರೈತರ ಜೀವನೋಪಾಯವನ್ನು ಬದಲಾವಣೆ ಮಾಡಲು ಅತ್ಯಂತ ಸಹಾಯಕವಾಗಿದೆ. ರೈತರು ಜ್ಞಾನ ಹೆಚ್ಚುಗಳಿಸುವಲ್ಲಿ ಕೃತಕ ಬುದ್ಧಿಮತ್ತೆಯು ಸಹಕಾರಿಯಾಗಲಿದೆ. –ಡಾ.ಹರಿಣಿ ಕುಮಾರ್

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಿನಾದ್ಯಂತ ಮಹಾಶಿವರಾತ್ರಿ, ಎಲ್ಲೆಲ್ಲೂ ಶಿವನಾಮ ಸ್ಮರಣೆ

● ನಾನಾ ಹೂವುಗಳು, ವಿದ್ಯುತ್ ದೀಪಾಲಂಕಾರಗಳಿಂದ ಕಂಗೊಳಿಸಿದ ದೇವಾಲಯಗಳು ● ಶಿವನಿಗೆ ಪ್ರಿಯವಾದ ಬಿಲ್ವಪತ್ರೆಗಳಿಂದ ಅಲಂಕಾರ, ಶಿವನ ದರ್ಶನ ಪಡೆದ ಭಕ್ತಸಾಗರ





ಮೈಸೂರು ಅರಮನೆ ಆವರಣದ ತ್ರಿನೇಶ್ವರಸ್ವಾಮಿ ದೇವಾಲಯದಲ್ಲಿ ಶಿವಲಿಂಗಕ್ಕೆ ಚಿನ್ನದ ಕೊಳಗ ಧಾರಣೆಯಿಂದ ಅಲಂಕಾರ ಮಾಡಿರುವುದು. ರಾಮಾನುಜ ರಸ್ತೆಯಲ್ಲಿರುವ ಗುರುಕುಲದಲ್ಲಿ 101 ಶಿವಲಿಂಗದ ದರ್ಶನ ಪಡೆದ ಅಪಾರ ಭಕ್ತರು.

ತ್ರಿನೇಶ್ವರಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಮೂಹ ದೇವಸ್ಥಾನಗಳಲ್ಲಿ ಒಂದಾದ ಶ್ರೀ ತ್ರಿನೇಶ್ವರ ಸ್ವಾಮಿ ದೇವಾಲಯದಲ್ಲಿ ಮಹಾಶಿವರಾತ್ರಿ ಅಂಗವಾಗಿ ಮೂಲ ದೇವರಿಗೆ ಚಿನ್ನದ ಕೊಳಗ ಧರಿಸಲಾಗಿತ್ತು. ಪ್ರತಿವರ್ಷದ ಶಿವರಾತ್ರಿಯಂತೆ ಈ ಬಾರಿಯೂ ತ್ರಿನೇಶ್ವರ ಸ್ವಾಮಿಗೆ ದೇವಸ್ಥಾನದ ಸ್ಥಾನಿಕರ ಸಮ್ಮುಖದಲ್ಲಿ ಮುಂಜಾನೆ ವಿಶೇಷ ಪೂಜೆಯೊಂದಿಗೆ ಶಿವಲಿಂಗಕ್ಕೆ ಚಿನ್ನದ ಕೊಳಗವನ್ನು ಧಾರಣೆ ಮಾಡಲಾಯಿತು.

ಬೆಳಗ್ಗೆ 5ಗಂಟೆಯಿಂದ ಧಾರ್ಮಿಕ ವಿಧಿವಿಧಾನಗಳು ಪ್ರಾರಂಭವಾದವು. ಮೊದಲಿಗೆ ಮಹಾಭಿಷೇಕವಾದ ಬಳಿಕ 6 ಗಂಟೆಯೊಳಗೆ ಶಿವನಿಗೆ ಕೊಳಗ ಧಾರಣೆ ಮಾಡಲಾಯಿತು. ಮಹಾರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಬಿಲ್ವಾರ್ಚನೆ, ಪುಷ್ಪಾರ್ಚನೆ ಸೇರಿದಂತೆ 12 ಬಗೆಯ ಅಭಿಷೇಕ ನಡೆಯಿತು. ಪ್ರತಿ ಬಾರಿಯಂತೆ ಈ ಬಾರಿಯೂ ಬೆಳಗ್ಗೆ 6.30 ಗಂಟೆಯಿಂದ ಮಧ್ಯ ರಾತ್ರಿ 12 ಗಂಟೆಯವರೆಗೆ ದರ್ಶನದ ವ್ಯವಸ್ಥೆಯ ಅವಕಾಶ ಕಲ್ಪಿಸಲಾಗಿತ್ತು. ರಾತ್ರಿ 10ಕ್ಕೆ ಸರ್ಕಾರಿ ಸೇವೆಯ ಮೂಲಕ ಏಕಾದಶ ರುದ್ರಾಭಿಷೇಕ ನಡೆಯಿತು. ಭಕ್ತರಿಗೆ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು.

ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ದೇವಾಲಯಕ್ಕೆ ಭೇಟಿ ನೀಡಿ, ದೇವರಿಗೆ ವಿಶೇಷ ಪೂಜೆ ಸಮರ್ಪಿಸಿದರು. ಬಳಿಕ ಒಂದತ್ತು ನಿಮಿಷ ದೇವರ ಮುಂದೆ ಮಂಡಿಯೂರಿ ಕುಳಿತು ಧ್ಯಾನ ಮಾಡಿದರು.

ಮೈಸೂರು,ಫೆ.16(ಎಂಟಿವೈ)– ಮೈಸೂರಲ್ಲಿ ಭಾನುವಾರ ಮಹಾಶಿವರಾತ್ರಿ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಮೈಸೂರಿನಾದ್ಯಂತ ಇರುವ ಶಿವನ ದೇಗುಲಗಳಲ್ಲಿ ಮತ್ತು ಶಿವ ಭಕ್ತರ ಮನೆಗಳಲ್ಲಿ ವಿಶೇಷ ಪೂಜಾ ಮಹೋತ್ಸವದೊಂದಿಗೆ ಶಿವನಾಮ ಸ್ಮರಣೆ ಝೇಂಕರಿಸಿತು.

ಎಲ್ಲಾ ಶಿವನ ದೇವಾಲಯಗಳು, ಮಲೆ ಮಹದೇಶ್ವರ ಸ್ವಾಮಿ ದೇವಾಲಯಗಳಲ್ಲಿ ಮುಂಜಾನೆಯಿಂದಲೇ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು. ಬಣ್ಣ ಬಣ್ಣದ ಹೂವು ಹಾಗೂ ವಿದ್ಯುತ್ ದೀಪಾಲಂಕಾರಗಳಿಂದ ಕಂಗೊಳಿಸುತ್ತಿದ್ದ ದೇಗುಲಗಳು ಭಕ್ತರ ಕಣ್ಮನ ಸೆಳೆಯುತ್ತಿತ್ತು. ಹೂಗಳಿಂದ ಮತ್ತು ಬಿಲ್ವಪತ್ರೆಗಳಿಂದ ಶಿವನನ್ನು ಅಲಂಕರಿಸಲಾಗಿತ್ತು. ಮುಂಜಾನೆಯಿಂದಲೇ ರುದ್ರಾಭಿಷೇಕ, ಕ್ಷೀರಾಭಿಷೇಕ, ಬಿಲ್ವಪತ್ರೆ ಅರ್ಪಣೆ, ಮಹಾಮಂಗಳಾರತಿ ಸೇರಿದಂತೆ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಶಿವನ ದರ್ಶನ ಪಡೆಯಲು ಭಕ್ತ ಸಾಗರವೇ ನೆರೆದಿತ್ತು. ರಾತ್ರಿಯಿಡೀ ಜಾಗರಣೆ ಮಾಡಿದ ಜನ ಶಿವನಾಮ ಸ್ಮರಣೆ ಮಾಡಿ ಭಗವಂತನ ಕೃಪೆಗೆ ಪಾತ್ರರಾದರು.

ರಾಮಾನುಜ ರಸ್ತೆಯ ಕಾಮೇಶ್ವರ–ಕಾಮೇಶ್ವರಿ ದೇವಸ್ಥಾನ, ಚಾಮರಾಜಪುರಂನ ಪ್ರಸನ್ನ ವಿಶ್ವೇಶ್ವರ ದೇವಸ್ಥಾನ, ಕೆ.ಜಿ.ಕೊಪ್ಪಲಿನ ಚಂದ್ರಮೌಳೇಶ್ವರ ದೇವಸ್ಥಾನ, ವಿದ್ಯಾರಣ್ಯಪುರಂನ ರಾಮಲಿಂಗೇಶ್ವರ ದೇಗುಲ, ಮಹದೇಶ್ವರ ಸ್ವಾಮಿ ದೇಗುಲ, ಅಶೋಕಪುರಂನ ಮುಕ್ಕಣ್ಣೇಶ್ವರ ಸ್ವಾಮಿ ದೇಗುಲ, ಬನ್ನೂರು ರಸ್ತೆಯ ಮಲೆಮಹದೇಶ್ವರ ದೇವಸ್ಥಾನ, ಕುಂಬಾರಕೊಪ್ಪಲಿನ ಮಹದೇಶ್ವರಸ್ವಾಮಿ ದೇವಸ್ಥಾನ, ಲಷ್ಕರ್ ಮೊಹಲ್ಲಾದ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ, ದಿವಾನ್ಸ್ ರಸ್ತೆಯಲ್ಲಿರುವ ಅಮೃತೇಶ್ವರ ದೇವಸ್ಥಾನ, ಬೋಗಾದಿ ರಿಂಗ್ ರಸ್ತೆಯಲ್ಲಿರುವ ನಾಗೇಶ್ವರ ಭೋಗೇಶ್ವರಸ್ವಾಮಿ ದೇವಾಲಯ, ಸಿದ್ದಪ್ಪ ವೃತ್ತ, ಹೊಸಕೇರಿ, ಮಲೆಮಹದೇಶ್ವರ ರಸ್ತೆ ಸೇರಿದಂತೆ ನಗರದ ವಿವಿಧ ಶಿವ ದೇಗುಲಗಳಲ್ಲಿ ವಿಶೇಷ ಪೂಜೆ ಜರುಗಿದವು.

101 ಶಿವಲಿಂಗಗಳಿಗೆ ಪೂಜೆ: ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಗುರುಕುಲ ಟ್ರಸ್ಟ್‌ನ 101 ಶಿವಲಿಂಗಗಳಿಗೆ ವಿವಿಧ ಅಭಿಷೇಕ, ಪೂಜೆಯನ್ನು ನೆರವೇರಿಸಲಾಯಿತು. ಸಹಸ್ರಾರು ಭಕ್ತರು ಸಂಜೆವರೆಗೆ ದೇಗುಲಕ್ಕೆ ಭೇಟಿ ನೀಡಿದ ಭಕ್ತರು 101 ಲಿಂಗಗಳ ದರ್ಶನ ಪಡೆದರು. ಶಿವಲಿಂಗಕ್ಕೆ ಭಕ್ತರು ಸ್ವತಹ ತಾವೇ ಜಲಾಭಿಷೇಕ ಮಾಡಿದರು.

ಪ್ರಸನ್ನ ಶಿವಲಿಂಗೇಶ್ವರ ಸ್ವಾಮಿ ದೇವಾಲಯ: ನಗರದ ಕುವೆಂಪುನಗರದ ವಿಶ್ವ ಮಾನವ ಜೋಡಿ ರಸ್ತೆಯಲ್ಲಿ ಇರುವ ಪ್ರಸನ್ನ ಶಿವಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಾಗರಿಕ ವೇದಿಕೆ ವತಿಯಿಂದ ವಿಶೇಷ ಪೂಜಾ ಕಾರ್ಯಕ್ರಮ ನಡೆಯಿತು. ಭಾನುವಾರ ಬೆಳಗ್ಗೆ 5.30ಕ್ಕೆ ರುದ್ರಾಭಿಷೇಕ ನಡೆಯಿತು. ಬಳಿಕ ಮಹಾಮಂಗಳಾರತಿ ನಡೆಯಿತು. ನಂತರ ಒಂದನೇ ಜಾವದ ಪೂಜೆ, ಎರಡನೇ ಜಾವದ ಪೂಜೆ, ಮೂರನೇಯ ಜಾವದ ಪೂಜೆ, ಸೋಮವಾರ ಬೆಳಗಿನ ಜಾವದ ಪೂಜೆ ಹಾಗೂ ಮಹ ಮಂಗಳಾರತಿ ನಡೆಯಿತು. ಭಾನುವಾರ ಸಂಜೆಯಿಂದ ಆಕಾಶವಾಣಿ ಕಲಾವಿದರ ತಂಡದಿಂದ ಭಕ್ತಿಗೀತಾ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಕಾಮಕಾಮೇಶ್ವರಿ ದೇವಾಲಯ: ಮೈಸೂರಿನ ರಾಮಾನುಜಾ ರಸ್ತೆಯಲ್ಲಿರುವ ಶ್ರೀ ಕಾಮೇಶ್ವರ ಕಾಮೇಶ್ವರಿ ದೇವಾಲಯದಲ್ಲಿ ಮಹಾಶಿವರಾತ್ರಿ ಅಂಗವಾಗಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಭಾನುವಾರ ಬೆಳಗ್ಗೆ 8 ಗಂಟೆಗೆ ಸಂಕಲ್ಪ ಮಾಡಲಾಯಿತು. ಬಳಿಕ ವಿಜಯ ವಿಶ್ವೇಶ್ವರ ಸ್ವಾಮಿಗೆ ಏಕದಶಾವಾರ ರುದ್ರಾಭಿಷೇಕ ನಡೆಯಿತು. ಮಧ್ಯಾಹ್ನ 12.30ಕ್ಕೆ ಅಮ್ಮನವರ ಸಹಿತ ಶ್ರೀ ಸ್ವಾಮಿಗೆ ಪ್ರಾಕಾರೋತ್ಸವ ಅಷ್ಟಾವಧಾನ ಸೇವೆ ನಡೆಯಿತು. 1 ಗಂಟೆಗೆ ಮಹಾ ಮಂಗಳಾರತಿ ಮಾಡಲಾಯಿತು. ಸಂಜೆ 6ರಿಂದ ನಾಲ್ಕು ಆಯಾಮಗಳಲ್ಲಿ ಅಭಿಷೇಕ ಮತ್ತು ವಿಶೇಷ ಪೂಜೆ ನಡೆಯಿತು. ಭಾನುವಾರ ಬೆಳಗ್ಗೆಯಿಂದ ಸೋಮವಾರದ ಬೆಳಗಿನ ಜಾವದ ತನಕ ವಿವಿಧ ಭಜನ ಮಂಡಳಿ, ಸುಗಮ ಸಂಗೀತ ತಂಡ, ಕಲಾ ತಂಡಗಳಿಂದ ಭಕ್ತಿಗೀತೆ ಜನಪದ ಗೀತೆ, ಭಜನೆ ನಡೆಯಿತು.

ಗರಡಿಕೇರಿ ದೇವಸ್ಥಾನ: ನಗರದ ಲಷ್ಕರ್ ಮೊಹಲ್ಲಾದ ಗರಡಿಕೇರಿಯಲ್ಲಿ ಇರುವ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಸ್ವಾಮಿಯ ಪ್ರಾಣಲಿಂಗಕ್ಕೆ ಮಹಾರುದ್ರಾಭಿಷೇಕ ನಡೆಯಿತು. ಹಾಲಭಿಷೇಕ, ಬಿಲ್ವಾರ್ಚನೆ, ನಿವೇದನೆ, ಧೂಪದಾರತಿ, ತುಪ್ಪದಾರತಿ, ಮಹಾ ಮಂಗಳಾರತಿ ಕಾರ್ಯಗಳು ನಡೆದ ಮೇಲೆ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಸಂಜೆ ವೇಳೆ ಶಿವಪಾರ್ವತಿ, ಶ್ರೀ ಸ್ವಾಮಿಯ ಉತ್ಸವ ಮೂರ್ತಿ ಜೊತೆಗೆ ಸುವರ್ಣ ಖಚಿತ ಕೊಳಗವನ್ನು ಮಂಗಳವಾದ್ಯ ಮತ್ತು ನಗಾರಿ ತಂಡಗಳೊಂದಿಗೆ ಮೆರವಣಿಗೆ ಮಾಡಲಾಯಿತು.

ಚಂದ್ರಮೌಳೇಶ್ವರ ಸ್ವಾಮಿ ದೇವಾಲಯ: ವಾಣಿವಿಲಾಸ ಮೊಹಲ್ಲಾದಲ್ಲಿ ಇರುವ ಚಂದ್ರಮೌಳೇಶ್ವರ ಸ್ವಾಮಿ ದೇವಾಲಯದಲ್ಲಿ ಶ್ರೀ ಸ್ವಾಮಿಗೆ ಅಭಿಷೇಕ, ಅರ್ಚನೆ, ಪೂಜಾ ಕಾರ್ಯಕ್ರಮಗಳು ಶ್ರದ್ಧಾಭಕ್ತಿಯಿಂದ ನಡೆಯಿತು. ಅಹೋರಾತ್ರಿ ಭಜನೆ, ನೃತ್ಯ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಸುತ್ತೂರು ಮಠದಲ್ಲಿ ಪೂಜೆ: ನಂಜನಗೂಡು ತಾಲೂಕಿನ ಸುತ್ತೂರಿನ ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದಲ್ಲಿ ಮಹಾಶಿವರಾತ್ರಿ ಅಂಗವಾಗಿ ವಿಶೇಷ ಪೂಜೆ ಆಯೋಜಿಸಲಾಗಿತ್ತು. ಆದಿ ಜಗದ್ಗುರು ಶಿವರಾತ್ರೀಶ್ವರ ಶಿವಯೋಗಿಗಳ ಕರ್ತೃ ಗದ್ದುಗೆಯಲ್ಲಿ ಭಾನುವಾರ ಬೆಳಗ್ಗೆ 6ರಿಂದ ಸೋಮವಾರ ಬೆಳಗ್ಗೆ 6 ಗಂಟೆಯ ತನಕ ನಾಲ್ಕು ಜಾವಗಳಲ್ಲಿಯೂ ವಿಶೇಷ ಪೂಜೆ ನಡೆಯಿತು. ಭಾನುವಾರ ಸಂಜೆ 7ಕ್ಕೆ ಶಿವದೀಕ್ಷೆ, ರಾತ್ರಿ 9.30ಕ್ಕೆ ಬೆಳ್ಳಿರಥ ಪ್ರಾಕಾರೋತ್ಸವ ನಡೆಯಿತು.

ಗ್ರಾಮದಲ್ಲಿ ಇರುವ ಮಹದೇಶ್ವರ ಸನ್ನಿಧಿ, ಸೋಮೇಶ್ವರ, ವೀರಭದ್ರೇಶ್ವರ, ನಂಜುಂಡೇಶ್ವರ, ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನಡೆಯಿತು. ಕರ್ತೃ ಗದ್ದುಗೆ ಆವರಣದಲ್ಲಿ, ದೇವಾಲಯಗಳ ಆವರಣಗಳಲ್ಲಿ ಅಹೋರಾತ್ರಿ ಭಜನೆ, ನೃತ್ಯ ಕಾರ್ಯಕ್ರಮ ನಡೆಯಿತು. ಸುತ್ತೂರು ಮಠದ ಪೀಠಾಧಿಪತಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ನೆರೆದಿದ್ದ ಸಹಸ್ರಾರು ಭಕ್ತರೊಂದಿಗೆ ಸಾಮೂಹಿಕವಾಗಿ ಇಷ್ಟ ಲಿಂಗಪೂಜೆ ಮಾಡಿದರು.



ಪ್ರಸಾದ ವಿನಿಯೋಗ

ಮಹಾಶಿವರಾತ್ರಿ ಹಿನ್ನೆಲೆಯಲ್ಲಿ ಅರವಿಂದನಗರದ ಶಿವ ದೇವಾಲಯಕ್ಕೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಿದರು. ದೇವಸ್ಥಾನದ ಧರ್ಮದರ್ಶಿ ಸಮಿತಿಯ ಶ್ರೀ ಶ್ರೀಕಂಠ ಮೂರ್ತಿ, ಓಂಕಾರ್ ಆಪ್ಟಿಕಲ್ ಲಿಂಗರಾಜು ಮತ್ತಿತರರು ಉಪಸ್ಥಿತರಿದ್ದರು.

ಮಹಾಶಿವಭಕ್ತ ಬೇಡರ ಕಣ್ಣಪ್ಪ ಜಯಂತಿ ಆಚರಣೆ



ಮಂಡಿಮೊಹಲ್ಲಾದ ಪಟ್ಟೇಗಾರ್ ಬೀದಿಯ ಗರಡಿ ಮನೆ ಬಳಿ ಶಿವರಾತ್ರಿಯಂದು ಬೇಡರ ಕಣ್ಣಪ್ಪ ಜಯಂತಿ ಆಚರಿಸಲಾಯಿತು.

ಮೈಸೂರು, ಫೆ.16– ಮಹಾಶಿವರಾತ್ರಿ ಹಬ್ಬದ ಅಂಗವಾಗಿ ಶಿವಭಕ್ತ ಬೇಡರ ಕಣ್ಣಪ್ಪ ಜಯಂತಿಯನ್ನು ಮೈಸೂರಿನ ಮಂಡಿ ಮೊಹಲ್ಲಾ ಪಟ್ಟೇಗಾರ್ ಬೀದಿಯಲ್ಲಿರುವ ಗರಡಿ ಮನೆ ಬಳಿ ಆಚರಿಸಲಾಯಿತು.

ಈ ವೇಳೆ ನಗರ ಬಿಜೆಪಿ ಅಧ್ಯಕ್ಷರಾದ ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಜಗತ್ತಿನ ಮೊದಲ ನೇತ್ರದಾನಿ ಬೇಡರ ಕಣ್ಣಪ್ಪ. ಪೌರಾಣಿಕ ಹಿನ್ನೆಲೆಯ ಬೇಡರ ಕಣ್ಣಪ್ಪನವರು ಕಾಡಿನಲ್ಲಿ ಬೇಟೆಯಾಡುತ್ತಿದ್ದಾಗ ಶಿವಲಿಂಗವನ್ನು ಕಂಡು ಮಹಾಶಿವಭಕ್ತರಾದರು ಎಂದು ತಿಳಿಸಿದರು.

ಭಕ್ತಿ ಪರಾಕಾಷ್ಠೆಯಿಂದ ತಾನು ಬೇಟೆಯಾಡಿದ ಪ್ರಾಣಿಯ ಮಾಂಸವನ್ನು ನಿತ್ಯವೂ ಶಿವನಿಗೆ ಅರ್ಪಿಸುತ್ತಿದ್ದನು. ಒಮ್ಮೆ ಶಿವಲಿಂಗದಿಂದ ರಕ್ತ ಸುರಿಯುವುದನ್ನು ಕಂಡು, ಕಣ್ಣಪ್ಪ ತನ್ನ ಒಂದು ಕಣ್ಣನ್ನು ಕಿತ್ತು ಲಿಂಗಕ್ಕೆ ಇರಿಸಿದನು. ಬಳಿಕ ಮತ್ತೊಂದು ಕಣ್ಣಿನಿಂದಲೂ ರಕ್ತ ಸುರಿದಾಗ ತನ್ನ ಮತ್ತೊಂದು ಕಣ್ಣನ್ನೂ ಕಿತ್ತು ಶಿವಲಿಂಗಕ್ಕಿಡಲು ಮುಂದಾದಾಗ ಕಣ್ಣಪ್ಪನ ತ್ಯಾಗ ಹಾಗೂ ಮುಗ್ಧ ಭಕ್ತಿಯನ್ನು ಮೆಚ್ಚಿ ಶಿವನೇ ಪ್ರತ್ಯಕ್ಷನಾಗಿ ಕಣ್ಣಪ್ಪನಿಗೆ ಮತ್ತೆ ದೃಷ್ಟಿ ಕರುಣಿಸಿದನು. ಶಿವನೇ ಕಣ್ಣಪ್ಪ ಎಂಬ ಹೆಸರು ನೀಡಿ, ಆಶೀರ್ವದಿಸಿದರು. ಇಂತಹ ಶ್ರೇಷ್ಠ ಮೌಲ್ಯವನ್ನೊಳಗೊಂಡ ಪುರಾಣ ಕತೆ ಹೊಂದಿರುವ ಕಣ್ಣಪ್ಪ ಅವರ ಜಯಂತಿಯನ್ನು ಮಹಾಶಿವರಾತ್ರಿಯಂದು ಆಚರಿಸುತ್ತಿರುವುದು ಸ್ತುತ್ಯಾರ್ಹ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಜೆಪಿ ನಗರ ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪಾಲಿಕೆ ಮಾಜಿ ಸದಸ್ಯ ಎಂ.ಚಿಕ್ಕವೆಂಕಟು, ವಾರ್ಡ್ ಅಧ್ಯಕ್ಷ ಕೇಬಲ್ ವಿಜಿ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಆರ್.ಸೋಮಣ್ಣ, ಎನ್.ಯೋಗಾನಂದ್, ಕೆ.ಗಿರೀಶ್, ಪ್ರಧಾನ ಕಾರ್ಯದರ್ಶಿ ನಾರಾಯಣ ಲೋಲಪ್ಪ, ಕೃಷ್ಣ ನಾಯಕ, ಎಸ್.ತ್ಯಾಗರಾಜ್, ಬಾಲರಾಜ್, ಯುವ ಮೋರ್ಚಾ ಅಧ್ಯಕ್ಷ ಅರ್ಜುನ್ ಕುಮಾರ್, ಜೆಸಿಬಿ ರವಿ, ವಿಠಲ್, ಸದಾಶಿವ, ಸೂರಜ್, ನಗರ ಎಸ್‌ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕಾರ್ತಿಕ್ ಮರಿಯಪ್ಪ, ಆರ್‌ಎಂಪಿ ಸತೀಶ್, ನಿಖಿಲ್, ಕೇಬಲ್ ರಾಜು, ಚಿನ್ನು, ಮಂಜುನಾಥ್, ಪುನೀತ್, ರಾಜಣ್ಣ, ಯಶ್ವಂತ್, ಪತಂಗೆ, ಶುಭಂ, ಅಮಿತ್, ರಾಘವೇಂದ್ರ ಮತ್ತಿತರಿದ್ದರು.

ಶ್ರೀ ಗಣಪತಿ ಆಶ್ರಮದಲ್ಲಿ ಸಂಭ್ರಮದ ಮಹಾಶಿವರಾತ್ರಿ

ವಿಶೇಷ ಅಭಿಷೇಕ, ಮಹಾಮಂಗಳಾರತಿ ನೆರವೇರಿಸಿದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ



ಮಹಾಶಿವರಾತ್ರಿ ಅಂಗವಾಗಿ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ವಿಶ್ವ ಪ್ರಾರ್ಥನಾ ಮಂದಿರದಲ್ಲಿರುವ ಸಚ್ಚಿದಾನಂದೇಶ್ವರ ಶಿವಲಿಂಗಕ್ಕೆ ಶ್ರೀಗಳು ವಿಶೇಷ ಅಭಿಷೇಕ, ಮಹಾಮಂಗಳಾರತಿ ನೆರವೇರಿಸಿದರು.

ಮೈಸೂರು, ಫೆ.16– ಅವಧೂತ ದತ್ತ ಪೀಠದಲ್ಲಿ 60ನೇ ವರ್ಷದ ಶಿವರಾತ್ರಿ ಮಹೋತ್ಸವ ಅತ್ಯಂತ ಸಂಭ್ರಮ ಸಡಗರದಿಂದ ಜರುಗಿತು ಎಂದು ಅವಧೂತ ದತ್ತ ಪೀಠದ ಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ತಿಳಿಸಿದರು.

ಮಹಾ ಶಿವರಾತ್ರಿ ಅಂಗವಾಗಿ ಆಶ್ರಮದ ವಿಶ್ವ ಪ್ರಾರ್ಥನಾ ಮಂದಿರದಲ್ಲಿರುವ ಸಚ್ಚಿದಾನಂದೇಶ್ವರ ಶಿವಲಿಂಗಕ್ಕೆ ವಿಶೇಷ ಅಭಿಷೇಕ, ಮಂಗಳಾರತಿ ನೆರವೇರಿಸಿದ ಸ್ವಾಮೀಜಿ, ಮಾಧ್ಯಮದವರೊಂದಿಗೆ ಮಾತನಾಡಿ ಎಲ್ಲರಿಗೂ ಶುಭ ಕೋರಿದರು.

ವಿಜ್ಞಾನ ಮತ್ತು ಅಧ್ಯಾತ್ಮದ ಬೆಸುಗೆ: ಶಿವನ ತತ್ವವನ್ನು ವಿವರಿಸುತ್ತಾ, ಶಿವ ನಿರ್ವಿಕಾರ ಸ್ವರೂಪಿ. ಆತನು ಭಕ್ತರು ಬೇಡಿದ ರೂಪದಲ್ಲಿ ಕಾಣಿಸಿಕೊಳ್ಳುವ ವಿಶ್ವರೂಪಿ. ನಾಸಾ ವಿಜ್ಞಾನಿಗಳು ಮತ್ತು ಆಧುನಿಕ ವಿಜ್ಞಾನದ ಪ್ರಕಾರ, ಆಕಾಶ ಮತ್ತು ನಮ್ಮ ಕ್ಷೀರಪಥವೇ ಲಿಂಗಾಕಾರದಲ್ಲಿದೆ. ಇಡೀ ಪ್ರಪಂಚವೇ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ. ಹರಿ ಮತ್ತು ಹರರಲ್ಲಿ ಯಾವುದೇ ಭೇದವಿಲ್ಲ, ಶಂಕರನಾರಾಯಣ ತತ್ವವೇ ಶ್ರೇಷ್ಠ ಎಂದು ತಿಳಿಸಿದರು.

ಐತಿಹಾಸಿಕ ದಾಖಲೆ: ಆಶ್ರಮದಲ್ಲಿ ನಡೆದ ಸಾಮೂಹಿಕ ಹನುಮಾನ್ ಚಾಲೀಸಾ ಪಠಣ ಕಾರ್ಯಕ್ರಮದ ಬಗ್ಗೆ ಹರ್ಷ ವ್ಯಕ್ತಪಡಿಸಿದ ಶ್ರೀಗಳು, ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಿ ಹೊರಹೊಮ್ಮಿದೆ ಎಂದು ಹೇಳಿದರು.

ಸಾವಿರಾರು ಭಕ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು, ಮೈಸೂರಿನ ಧಾರ್ಮಿಕ ಇತಿಹಾಸದಲ್ಲಿ ದಾಖಲೆಯಾಗಿದೆ. ಈ ಯಶಸ್ಸಿಗೆ ಕೇವಲ ನಾನೊಬ್ಬನೇ ಕಾರಣನಲ್ಲ. ಮಾಧ್ಯಮ ಮಿತ್ರರು, ಆಟೋ ರಿಕ್ಷಾ ಚಾಲಕರು, ಕಾರ್ಯಕರ್ತರು ಮತ್ತು ಭಕ್ತರು ನಡೆಸಿದ ನಿರಂತರ ಪ್ರಚಾರವೇ ಕಾರಣ. ವಿದೇಶಿಯರು ಕೂಡ ಮೈಸೂರಿನ ಭಕ್ತಿ ಭಾವವನ್ನು ಕಂಡು ಮೂಕವಿಸ್ಮಿತರಾಗಿದ್ದಾರೆ. ಶಿವ ಸ್ಮರಣೆಯಿಂದ ಸರ್ವ ದೋಷಗಳು ಪರಿಹಾರವಾಗಿ, ವಿಶ್ವಕ್ಕೆ ಶಾಂತಿ ಮತ್ತು ಕುಟುಂಬಗಳಿಗೆ ಆರೋಗ್ಯ ಐಶ್ವರ್ಯ ಲಭಿಸಲಿ ಎಂದು ಗಣಪತಿ ಸಚ್ಚಿದಾನಂದ ಶ್ರೀಗಳು ಆಶೀರ್ವದಿಸಿದರು.

ಅಹೋರಾತ್ರಿ ಶಿವನಾಮ ಸ್ಮರಣೆ: ಶಿವರಾತ್ರಿ ಅಂಗವಾಗಿ 24 ಗಂಟೆಗಳ ಕಾಲ ನಿರಂತರ ಶಿವ ಸ್ಮರಣೆ, ಜಾಗರಣೆ, ಸಂಗೀತ ಮತ್ತು ಭಜನೆ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ತಮಿಳುನಾಡಿನಿಂದ ಆಗಮಿಸಿದ್ದ ವಿಶೇಷ ಕಲಾವಿದರು ಪಂಚಭೂತಗಳಿಗೆ ಸಂಬಂಧಿಸಿದಂತೆ 11 ಬಗೆಯ ವಿಶೇಷ ಅಲಂಕಾರ ಮಾಡಿದ್ದರು. ಭಕ್ತರಿಗೆ ಅನುಕೂಲವಾಗುವಂತೆ ಎರಡು ಕಡೆ ಶಿವಲಿಂಗ ದರ್ಶನ ಮತ್ತು ಅಭಿಷೇಕಕ್ಕೆ ವ್ಯವಸ್ಥೆ ಕಲ್ಪಿಸಲಾಗಿತ್ತು.



ಪರಿಸರ ಕಾಳಜಿಯೊಂದಿಗೆ ಶಿವರಾತ್ರಿ ಆಚರಣೆ

ಮೈಸೂರಿನ ಅರಮನೆ ಆವರಣದಲ್ಲಿರುವ ಶ್ರೀ ತ್ರಿನೇಶ್ವರ ಸ್ವಾಮಿ ದೇವಾಲಯದ ಮುಂಭಾಗ ಪರಿಸರವಾದಿಗಳು, 'ಪ್ಲಾಸ್ಟಿಕ್ ಬ್ಯಾಗ್ ತ್ಯಜಿಸಿ ಬಟ್ಟೆ ಬ್ಯಾಗ್ ಬಳಸಿ' ಪರಿಸರ ಸಂರಕ್ಷಣೆ ಅಭಿಯಾನ ನಡೆಸಿ, ಭಕ್ತರಿಗೆ ಬಟ್ಟೆ ಬ್ಯಾಗ್ ವಿತರಿಸಿದರು. ಈ ವೇಳೆ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಪರಿಸರ ಬಳಗದ ಕೃಷ್ಣಪ್ಪ(ಗಂಟಯ್ಯ), ಪಂಚಾಯತ್‌ರಾಜ್ ಕಾರ್ಯದರ್ಶಿ ಲೋಕೇಶ್, ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್‌ಕುಮಾರ್, ಜಯಪ್ರಕಾಶ್ ಗುರೂಜಿ, ಎಸ್.ಎನ್.ರಾಜೇಶ್, ಸಿದ್ದಲಿಂಗಯ್ಯ, ಲಕ್ಷ್ಮಣ್, ದಿನೇಶ್‌ಗೌಡ, ನಿತೇಶ್, ಮಂಜುನಾಥ್ ಮತ್ತಿತರರಿದ್ದರು.

ಕಾಶಿ ವಿಶ್ವನಾಥ ಸ್ವಾಮಿ ದರ್ಶನ



ಶಿವರಾತ್ರಿ ಪ್ರಯುಕ್ತ ಶ್ರೀರಂಗಪಟ್ಟಣದ ಗಂಜಾಂ ಗೌಸಿಯಾಘಾಟ್‌ನಲ್ಲಿರುವ ಕಾಶಿ ವಿಶ್ವನಾಥ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ತ್ರಿಪುರ ಭೈರವಿ ಮಠಾಧಿಪತಿ ಡಾ.ಮೋಹನ್ ನಂದಾಗಿರಿ ಗೋ ಸ್ವಾಮೀಜಿ ರುದ್ರಾಭಿಷೇಕ ನೆರವೇರಿಸಿದರು. ಬಿಜೆಪಿ ಮೈಸೂರು ನಗರ ಉಪಾಧ್ಯಕ್ಷ ಸೋಮಶೇಖರ್ ರಾಜು, ಪಾಲಿಕೆ ಮಾಜಿ ಸದಸ್ಯ ಜಗದೀಶ್, ಮುಖಂಡರಾದ ಅನೋಜ್ ಸರಸ್ವತ್, ಪ್ರೇಮ್‌ಕುಮಾರ್, ನರೇಂದ್ರಬಾಬು ರಮೇಶ್, ವಿನಯ್, ಪ್ರಭು ದೇವರ ದರ್ಶನ ಪಡೆದರು.

ಶ್ರೀ ಶನೇಶ್ವರ ಸ್ವಾಮಿ ಮೆರವಣಿಗೆ



ಮಹಾ ಶಿವರಾತ್ರಿ ಹಬ್ಬದ ಪ್ರಯುಕ್ತ ಮೈಸೂರಿನ ಅಶೋಕಪುರಂನಲ್ಲಿ ಜರುಗಿದ ಶ್ರೀ ಶನೇಶ್ವರ ಸ್ವಾಮಿ ಮೆರವಣಿಗೆಗೆ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಚಾಲನೆ ನೀಡಿದರು. ಈ ವೇಳೆ ರವಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ನಿರ್ದೇಶಕ ರಾಮು, ಯುವ ಮುಖಂಡರಾದ ರವಿ, ಅಭಿಷೇಕ್ ಮತ್ತಿತರರು ಉಪಸ್ಥಿತರಿದ್ದರು.

ವ್ಯಕ್ತಿತ್ವ ವಿಕಸನದಲ್ಲಿ ಗ್ರಂಥಾಲಯ ಪುಸ್ತಕಗಳ ಪಾಲು ಅಪಾರ

ಪ್ರಾಧ್ಯಾಪಕರಾದ ಜ್ಯೋತಿಶಂಕರ್ ಅಭಿಮತ



ವಜ್ರ ಮಹೋತ್ಸವದ ಅಂಗವಾಗಿ ಸ್ಪಾಟ್‌ಲೈಟ್ ಉಪನ್ಯಾಸದಲ್ಲಿ ಮುಕ್ತ ವಿವಿ ಕನ್ನಡ ಪ್ರಾಧ್ಯಾಪಕರಾದ ಡಾ.ಜ್ಯೋತಿಶಂಕರ್ ಮಾತನಾಡಿದರು.

ಮೈಸೂರು, ಫೆ.16(ಎಸ್‌ಪಿಎನ್)– ಕಾಲೇಜು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದಲ್ಲಿ ಗ್ರಂಥಾಲಯ ಪುಸ್ತಕಗಳ ಪಾಲು ಸಾಕಷ್ಟಿರುತ್ತದೆ. ಈ ಹಿನ್ನೆಲೆಯಲ್ಲಿ ಗ್ರಂಥಾಲಯ, ಮಾಹಿತಿ ವಿಜ್ಞಾನ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಜ್ಞಾನದ ಪರಿಮಿತಿ ದೊಡ್ಡದಾಗಿರಬೇಕು ಎಂದು ಮುಕ್ತ ವಿವಿ ಕನ್ನಡ ಪ್ರಾಧ್ಯಾಪಕರಾದ ಡಾ.ಜ್ಯೋತಿಶಂಕರ್ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದ ವಿಭಾಗದ ಹಳೆಯ ವಿದ್ಯಾರ್ಥಿಗಳ ಸಂಘ(ಮಿಲನ್) ಸಹಯೋಗದೊಂದಿಗೆ ಆಯೋಜಿಸಿರುವ ವಜ್ರ ಮಹೋತ್ಸವದ ಅಂಗವಾಗಿ ಸ್ಪಾಟ್ ಲೈಟ್ ಉಪನ್ಯಾಸ ಕಾರ್ಯಕ್ರಮ–1ರಲ್ಲಿ 'ಗ್ರಂಥಾಲಯಗಳಿಗಾಗಿ ಕನ್ನಡ ಪುಸ್ತಕಗಳು: ಶಾಸ್ತ್ರೀಯ, ಪ್ರಭಾವಶೀಲ ಹಾಗೂ ಅಗತ್ಯ ಕೃತಿಗಳು' ಕುರಿತು ಮಾತನಾಡಿದರು.

ಹಿರಿಯ ಸಾಹಿತಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ರಚನೆಯ ಪ್ರವಾಸ ಕಥನದಲ್ಲಿ ಅವರು ಅಮೆರಿಕಾ ಪ್ರವಾಸ ಕೈಗೊಂಡಾಗ ಆದ ಅನುಭವಗಳನ್ನು ಈ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಈ ಕೃತಿಯನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಓದಬೇಕು. ಅಲ್ಲದೆ, ಅನೇಕ ಸಾಧಕರ ಕೃತಿಗಳನ್ನು ಗ್ರಂಥಾಲಯ ವಿದ್ಯಾರ್ಥಿಗಳು ಓದಿ ತಿಳಿದುಕೊಳ್ಳಲು ಪ್ರಯತ್ನಿಸಬೇಕು. ಏಕೆಂದರೆ, ಹೊಸಹೊಸ ಪುಸ್ತಕಗಳ ಬಗ್ಗೆ ಗ್ರಂಥಾಲಯ ಪಾಲಕರು ಮೊದಲು ತಿಳಿದುಕೊಂಡಿದ್ದರೆ, ಓದಿಗರಿಗೆ ಈ ಪುಸ್ತಕ ಬೇಕು, ಬೇಡ ಎಂದು ನಿರ್ಧರಿಸುವುದು ಸುಲಭವಾಗುತ್ತದೆ ಎಂದು ಸಲಹೆ ನೀಡಿದರು.

ಡಿಜಿಟಲ್ ಮತ್ತು ಗ್ರಂಥಾಲಯ ಇವೆರಡು ಮಾಹಿತಿ ಕೇಂದ್ರಗಳ ಜೊತೆ ಜೊತೆಗೆ ಸಾಗುತ್ತಿದ್ದೇವೆ. ಅಧ್ಯಯನದಲ್ಲಿ ತೊಡಗಿರುವವರಿಗೆ ಇವೆರಡು ಮಾಹಿತಿಗಳು ಪ್ರಮುಖವಾಗಿವೆ. ಅಲ್ಲದೆ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳಿಗೆ ಎಲ್ಲಾ ಮಾಹಿತಿಗಳನ್ನು ಡಿಜಿಟಲ್ ತಂತ್ರಾಂಶದಲ್ಲಿ ಒದಗಿಸಲು ಸಾಧ್ಯವಿಲ್ಲ ಎಂದರು.

ವೇದಿಕೆಯಲ್ಲಿ ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದ ವಿಭಾಗದ ಹಳೆಯ ವಿದ್ಯಾರ್ಥಿಗಳ ಸಂಘ(ಮಿಲನ್) ಕಾರ್ಯದರ್ಶಿ ಡಾ.ಬಿ. ಶೈಲೇಂದ್ರಕುಮಾರ್, ಸದಸ್ಯ ಡಾ.ಮೀರಾ ವೆಂಕಟೇಶ್, ವಿಭಾಗದ ಮುಖ್ಯಸ್ಥ ಡಾ.ಹರಿನಾರಾಯಣ, ಉಪ ಕಾರ್ಯದರ್ಶಿ ಡಾ.ಜಯಕುಮಾರ್ ಉಪಸ್ಥಿತರಿದ್ದರು.

ಶಿವರಾತ್ರಿ ಹಬ್ಬ: ಜಿಲ್ಲೆಯ ದೇಗುಲಗಳಲ್ಲಿ ವಿಶೇಷ ಪೂಜೆ

ಮಂಡ್ಯ, ಫೆ.16– ಜಿಲ್ಲೆಯಲ್ಲಿ ಭಾನುವಾರ ಮತ್ತು ಸೋಮವಾರ ಶ್ರದ್ಧಾ ಭಕ್ತಿಯಿಂದ ಮಹಾಶಿವರಾತ್ರಿ ಹಬ್ಬವನ್ನು ಆಚರಿಸಲಾಯಿತು. ಜಿಲ್ಲೆಯ ಎಲ್ಲ ಶಿವಾಲಯಗಳು ಮತ್ತು ಶ್ರೀ ಶನೈಶ್ಚರ ಸ್ವಾಮಿ ದೇವಸ್ಥಾನಗಳಲ್ಲಿ ಶಿವರಾತ್ರಿ ಪ್ರಯುಕ್ತ ವಿಶೇಷ ಪೂಜೆ, ಅಲಂಕಾರ, ಹೋಮಗಳು ನಡೆದವು.

ತಾಲೂಕಿನ ಹೊಸಬೂದನೂರು ಗ್ರಾಮದಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀ ಕಾಶಿ ವಿಶ್ವನಾಥ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಹೋಮ–ಹವನ, ಶಿವಾರಾಧನೆ, ಭಾನುವಾರ ರಾತ್ರಿಯಿಡೀ ಜಾಗರಣೆ ನಡೆಯಿತು. ಸೋಮವಾರ ಬೆಳಿಗ್ಗೆ ವಿಶೇಷ ಪೂಜೆ ನಡೆದ ಬಳಿಕ ಮಧ್ಯಾಹ್ನ ನಡೆದ ಅನ್ನಸಂತರ್ಪಣೆಯಲ್ಲಿ ಸಹಸ್ರಾರು ಮಂದಿ ಭಾಗವಹಿಸಿ ಪ್ರಸಾದ ಸ್ವೀಕರಿಸಿದರು.

ಮಾಂಡವ್ಯ ಋಷಿಯ ತಪೋಭೂಮಿ ಮಂಡ್ಯ ನಗರದ ಪುರಾಣ ಪ್ರಸಿದ್ಧವಾದ ಶ್ರೀ ಅರ್ಕೇಶ್ವರಸ್ವಾಮಿ ದೇವಾಲಯದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ನವಗ್ರಹ ಹೋಮ ಸೇರಿದಂತೆ ವಿವಿಧ ಹೋಮ–ಹವನಗಳು, ಶಿವಾರಾಧನೆ, ಭಜನೆಗಳು ಭಾನುವಾರ ರಾತ್ರಿಯಿಡೀ ಜಾಗರಣೆ ನಡೆಯಿತು.

ತಾಲೂಕಿನ ಚಿಕ್ಕಮಂಡ್ಯದ ಶ್ರೀ ಶನೈಶ್ಚರಸ್ವಾಮಿ ದೇವಾಲಯ ಆವರಣದಲ್ಲಿ ನಿರ್ಮಿಸಿರುವ 12 ಅಡಿ ಎತ್ತರದ ಈಶ್ವರನ ಪ್ರತಿಮೆಗೆ ಹಬ್ಬದ ಪ್ರಯುಕ್ತ ಭಾನುವಾರ ದಿನವಿಡೀ ವಿಶೇಷ ಪೂಜೆಗಳು ನಡೆದವು. ಸೋಮವಾರ ಮುಡಿ,



ಬಾಯಿ ಬೀಗ, ಅನ್ನಸಂತರ್ಪಣೆಯೂ ನಡೆಯಿತು. ಹಳೇಬೂದನೂರು ಗ್ರಾಮದ ಶ್ರೀ ಅಂಕನಾಥೇಶ್ವರಸ್ವಾಮಿ ದೇವಾಲಯದಲ್ಲೂ ವಿಶೇಷ ಪೂಜೆ, ಪುನಸ್ಕಾರ, ಅನ್ನಸಂತರ್ಪಣೆ ನಡೆಸಲಾಯಿತು.

ಮದ್ದೂರು ವರದಿ: ತಾಲೂಕಿನ ವೈದ್ಯನಾಥಪುರದಲ್ಲಿರುವ ಶ್ರೀ ವೈದ್ಯನಾಥೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ನಡೆಸಲಾಯಿತು. ಮದ್ದೂರಿನ ಮಳವಳ್ಳಿ ರಸ್ತೆಯಲ್ಲಿರುವ ಈಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಪ್ರಯುಕ್ತ ವಿಶೇಷ ಪೂಜೆ ಮತ್ತು ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಹಳೆ ಬಸ್ ನಿಲ್ದಾಣದಲ್ಲಿರುವ ಶ್ರೀ ಕಾಶಿ ವಿಶ್ವೇಶ್ವರ ದೇವಸ್ಥಾನದಲ್ಲಿ ಸಾಮೂಹಿಕ ರುದ್ರಹೋಮ, ಕೋಟಿ ಬಿಲ್ವಿಯಲ್ಲಿ ಉತ್ಸವ, ಇಡೀ ರಾತ್ರಿ ಭಕ್ತರು ಜಾಗರಣೆ ಮಾಡಿದರು.

ಬೆಳಿಗ್ಗೆಯಿಂದ ಸಂಜೆವರೆಗೆ ಭಕ್ತರು ದೇವಾಲಯಗಳಿಗೆ ಭೇಟಿ ನೀಡಿ ಹಬ್ಬದ ವಿಶೇಷ ಪೂಜೆ ಸಲ್ಲಿಸಿ, ಪ್ರಾರ್ಥನೆ ಮಾಡಿದರು. ಭಾನುವಾರ ರಾತ್ರಿಯಿಂದ ಸೋಮವಾರ ಮುಂಜಾನೆವರೆಗೆ ಜಾಗರಣೆ ಪ್ರಯುಕ್ತ ವಿವಿಧ ಪೂಜಾ ಕಾರ್ಯಕ್ರಮಗಳು, ಪ್ರಸಾದ ವಿನಿಯೋಗ ನಡೆಯಿತು.

ಇದರೊಂದಿಗೆ ಜಿಲ್ಲೆಯ ನಾಗಮಂಗಲ, ಕೆ.ಆರ್.ಪೇಟೆ, ಪಾಂಡವಪುರ, ಶ್ರೀರಂಗಪಟ್ಟಣ ತಾಲೂಕು ಅಲ್ಲದೆ ಕಿಕ್ಕೇರಿ, ಭಾರತೀನಗರಗಳಲ್ಲಿ, ಹಲವು ದೇವಾಲಯಗಳಲ್ಲೂ ಪೂಜಾ ಕೈಂಕರ್ಯದ ಜೊತೆಗೆ ಪ್ರಸಾದ ವಿತರಣೆಯನ್ನು ಏರ್ಪಡಿಸಲಾಗಿತ್ತು. ಭಕ್ತರು ಈ ಕಾರ್ಯದಲ್ಲಿ ಭಾಗವಹಿಸಿ ಭಕ್ತಿ ಭಾವವನ್ನು ಮೆರೆದರು.

ಜಿಲ್ಲಾ ಕೋರ್ಟ್‌ಗೆ ಬಾಂಬ್ ಬೆದರಿಕೆ: ಕಲಾಪ ಮುಂದೂಡಿಕೆ



ಮಂಡ್ಯ, ಫೆ.16–ಜಿಲ್ಲಾ ನ್ಯಾಯಾಲಯವನ್ನು ಆರ್‌ಡಿಎಕ್ಸ್ ಬಳಸಿ ಸ್ಫೋಟಿಸುವುದಾಗಿ ಇ-ಮೇಲ್ ಮೂಲಕ ಬೆದರಿಕೆ ಕರೆ ಬಂದ ಹಿನ್ನೆಲೆಯಲ್ಲಿ ಸೋಮವಾರ ನಗರದಲ್ಲಿ ಆತಂಕದ ವಾತಾವರಣ ನಿರ್ಮಾಣವಾಯಿತು. ಮುಂಜಾಗ್ರತಾ ಕ್ರಮವಾಗಿ ಕೋರ್ಟ್ ಕಲಾಪವನ್ನು ಮುಂದೂಡಲಾಯಿತು.

ಬೆಳಿಗ್ಗೆ ಎಂದಿನಂತೆ ನ್ಯಾಯಾಲಯದ ಕಲಾಪಗಳು ಆರಂಭಗೊಂಡಿದ್ದವು. ಆದರೆ ಹತ್ತರಿಂದ ಹದಿನೈದು ನಿಮಿಷದಲ್ಲಿಯೇ ಬಂದ ಇ-ಮೇಲ್ ಮಾಹಿತಿಯನ್ನು ಜಿಲ್ಲಾ ನ್ಯಾಯಾಧೀಶರ ಗಮನಕ್ಕೆ ತರಲಾಯಿತು. ಕೂಡಲೇ ಜಿಲ್ಲಾ ನ್ಯಾಯಾಧೀಶರು ಕಲಾಪ ಸ್ಥಗಿತಗೊಳಿಸಿ ಎಲ್ಲರನ್ನೂ ಕೋರ್ಟ್ ಆವರಣದಿಂದ ಹೊರಗೆ ಹೋಗುವಂತೆ ಸೂಚನೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರು, ವಕೀಲರು ಕ್ಷಣಮಾತ್ರದಲ್ಲೇ ನ್ಯಾಯಾಲಯ ಸಂಕೀರ್ಣದಿಂದ ಹೊರಗೆ ಬಂದಿದ್ದಾರೆ.

ಇದಾದ ಕೆಲಹೊತ್ತಿನಲ್ಲಿ ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಇ.ತಿಮ್ಮಯ್ಯ ಹಾಗೂ ಡಿವೈಎಸ್ಪಿ ಲಕ್ಷ್ಮೀನಾರಾಯಣ ಪ್ರಸಾದ್ ನೇತೃತ್ವದಲ್ಲಿ ಅಧಿಕಾರಿ, ಸಿಬ್ಬಂದಿ ಬಾಂಬ್ ನಿಷ್ಕ್ರಿಯ ದಳದ ತಂಡವು ಸ್ಥಳಕ್ಕೆ ಬಂದಿತು. ಜಿಲ್ಲಾ ಅಗ್ನಿಶಾಮಕ ದಳದ ಅಧಿಕಾರಿ ರಾಘವೇಂದ್ರ ನೇತೃತ್ವದ ತಂಡವೂ ಆಗಮಿಸಿತು. ನಂತರ ಬಾಂಬ್ ನಿಷ್ಕ್ರಿಯ ದಳದಿಂದ ಪರಿಶೀಲನೆ ಪ್ರಾರಂಭಿಸಲಾಯಿತು. ಇತ್ತ ಕೋರ್ಟ್ ಆವರಣಕ್ಕೆ ಸಾರ್ವಜನಿಕರು ಬಾರದಂತೆ ಬಂದೋಬಸ್ತ್ ಮಾಡಲಾಗಿತ್ತು. ಸುಮಾರು ಎರಡು ಗಂಟೆ ಕಾಲ ಇಡೀ ನ್ಯಾಯಾಲಯದ ಸಂಕೀರ್ಣವನ್ನು ಪರಿಶೀಲನೆ ಮಾಡಲಾಯಿತು. ಆದರೆ ಯಾವುದೇ ರೀತಿಯ ಸ್ಫೋಟಕ ವಸ್ತುಗಳು ಪತ್ತೆಯಾಗಲಿಲ್ಲ.

ಕೆಮಿಕಲ್ಸ್ ಸಂಗ್ರಹದ ಟ್ಯಾಂಕ್ ಸ್ಫೋಟ: ಇಬ್ಬರು ಕಾರ್ಮಿಕರು ಬಲಿ



ಮಂಡ್ಯ, ಫೆ.16–ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾಗ ಕೆಮಿಕಲ್ಸ್ ಸಂಗ್ರಹದ ಟ್ಯಾಂಕ್ ಸ್ಫೋಟಗೊಂಡು ಇಬ್ಬರು ಕಾರ್ಮಿಕರು ಸ್ಥಳದಲ್ಲಿಯೇ ದುರ್ಮರಣ ಹೊಂದಿರುವ ಘಟನೆ ಬಸರಾಳು ಹೋಬಳಿಯ ಕಾರೇಕಟ್ಟೆ ಗ್ರಾಮದ ಕೀರ್ತಿ ಕೆಮಿಕಲ್ಸ್ ಇಂಡಸ್ಟ್ರೀಸ್‌ನಲ್ಲಿ ಶಿವರಾತ್ರಿ ಹಬ್ಬದ ದಿನವೇ ನಡೆದಿದೆ.

ಉತ್ತರ ಪ್ರದೇಶ ಮೂಲದ ಆಕಾಶ್ (24) ಹಾಗೂ ಅಲ್ಲುಖಾನ್(26) ಮೃತಪಟ್ಟ ದುರ್ದೈವಿಗಳಾಗಿದ್ದಾರೆ. ರವಿ, ಖಾಸೀಂ, ಮಹಾಂತೇಶ್, ರಾಜೀವ್ ಕುಮಾರ್ ತೀವ್ರವಾಗಿ ಗಾಯಗೊಂಡಿದ್ದು, ನಗರದ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಭಾನುವಾರ ಬೆಳಿಗ್ಗೆ 9 ಗಂಟೆಯಲ್ಲಿ 6 ಮಂದಿ ಕಾರ್ಮಿಕರು ಕೆಲಸ ಮಾಡುತ್ತಿದ್ದು, ಬಿಹಾರ ಮೂಲದ ಕಾರ್ಮಿಕರು ತಿಂಗಳಿನಿಂದ ಕೆಲಸ ನಿರ್ವಹಿಸುತ್ತಿದ್ದರು. ಭಾನುವಾರ ರಾಸಾಯನಿಕ ಸಂಗ್ರಹ ಮಾಡಿದ್ದ ಟ್ಯಾಂಕ್ ತೆರವು ಮಾಡುತ್ತಿದ್ದಾಗ ಗ್ಯಾಸ್ ಕಟರ್ ಬಳಸಿಕೊಳ್ಳಲಾಗಿತ್ತು. ಆಗ ರಾಸಾಯನಿಕ ಟ್ಯಾಂಕ್‌ಗೆ ಬೆಂಕಿ ತಾಕಿದ ತಕ್ಷಣ ಸ್ಫೋಟಗೊಂಡಿದೆ. ಸ್ಫೋಟದ ರಭಸಕ್ಕೆ ಆಕಾಶ್ ಹಾಗೂ ಅಲ್ಲುಖಾನ್‌ನ ಮೃತದೇಹಗಳು ಛಿದ್ರವಾಗಿವೆ. ಉಳಿದ ನಾಲ್ಕು ಮಂದಿಗೆ ಗಂಭೀರ ಗಾಯಗಳಾಗಿದ್ದು, ಒಬ್ಬನಿಗೆ ಕೈ ಕಟ್ ಆಗಿದೆ. ಗಾಯಗೊಂಡವರನ್ನು ತಕ್ಷಣ ಜಿಲ್ಲಾಸ್ಪತ್ರೆಗೆ ರವಾನಿಸಲಾಯಿತು.

ಕ್ರಮ ಕೈಗೊಳ್ಳದ ಮಾಲೀಕ: ಕಾರ್ಖಾನೆ ಸ್ಥಳಾಂತರ ಮಾಡಲು ಮುಂದಾಗಿದ್ದ ಮಾಲೀಕ ಯಾವುದೇ ಮುಂಜಾಗ್ರತೆ ವಹಿಸದಿರುವುದೇ ಸ್ಫೋಟ ಸಂಭವಿಸಲು ಕಾರಣವಾಗಿದೆ ಎಂದು ಹೇಳಲಾಗುತ್ತಿದೆ.

ಬಸರಾಳು ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡರು. ಮೃತ ದೇಹಗಳನ್ನು ಜಿಲ್ಲಾಸ್ಪತ್ರೆಗೆ ರವಾನಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹಿಂದೆಯೂ ನಡೆದಿತ್ತು: ನಾಲ್ಕು ವರ್ಷದ ಹಿಂದೆ ಇದೇ ಕಾರ್ಖಾನೆಯಲ್ಲಿ ರಾಸಾಯನಿಕ ಸೋರಿಕೆಯಾಗಿ ನೂರಾರು ಎಕರೆ ಬೆಳೆ ನಾಶವಾಗಿ 2 ನಾಯಿಗಳು ಸಹ ಮೃತಪಟ್ಟಿದ್ದವು. ಅಂದಿನಿಂದಲೂ ಕಾರ್ಖಾನೆ ಆರಂಭಿಸಲು ಗ್ರಾಮಸ್ಥರು, ರೈತರು ತೀವ್ರ ವಿರೋಧವಿದ್ದರಿಂದ ಮಾಲೀಕ ಬೇರೆಡೆ ಸ್ಥಳಾಂತರ ಮಾಡಲು ಮುಂದಾಗಿದ್ದರು.

ಆತ್ಮಲಿಂಗೇಶ್ವರಸ್ವಾಮಿ ಕ್ಷೇತ್ರದಲ್ಲಿ ಕಳೆಗಟ್ಟಿದ ದನಗಳ ಜಾತ್ರೆ



ಹನುಮಂತನಗರ ಆತ್ಮಲಿಂಗೇಶ್ವರಸ್ವಾಮಿ ದೇವಾಲಯದಲ್ಲಿ ಶಿವರಾತ್ರಿ ಹಬ್ಬದ ಅಂಗವಾಗಿ ದನಗಳ ಜಾತ್ರೆ ಜರುಗಿತು.

ಭಾರತೀನಗರ, ಫೆ.16–ಸಮೀಪದ ಹನುಮಂತನಗರದ ಆತ್ಮಲಿಂಗೇಶ್ವರಸ್ವಾಮಿ ಕ್ಷೇತ್ರದಲ್ಲಿ ಶಿವರಾತ್ರಿ ಹಬ್ಬದ ಅಂಗವಾಗಿ ವಿಜೃಂಭಣೆಯಿಂದ ವಿಶೇಷ ಪೂಜಾ ಕೈಂಕರ್ಯಗಳು ನಡೆದು, ಸಹಸ್ರಾರು ಭಕ್ತಾಧಿಗಳು ಆತ್ಮಲಿಂಗೇಶ್ವರ ದೇವಾಲಯಕ್ಕೆ ಆಗಮಿಸಿ ದೇವರ ದರ್ಶನ ಪಡೆದರು.

ದೇವಾಲಯದ ಆವರಣದಲ್ಲಿ ಮೃತ್ಯುಂಜಯ ಹೋಮ ನಡೆಸಿ ಕಳಶ ಸ್ಥಾಪನೆ ಮಾಡಲಾಯಿತು. ಅವಾಹಿತ ಸರ್ವದೇವತೆಗಳಿಗೆ ಹವಿಸ್ಸು ಸಲ್ಲಿಸುವ ಮೂಲಕ ಮಹಾರುದ್ರ ಹೋಮ ನಡೆಸಲಾಯಿತು. ಪ್ರತಿ ಎರಡೂವರೆ ಗಂಟೆಗೊಮ್ಮೆ ಮಹಾಮಂಗಳಾರತಿ ನೆರವೇರಿತು.

ಶಾಸಕ ಮಧು.ಜಿ.ಮಾದೇಗೌಡ, ಭಾರತಿ ಎಜುಕೇಷನ್ ಟ್ರಸ್ಟ್, ಸಿಇಓ ಆಶಯ್ ಮಧು, ಕಾರ್ಯದರ್ಶಿಗಳಾದ ಬಿ.ಎಂ.ನಂಜೇಗೌಡ, ಸಿದ್ದೇಗೌಡ, ಹಾಗೂ ಟ್ರಸಿಗಳು, ಬಿಇಟಿ ಸಂಸ್ಥೆ ಪ್ರಾಂಶುಪಾಲ ಎಸ್.ನಾಗರಾಜು, ತಮಿಜ್‌ಮಣಿ, ಮಹದೇವಸ್ವಾಮಿ, ಮಲ್ಲಿಕಾರ್ಜುನ್, ಪಲ್ಲವಿ, ಜಿ.ಕೃಷ್ಣ ಜವರೇಗೌಡ, ಚಂದನ್, ಪುಟ್ಟಸ್ವಾಮೀಗೌಡ, ರಮ್ಯ ಇತರರು ಪೂಜೆಯಲ್ಲಿ ಪಾಲ್ಗೊಂಡಿದ್ದರು.

ಶಿವರಾತ್ರಿ ಹಬ್ಬದ ಹಿನ್ನೆಲೆಯಲ್ಲಿ ನಡೆದ ದನಗಳ ಜಾತ್ರೆಯಲ್ಲಿ ಈ ಬಾರಿ ಹೆಚ್ಚಿನ ಸಂಖ್ಯೆ ರಾಸುಗಳು ಆಗಮಿಸಿದ್ದು, ಇದರಿಂದ ಜಾತ್ರೆ ಕಳೆಗಟ್ಟಿತ್ತು. ರೈತರೂ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ರಾಸುಗಳನ್ನು ಕೊಳ್ಳುವ ವ್ಯವಹಾರ ನಡೆಸಿದ್ದು, 15 ಲಕ್ಷ ರೂ.ವರೆಗಿನ ಬೆಲೆಯುಳ್ಳ ದನಗಳೂ ಕೂಡ ಆಗಮಿಸಿದ್ದವು. ಸಹಸ್ರಾರು ಮಂದಿ ಭಕ್ತಾಧಿಗಳು ಆತ್ಮಲಿಂಗೇಶ್ವರಸ್ವಾಮಿ ದೇವಾಲಯಕ್ಕೆ ಆಗಮಿಸಿ ದೇವರ ದರ್ಶನ ಪಡೆದು ಪುನೀತರಾದರು.

ಆತ್ಮಲಿಂಗೇಶ್ವರಸ್ವಾಮಿ ಕ್ಷೇತ್ರದಲ್ಲಿ ಪ್ರಕೃತಿ ಆರೋಗ್ಯಧಾಮದ ಸಹಯೋಗದಲ್ಲಿ ಉಚಿತ ನೈಸರ್ಗಿಕ ಚಿಕಿತ್ಸಾ ಶಿಬಿರ ನಡೆಯಿತು. ಶಾಸಕ ಮಧು ಜಿ.ಮಾದೇಗೌಡ ಶಿಬಿರದ ಉದ್ಘಾಟನೆ ನೆರವೇರಿಸಿದರು.

ಶ್ರೀ ಸೌಮ್ಯ ಕೇಶವ ಸ್ವಾಮಿ ದೇವಾಲಯದಲ್ಲಿ ಲಕ್ಷ ದೀಪೋತ್ಸವ



ನಾಗಮಂಗಲ ಪಟ್ಟಣದ ಸುಪ್ರಸಿದ್ಧ ಶ್ರೀಸೌಮ್ಯಕೇಶವ ದೇವಾಲಯದ ಆವರಣದಲ್ಲಿ ನಡೆದ ಲಕ್ಷ ದೀಪೋತ್ಸವಕ್ಕೆ ಸಾವಿರಾರು ಭಕ್ತರು ಸಾಕ್ಷಿಯಾದರು. ಸೌಮ್ಯ ಕೇಶವ ದೇವಸ್ಥಾನ ಮುಂಭಾಗವಿರುವ ಗರುಡ ಕಂಬಕ್ಕೆ ದೀಪ ಬೆಳಗಿಸುವ ಮೂಲಕ ಸಾಂಪ್ರದಾಯಿಕ ಹಾಗೂ ಧಾರ್ಮಿಕ ವಿಧಿ ವಿಧಾನಗಳು ನೆರವೇರಿದವು.


ಸರೋಜಮ್ಮ ನಿಧನ



ಮಂಡ್ಯ, ಫೆ.16– ಕೆ.ಆರ್.ಪೇಟೆ ತಾಲೂಕಿನ ಜೈನಹಳ್ಳಿ ಗ್ರಾಮದ ಲೇಟ್ ತಿಮ್ಮೇಗೌಡ ಅವರ ಧರ್ಮಪತ್ನಿ ಹಾಗೂ ಗ್ರಾಪಂ ಮಾಜಿ ಸದಸ್ಯರಾದ ಸರೋಜಮ್ಮ(78) ಸೋಮವಾರ ಮಧ್ಯಾಹ್ನ ನಿಧನರಾದರು.

ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಸೋಮವಾರ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿ. ನಂಜಪ್ಪ



ಕಿಕ್ಕೇರಿ, ಫೆ.16– ಹೋಬಳಿಯ ಗೋವಿಂದನಹಳ್ಳಿ ಗ್ರಾಮದ ಹಿರಿಯ ನಾಗರೀಕ ಬಿ.ನಂಜಪ್ಪ(86) ಅನಾರೋಗ್ಯದಿಂದ ಭಾನುವಾರ ಮೃತರಾದರು.

ನಿವೃತ್ತ ಶಿಕ್ಷಕರಾದ ಮೃತರು ಅಪಾರ ಶಿಷ್ಯವೃಂದವನ್ನು ಹೊಂದಿ ಚಿರಪರಿಚಿತರಾಗಿದ್ದರು. ಮೃತರಿಗೆ ಶಿಕ್ಷಕ ಬಿ.ಎನ್. ಪರಶಿವಮೂರ್ತಿ ಸೇರಿದಂತೆ ಇಬ್ಬರು ಪುತ್ರರು ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಅವರ ತೋಟದಲ್ಲಿ ಸೋಮವಾರ ನೆರವೇರಿತು.

ವಿಠಲಾಪುರ ಸಣ್ಣತಾಯಮ್ಮ



ಕೆ.ಆರ್ ಪೇಟೆ, ಫೆ.16– ಪಟ್ಟಣದ ಕಲ್ಪತರು ಪ್ರಥಮ ದರ್ಜೆ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷರ ತಾಯಿ ಶ್ರೀಮತಿ ಸಣ್ಣತಾಯಮ್ಮ (81) ನಿಧನ ಹೊಂದಿದ್ದಾರೆ. ಮೃತರು ವಿಠಲಾಪುರ ಜಯರಾಂ ಸೇರಿದಂತೆ ಮೂವರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಫೆ.17 ರ ಬೆಳಿಗ್ಗೆ 11 ಗಂಟೆಗೆ ಸ್ವಗ್ರಾಮ ವಿಠಲಾಪುರದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಜನರೊಂದಿಗೆ ಜೆಡಿಎಸ್ ನಿಖಿಲ್ ಕುಮಾರಸ್ವಾಮಿ ಪ್ರವಾಸ

ಸಂಜೆ 4 ಗಂಟೆಗೆ ಕೆ.ಆರ್.ನಗರದಲ್ಲಿ ತಾಲೂಕು ಅಧ್ಯಕ್ಷ ಹಂಪಾಪುರ ರಾಜಣ್ಣ ಅಧ್ಯಕ್ಷತೆಯಲ್ಲಿ ಸಭೆ ಆಯೋಜಿಸಲಾಗಿದೆ. ಫೆ.24ರಂದು ಸಂಜೆ 4ಕ್ಕೆ ತಿ.ನರಸೀಪುರ ಕ್ಷೇತ್ರದ ಬನ್ನೂರಿನಲ್ಲಿ ಮಾಜಿ ಶಾಸಕ ಅಶ್ವಿನ್ ಕುಮಾರ್ ನೇತೃತ್ವದಲ್ಲಿ ಹಾಗೂ ಫೆ.25ರಂದು ಬೆಳಗ್ಗೆ 11ಕ್ಕೆ ಹುಣಸೂರಿನಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ನೇತೃತ್ವದಲ್ಲಿ ಕಾರ್ಯಕರ್ತರ ಸಭೆ ಸಂಘಟಿಸಲಾಗಿದೆ. ಮೈಸೂರಿನ ಕೆ.ಆರ್.ಕ್ಷೇತ್ರ, ಚಾಮರಾಜ, ನರಸಿಂಹರಾಜ, ಚಾಮುಂಡೇಶ್ವರಿ, ವರುಣ, ಹೆಚ್.ಡಿ.ಕೋಟೆ, ನಂಜನಗೂಡು ಕ್ಷೇತ್ರದ ಕಾರ್ಯಕ್ರಮದ ದಿನಾಂಕವನ್ನು ಶೀಘ್ರದಲ್ಲಿಯೇ ಪ್ರಕಟಿಸಲಾಗುವುದು ಎಂದು ತಿಳಿಸಿದರು. ಮೈಸೂರು ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷವನ್ನು ಪರಿಣಾಮಕಾರಿಯಾಗಿ ಸಂಘಟಿಸುವ ನಿಟ್ಟಿನಲ್ಲಿ ಜಿಲ್ಲಾಧ್ಯಕ್ಷರಾಗಿ ಮಾಜಿ ಶಾಸಕ ಅಶ್ವಿನ್ ಕುಮಾರ್ ಅವರನ್ನು, ನಗರಾಧ್ಯಕ್ಷರಾಗಿ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಅವರನ್ನು ನೇಮಕ ಮಾಡಲಾಗಿದೆ. ಶೀಘ್ರದಲ್ಲಿಯೇ ವಿವಿಧ ಘಟಕಗಳ ಹೊಸ ಪದಾಧಿಕಾರಿಗಳ ನೇಮಕವಾಗಲಿದ್ದು, ಹೊಸ ಅಧ್ಯಕ್ಷರ ನೇತೃತ್ವದಲ್ಲಿ ಮೈಸೂರು ಜಿಲ್ಲೆಯಲ್ಲಿ ಪಕ್ಷ ಸಂಘಟನಾ ಕಾರ್ಯಕ್ರಮ ಮುಂದುವರೆಯಲಿದೆ ಎಂದರು.

> ಜೆಡಿಎಸ್ ಯುವ ನೇತಾರ ನಿಖಿಲ್ ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಫೆ.18ರಿಂದ ಮೈಸೂರು ಭಾಗದಲ್ಲಿ 'ಜನರೊಂದಿಗೆ ಜನತಾದಳ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈಗಾಗಲೇ ರಾಜ್ಯದ 52 ವಿಧಾನಸಭಾ ಕ್ಷೇತ್ರದಲ್ಲಿ ಪ್ರವಾಸ ಮುಗಿಸಿದ್ದು, ಕಾರ್ಯಕರ್ತರು ಹಾಗೂ ಮುಖಂಡರಲ್ಲಿ ಉತ್ಸಾಹ ತುಂಬುವ ಕೆಲಸ ಮಾಡಿದ್ದಾರೆ. ಮೈಸೂರಲ್ಲೂ ಕಾರ್ಯಕ್ರಮ ನಡೆಸುತ್ತಿದ್ದು, ಪಕ್ಷದ, ಮುಖಂಡರು, ಹಿತೈಷಿಗಳು ಪಾಲ್ಗೊಂಡು ಸದಸ್ಯತ್ವ ನೊಂದಣಿ ಅಭಿಯಾನವನ್ನು ಯಶಸ್ವಿಗೊಳಿಸಲಿದ್ದಾರೆ.
>
> **- ಜಿ.ಡಿ.ಹರೀಶ್ ಗೌಡ, ಶಾಸಕ**

> ಮೈಸೂರಲ್ಲಿ ಜನರೊಂದಿಗೆ ಜನತಾದಳ ಕಾರ್ಯಕ್ರಮ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ನಡೆಯುತ್ತಿದ್ದು, ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳಲಾಗಿದೆ. ಮೈಸೂರು ಜಿಲ್ಲೆಯ ವಿವಿಧ ವಿಧಾನಸಭಾ ಕ್ಷೇತ್ರ ಮಾತ್ರವಲ್ಲದೆ, ಚಾಮರಾಜನಗರದಲ್ಲಿ ನಡೆಯುವ ಕಾರ್ಯಕ್ರಮದಲ್ಲೂ ನಿಖಿಲ್ ಕುಮಾರಸ್ವಾಮಿ ಪಾಲ್ಗೊಳ್ಳಲಿದ್ದಾರೆ.
>
> **-ಅಶ್ವಿನ್ ಕುಮಾರ್, ಜೆಡಿಎಸ್ ಜಿಲ್ಲಾಧ್ಯಕ್ಷ**

ಸಿಎಂ ತವರೂರಲ್ಲೇ ಕೆರೆ ಕಬಳಿಸಲು ಸಂಚು: ಮೈಸೂರು ನಗರದ ಕೆ.ಸಿ.ನಗರದಲ್ಲಿ ಕೆರೆ ಕಬಳಿಸಲು ನಡೆಸಿರುವ ಸಂಚನ್ನು ಇತ್ತೀಚೆಗಷ್ಟೇ ಶಾಸಕ ಟಿ.ಎಸ್.ಶ್ರೀವತ್ಸ ಬಯಲು ಮಾಡಿದ್ದರು. ಸದ್ಯ ತಹಶೀಲ್ದಾರ್ ಸ್ಥಳಕ್ಕೆ ಹೋಗಿ ಖಾಸಗಿ ವ್ಯಕ್ತಿಗಳಿಂದ ಒತ್ತುವರಿಯಾಗಿದ್ದ ಕೆರೆ ಒತ್ತುವರಿ ತೆರವು ಮಾಡಿದ್ದಾರೆ. ಇದು ಶ್ಲಾಘನೀಯ. ಕೆರೆ ಒತ್ತುವರಿ ಜಿಲ್ಲೆಯಾದ್ಯಂತ ನಡೆದಿದೆ.

ಅಧಿಕಾರಕ್ಕಾಗಿ ಮಾತ್ರ ಹಿಂದುಳಿದ ವರ್ಗ: ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಅವರು 'ಹಿಂದುಳಿದ ವರ್ಗಗಳು ಒಂದಾದರೆ ದೊಡ್ಡ ಶಕ್ತಿಯಾಗುತ್ತದೆ' ಎಂದು ನೀಡಿರುವ ಹೇಳಿಕೆಗೆ ಸಾ.ರಾ. ಮಹೇಶ್ ಪ್ರತಿಕ್ರಿಯಿಸಿ, ಹೌದು, ಹಿಂದುಳಿದ ವರ್ಗಗಳು ಸಂಘಟನೆಯಾದರೆ ದೊಡ್ಡ ಶಕ್ತಿಯಾಗುತ್ತದೆ. ಅಧಿಕಾರಕ್ಕೆ ಬರಬೇಕಾದರೆ ಮಾತ್ರ ಅವರಿಗೆ ಹಿಂದುಳಿದ ವರ್ಗ ನೆನಪಾಗುತ್ತದೆ. ಮನೆಯಲ್ಲಿಯೇ ಮುಖ್ಯಮಂತ್ರಿಯಿದ್ದರೂ ಅವರೇಕೆ ವಿಧಾನ ಪರಿಷತ್ ಸದಸ್ಯರಾದರು? ಅವರ ಬದಲು ಬೇರೆ ಯಾರಾದರೂ ಹಿಂದುಳಿದ ವರ್ಗದ ನಾಯಕರನ್ನು ಎಂಎಲ್ಸಿ ಮಾಡಬಹುದಿತ್ತು. ಅಲ್ಲದೆ ಅವರೊಬ್ಬರು ವೈದ್ಯರಾಗಿದ್ದಾರೆ. ಸಮಾಜ ಸೇವೆ ಮಾಡಲು ವೈದ್ಯರಾಗಿದ್ದು ಸಾಕಾಗಲಿಲ್ಲವೇ? ಸಿಎಂ ನಿವೃತ್ತಿ ನಂತರವಾದರೂ ಇವರು ರಾಜಕೀಯಕ್ಕೆ ಬರಬಹುದಿತ್ತು ಎಂದು ಟಾಂಗ್ ನೀಡಿದರು.

ವಿದೇಶಿ ಪ್ರವಾಸಕ್ಕೆ ಸೂಕ್ತ ಸಮಯವಲ್ಲ: ಕಾಂಗ್ರೆಸ್ ಶಾಸಕರು ವಿದೇಶ ಪ್ರವಾಸಕ್ಕೆ ಹೋಗುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಇದು ವಿದೇಶಕ್ಕೆ ಪ್ರವಾಸ ಕೈಗೊಳ್ಳುವ ಸಮಯವಲ್ಲ. ಈಗಾಗಲೇ ಸರ್ಕಾರ ದಿವಾಳಿಯಾಗಿದೆ. ಎಲ್ಲಾ ಬೆಲೆಗಳು ಗಗನಕ್ಕೇರಿವೆ. ಇಂತಹ ಸಂದರ್ಭದಲ್ಲಿ ಜನ ಪ್ರತಿನಿಧಿಗಳು ವಿದೇಶ ಪ್ರವಾಸ ಕೈಗೊಳ್ಳುವುದು ಸೂಕ್ತವಲ್ಲ. 17 ಸಲ ಬಜೆಟ್ ಮಂಡಿಸಿದವರು ಕಾಂಗ್ರೆಸ್ ಶಾಸಕರನ್ನು ವಿದೇಶ ಪ್ರವಾಸಕ್ಕೆ ಕಳುಹಿಸುತ್ತಿದ್ದಾರೆ. ಅಭಿವೃದ್ಧಿ ಕೆಲಸಗಳಿಗೆ ಅನುದಾನ ಇಲ್ಲವಾಗಿದೆ. ಬೆಲೆ ಏರಿಕೆ ತಡೆಯುವುದನ್ನು ಬಿಟ್ಟು ಶಾಸಕರ ಪ್ರವಾಸ ಆಯೋಜಿಸಿ ಜನರ ಮೇಲೆ ಹೊರೆ ಹೊರಿಸುತ್ತಿದ್ದಾರೆ. ಪ್ರವಾಸದ ಬಿಲ್ ಎಷ್ಟು ಆಗಿದೆ ಎಂದು ನೋಡಿದ ಬಳಿಕ ಈ ಕುರಿತು ಮಾತನಾಡುವುದಾಗಿ ತಿಳಿಸಿದರು.

ಎಲ್ಲರಿಗೂ ಸಚಿವರ ಸ್ಥಾನಮಾನ; ಎಲ್ಲ ನಿಗಮಗಳ ಅಧ್ಯಕ್ಷರಿಗೂ ಸಚಿವ ಸ್ಥಾನಮಾನ ನೀಡಿದ್ದಾರೆ. ಇದು ಒಂದು ಸಾಲ ಮಾಡಿಯಾದರೂ ತುಪ್ಪ ತಿನ್ನಿ ಎಂಬಂತಾಗಿದೆ. ಸಮಾದಾನ ಮಾಡಲು ಪ್ರವಾಸಕ್ಕೆ ಕರೆದೊಯ್ಯುತ್ತಿರುವ ಅನುಮಾನವಿದೆ. ಅಲ್ಲದೆ, ಸೂಟ್‌ಕೇಸ್ ನೀಡುವ ಶಂಕೆಯೂ ಇದೆ. ಸರ್ಕಾರದಲ್ಲಿ ಎಷ್ಟು ಬಿಲ್‌ಗಳು ಬಾಕಿಯಿವೆ? ಎಷ್ಟು ಕಾಮಗಾರಿ ಬಾಕಿಯಿವೆ ಯಾವ ಉದ್ದೇಶಕ್ಕಾಗಿ ಶಾಸಕರನ್ನು ವಿದೇಶಕ್ಕೆ ಕಳುಹಿಸುತ್ತಿದ್ದೀರಿ ಎಂದು ಸರ್ಕಾರವೇ ಸ್ಪಷ್ಟಪಡಿಸಬೇಕು ಎಂದರು.

ಎಂಎಲ್‌ಸಿ ಸಿ.ಎನ್. ಮಂಜೇಗೌಡ, ಮಾಜಿ ಶಾಸಕ ಕೆ.ಮಹ ದೇವು, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ, ಎನ್.ವಿ ರವಿಕುಮಾರ್, ಭಾಗ್ಯವತಿ, ಜಿಪಂ ಮಾಜಿ ಅಧ್ಯಕ್ಷ ಸಿ.ಜೆ. ದ್ವಾರಕೀಶ್, ವರುಣ ಜೆಡಿಎಸ್ ಅಭ್ಯರ್ಥಿ ಅಭಿಷೇಕ್, ಚಾಮರಾಜ ಕ್ಷೇತ್ರದ ಜೆಡಿಎಸ್ ರಮೇಶ್, ಜೆಡಿಎಸ್ ಎಸ್‌ಬಿಎಂ ಮಂಜು ಇನ್ನಿತರರು ಉಪಸ್ಥಿತರಿದ್ದರು.

ಅಡ್ಡವಾಗಿರುವ ಮೈಸೂರು ಅಭಿವೃದ್ಧಿ ಪ್ರಾಧಿಕಾರ!

ಹರಾಜು ಹಾಕಲಾಗಿತ್ತು. ಈ ವೇಳೆ ಆರ್‌ಟಿಐ ಕಾರ್ಯಕರ್ತನೊಬ್ಬ ಆ ವಾಹನಗಳ ಆರ್‌ಸಿ ಕಾರ್ಡ್ ನೀಡುವಂತೆ ಕೇಳಿದ್ದ. ಆದರೆ, ಎಂಡಿಎ ಇಂಜಿನಿಯರ್ ಆ ವಾಹನ ಸ್ಕ್ರ್ಯಾಪ್ ಆಗಿರುವುದರಿಂದ ಅವುಗಳ ಆರ್‌ಸಿ ಕಾರ್ಡ್ ನೀಡಲು ಬರುವುದಿಲ್ಲ ಎಂದಿದ್ದರು.

ಆದರೆ ಆ ಆರ್‌ಟಿಐ ಕಾರ್ಯಕರ್ತ ತನ್ನ ಪ್ರಭಾವ ಹಾಗೂ ಹಿರಿಯ ಅಧಿಕಾರಿಗಳ ಬೆಂಬಲದಿಂದ ಇಂಜಿನಿಯರ್‌ನನ್ನೇ ವರ್ಗಾವಣೆ ಮಾಡಿಸಿದ್ದಾನೆ. ಮಾತ್ರವಲ್ಲ ಆ ಸಂಭ್ರಮವನ್ನು ಎಂಡಿಎ ಕಚೇರಿಗೆಲ್ಲ ಸಿಹಿ ಹಂಚಿದ್ದಾನೆ. ಅದು ಆಯುಕ್ತರ ಪಿಎ ಸೆಕ್ಷನ್‌ನಲ್ಲಿ ಸ್ವೀಟ್ ಬಾಕ್ಸ್ ಇರಿಸಿಕೊಂಡು , ಟ್ರೇನಲ್ಲಿ ಸ್ವೀಟ್ ಪೊಟ್ಟಣಗಳನ್ನು ಹಾಕಿಕೊಂಡು ಸೆಕ್ಷನ್‌ಗಳಿಗೆಲ್ಲಾ ತಾನೇ ಹೋಗಿ ಆರ್‌ಟಿಐ ಕಾರ್ಯಕರ್ತ ಹಂಚಿದ್ದಾನೆ. ಇದು ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಜಿಲ್ಲೆಯಲ್ಲಿ ನಡೆಯುತ್ತಿರುವ ಆಡಳಿತ ವೈಖರಿ. ಇಂತಹ ಆರ್‌ಟಿಐ ಕಾರ್ಯಕರ್ತರಿಗೆ ಅಧಿಕಾರಿಗಳೆ ಹೆದರಿ, ಆತ ಕೇಳಿದ ದಾಖಲೆ ಎತ್ತಿ ಕೊಡುತ್ತಿದ್ದಾರೆ. ಪ್ರಾದಿಕಾರದಲ್ಲಿ ಜನರ ಕೆಲಸ ನಡೆಯುತ್ತಿಲ್ಲ. ಇಂತಹ ಆರ್‌ಟಿಐ ಕಾರ್ಯಕರ್ತರ ಕೆಲಸ ಬಹಳ ಬೇಗ ಆಗುತ್ತದೆ. ಗುಪ್ತಚರ ಇಲಾಖೆ ಏನು ಮಾಡುತ್ತಿದೆ ಎಂದು ಪ್ರಶ್ನಿಸಿದರು. ಸಾಂಸ್ಕೃತಿಕ ನಗರಿಯಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ ಮುಖ್ಯಮಂತ್ರಿಗಳು ಬಿಡುವಾದರೆ ಗಮನ ಹರಿಸಬೇಕು ಎಂದರು.

> **ಜೂನ್‌ಗೆ ಸೆಲೆಬ್ರಟಿ ತೆರೆಗೆ**
>
> **ತಮ್ಮ ನಿರ್ಮಾಣದ ಸೆಲೆಬ್ರಟಿ ಚಿತ್ರವೂ ಜೂನ್‌ಗೆ ತೆರೆಕಾಣಲಿದೆ. ಸಂಸಾರಿಕ ಹಾಗೂ ಪ್ರೀತಿ ಎರಡನ್ನು ಒಳಗೊಂಡ ಚಿತ್ರ ಇದಾಗಿದೆ. ಮತ್ತೊಂದು ಚಿತ್ರವೂ ಚಿತ್ರೀಕರಣ ನಡೆಯುತ್ತಿದ್ದು ಬಿಡುಗಡೆ ದಿನಾಂಕ ನಿಗಧಿಯಾಗಿಲ್ಲ. ರಾಜಕೀಯದೊಂದಿಗೆ ಸಿನಿಮಾ ಕ್ಷೇತ್ರದಲ್ಲಿಯೂ ಮುಂದುವರೆಯುವೆ.**
>
> **-ಸಾ.ರಾ.ಮಹೇಶ್, ಜೆಡಿಎಸ್ ಕಾರ್ಯಾಧ್ಯಕ್ಷ**



ಮನವಿ ಸಲ್ಲಿಕೆ...

ಬಜೆಟ್ ಪೂರ್ವಭಾವಿ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕರ್ನಾಟಕ ರಾಜ್ಯ ಲಿಕ್ಕರ್ ಡೆವಲಪ್ಮೆಂಟ್ ಸೊಸೈಟಿಯ ಅಧ್ಯಕ್ಷರಾದ ಎಸ್.ಚಂದ್ರಶೇಖರ್ ನೇತೃತ್ವದಲ್ಲಿ ಮಂಡ್ಯ ಜಿಲ್ಲಾಧ್ಯಕ್ಷ ಹೆಚ್.ಪಿ. ಮಹೇಶ್, ಉಪಾಧ್ಯಕ್ಷ ಎ.ಎನ್. ಗೋವಿಂದರಾಜ, ನಿರ್ದೇಶಕರುಗಳಾದ ಜಿ.ಆರ್. ಚೆನ್ನಕೇಶವ, ಪಿ.ಗೋವಿಂದರಾಜ್, ಕೃಷ್ಣಪ್ಪ, ಶಿವಕುಮಾರ್, ಪ್ರವೀಣ್ ಕುಮಾರ್ ಇತರರು ಅಬಕಾರಿ ಬೇಡಿಕೆಗಳಿಗೆ ಸಂಬಂಧಿಸಿದಂತೆ ಮನವಿಯನ್ನು ಸಲ್ಲಿಸಿದರು.

ಕೆರೆ ಒತ್ತುವರಿ ಸಂಪೂರ್ಣ ತೆರವು

ಕೆರೆ ಒತ್ತುವರಿ ತೆರವು ಕಾರ್ಯಾಚರಣೆ ಆರಂಭಿಸಿದರು. ಈ ವೇಳೆ ಸ್ಥಳಕ್ಕೆ ಬಂದ ಪೀಟರ್ ಫಾರ್ಮ್ ಹೌಸ್‌ನ ಪ್ರತಿನಿಧಿ ಮನು ಅವರು, ಕೆರೆ ಒತ್ತುವರಿಯನ್ನು ಸ್ವಯಂ ತೆರವುಗೊಳಿಸಲು ಒಂದು ದಿನದ ಕಾಲಾವಕಾಶ ಕೋರಿದ್ದರು. ಇದಕ್ಕೆ ಜಿಲ್ಲಾಡಳಿತ ಸಮ್ಮತಿಸಿ, ಗಡುವಿನೊಳಗೆ ಕಾಂಪೌಂಡ್ ತೆರವು ಮಾಡದಿದ್ದರೆ ಧ್ವಂಸಗೊಳಿಸುವ ಎಚ್ಚರಿಕೆ ನೀಡಿತ್ತು. ಈಗ ನಿಗದಿತ ಸಮಯದೊಳಗೆ ಕೆರೆ ಒತ್ತುವರಿಯನ್ನು ತೆರವು ಮಾಡಿದ್ದಾರೆ. ಈ ಮೂಲಕ ಕೆ.ಸಿ.ನಗರ ಕೆರೆ ಒತ್ತುವರಿ ಪ್ರಕರಣ ಸದ್ಯಕ್ಕಂತೂ ಇತ್ಯರ್ಥಗೊಂಡಿದೆ.

ಒತ್ತುವರಿ ಕಡಿವಾಣಕ್ಕೆ ಶಾಶ್ವತ ಪರಿಹಾರ ಅಗತ್ಯ

ಕೆ.ಸಿ.ನಗರದ ಕೆರೆಯನ್ನು ಆಗಾಗೆ ಒತ್ತುವರಿ ಮಾಡಿಕೊಳ್ಳುವ ಪ್ರಯತ್ನ ನಡೆದಿದೆ. ಈ ಹಿನ್ನೆಲೆಯಲ್ಲಿ ಇದಕ್ಕೆ ಶಾಶ್ವತ ಪರಿಹಾರ ರೂಪಿಸುವ ಅಗತ್ಯವಿದೆ.

ಇನ್ನು ಮುಂದೆ ಯಾರೂ ಕೂಡ ಕೆರೆ ಒತ್ತುವರಿ ಮಾಡಿಕೊಂಡು ಅದನ್ನು ಸಂಪೂರ್ಣವಾಗಿ ಮುಚ್ಚಿ ಹಾಕುವ ಪ್ರಯತ್ನ ಮಾಡಬಾರದು.

ಈ ಸಂಬಂಧ ಜಿಲ್ಲಾಡಳಿತ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಕೆರೆ ಒತ್ತುವರಿ ಮಾಡಿಕೊಳ್ಳುವವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಇಲ್ಲದಿದ್ದರೆ ಪದೇ ಪದೆ ಕೆರೆ ಒತ್ತುವರಿಯಂತಹ ಪ್ರಕರಣಗಳು ನಡೆಯುತ್ತಲೆ ಇರುತ್ತವೆ.

ಈಗ 3 ಎಕರೆ 17 ಗುಂಟೆ ಕೆರೆ ಜಾಗದ ಒತ್ತುವರಿಯನ್ನು ತಾಲೂಕು ಆಡಳಿತ ತೆರವುಗೊಳಿಸಿದೆ. ಕೆರೆಯ ಸುತ್ತ ತಂತಿ ಬೇಲಿ ಅಥವಾ ಕಾಂಪೌಂಡ್ ನಿರ್ಮಿಸಬೇಕು. ಜೊತೆಗೆ ಇದು ಸರ್ಕಾರದ ಆಸ್ತಿ, ಕೆರೆ ಎಂದು ಫಲಕ ಅಳವಡಿಸಬೇಕು. ಯಾರಾದರೂ ಕೆರೆ ಒತ್ತುವರಿ ಅಥವಾ ಅತಿಕ್ರಮಣ ಮಾಡಿದರೆ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಬೇಕು ಎಂಬುದು ಪರಿಸರ ವಾದಿಗಳ ಆಗ್ರಹವಾಗಿದೆ.

ಚಾಮುಂಡಿಬೆಟ್ಟದಿಂದ ಮಳೆ ನೀರು ಅಂಜಲಿ ಫಾರ್ಮ್ ಮೂಲಕ ಕೆ.ಸಿ. ನಗರದ ಕೆರೆಗೆ ಬರುತ್ತಿತ್ತು. ಆದರೆ ಕೆರೆಗೆ ನೀರು ಹಾದು ಹೋಗುತ್ತಿದ್ದ ರಾಜಾ ಕಾಲುವೆಯನ್ನು ಕೆಲವರು ಅತಿಕ್ರಮಿಸಿ ಮನೆ ನಿರ್ಮಿಸಿದ್ದಾರೆ. ಇನ್ನು ಕೆಲವರು ನಿವೇಶನವಾಗಿ ಖಾಲಿ ಬಿಟ್ಟಿದ್ದಾರೆ. ಇದರಿಂದ ಕೆರೆ ಹೆಸರಿಗೆ ಮಾತ್ರ ಇದೆಯೇ ಹೊರತು, ಅಲ್ಲಿ ನೀರಿಲ್ಲ. ಇವುಗಳನ್ನು ತೆರವುಗೊಳಿಸಿದರೆ ಕೆರೆಗೆ ಜೀವಂತಿಕೆ ಬರಲಿದೆ.

ಕಾನೂನು ತಜ್ಞರ ಜೊತೆ ಸಮಾಲೋಚಿಸಿ ಕ್ರಮದ ಚಿಂತನೆ

ಕೆರೆ ಒತ್ತುವರಿಯನ್ನು ತೆರವುಗೊಳಿಸಲಾಗಿದ್ದರೂ ಭೂ ಅತಿಕ್ರಮಣಕಾರರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ ಎಂಬ ಪ್ರಶ್ನೆ ಈಗ ಎದುರಾಗಿದೆ.

ಈ ಬಗ್ಗೆ 'ಮೈಸೂರು ಮಿತ್ರ'ಗೆ ಪ್ರತಿಕ್ರಿಯೆ ನೀಡಿದ ಮೈಸೂರು ತಾಲೂಕು ತಹಶೀಲ್ದಾರ್ ಕೆ.ಎಂ. ಮಹೇಶ್‌ಕುಮಾರ್, ಈಗಿರುವ ಕೆ.ಸಿ.ನಗರದ 33 ಎಕರೆಯನ್ನು ಮುನಿಯಮ್ಮ ಅವರು ಮಹಾರಾಜರಿಂದ ನೇರವಾಗಿ ಖರೀದಿ ಮಾಡಿದ್ದರು. ಪೀಟರ್ ಅವರು ಮುನಿಯಮ್ಮ ಅವರಿಂದ ಭೂಮಿ ಖರೀದಿಸಿದ್ದರು ಎಂದು. ನಮ್ಮ ಸರ್ಕಾರದ ದಾಖಲಾತಿ ಹಾಗೂ ನಕ್ಷೆಯಲ್ಲಿ ಕೆರೆ ಜಾಗವೆಂದು ಸ್ಪಷ್ಟವಾಗಿ ಉಲ್ಲೇಖವಿದೆ ಎಂದು ತಿಳಿಸಿದರು. ಆದರೆ ತಾವು ಖರೀದಿಸಿರುವ ದಾಖಲಾತಿಯಲ್ಲಿ ಖಾಸಗಿ ಭೂಮಿ ಎಂಬ ವಿವರವಿದೆ ಎಂದು ಪೀಟರ್ ವಾದಿಸುತ್ತಾರೆ. ಅಲ್ಲದೆ ಕುರುಬರಹಳ್ಳಿ ಸರ್ವೆ ನಂಬರ್ 4 ರಲ್ಲಿ ಬರುವ ಎಲ್ಲಾ ಭೂಮಿ ಖಾಸಗಿ ಭೂಮಿ ಎಂದು 2021 ರಲ್ಲಿ ಸುಪ್ರೀಂಕೋರ್ಟ್ ತೀರ್ಪು ನೀಡಿದೆ ಎಂದು ಹೇಳಿದ್ದಾರೆ. ಪೀಟರ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಸಂಬಂಧ ಮೇಲಧಿಕಾರಿಗಳ ಜೊತೆ ಸಮಾಲೋಚನೆ ನಡೆಸಲಾಗುವುದು. ತರುವಾಯ ಏನು ಮಾಡಬೇಕೆಂದು ಸರ್ಕಾರದ ಅಭಿಪ್ರಾಯ ಕೋರಿ, ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮಹೇಶ್ ಕುಮಾರ್ ಹೇಳಿದರು.

ಪವಿತ್ರಾಗೆ ಮತ್ತೆ ಜಾಮೀನು ನಿರಾಕರಣೆ

ಬೆಂಗಳೂರು: ರೇಣುಕಾ ಸ್ವಾಮಿ ಕೊಲೆ ಕೇಸ್‌ನಲ್ಲಿ ಎ1 ಪವಿತ್ರಾ ಗೌಡ ಅವರು ಜಾಮೀನು ಪಡೆಯಬೇಕು ಎಂದು ಎಲ್ಲಿಲ್ಲದ ಪ್ರಯತ್ನ ಮಾಡುತ್ತಿದ್ದಾರೆ. ಆದರೆ, ಅದು ಸಾಧ್ಯವಾಗುತ್ತಿಲ್ಲ. ಈಗ ಮಗಳಿಗೆ ಪರೀಕ್ಷೆ ಸಮೀಪಿಸಿದ್ದರಿಂದ ಮಧ್ಯಂತರ ಜಾಮೀನು ನೀಡಬೇಕು ಎಂದು ಪವಿತ್ರಾ ಅವರು ಕೋರ್ಟ್‌ನಲ್ಲಿ ಕೋರಿದ್ದರು. ಆದರೆ, ಕೋರ್ಟ್ ಈ ಮನವಿಯನ್ನು ತಿರಸ್ಕರಿಸಿದೆ. ಇದರಿಂದ ಜೈಲುವಾಸ ಮುಂದುವರಿಸಬೇಕಾದ ಅನಿವಾರ್ಯತೆ ಎದುರಾಗಿದೆ. ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪವಿತ್ರಾ ಗೌಡ ಅವರು ಎ1 ಆರೋಪಿ ಆಗಿದ್ದಾರೆ. ದರ್ಶನ್ ಎ2 ಆಗಿದ್ದಾರೆ. ಪವಿತ್ರಾಗೆ ಇರೋದು ಒಂದೇ ಮಗಳು ಮಾತ್ರ ಅವಳಿಗೆ ಪರೀಕ್ಷೆ ಸಮೀಪಿಸಿದೆ. ಹೀಗಾಗಿ, 25 ದಿನಗಳ ಮಧ್ಯಂತ ಜಾಮೀನು ನೀಡಿ ಎಂದು ಕೋರ್ಟ್‌ನಲ್ಲಿ ಮನವಿ ಮಾಡಿದ್ದರು. ಆದರೆ, ಇದನ್ನು ಕೋರ್ಟ್ ನಿರಾಕರಿಸಿದೆ. ಬೆಂಗಳೂರಿನ 57ನೇ ಸಿಸಿಹೆಚ್ ಕೋರ್ಟ್ ಪವಿತ್ರಾಗೆ ಜಾಮೀನು ನೀಡಲು ನಿರಾಕರಿಸಿದೆ.

ಶಿವದೀಪೋತ್ಸವ



ಮೈಸೂರಿನ ಕನ್ನೇಗೌಡನಕೊಪ್ಪಲು ಮರುಳೇಶ್ವರ ದೇವಸ್ಥಾನದ ಧರ್ಮದರ್ಶಿ ಟ್ರಸ್ಟ್ ಹಾಗೂ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಸಹಯೋಗದಲ್ಲಿ ಮರುಳೇಶ್ವರ ದೇವಸ್ಥಾನದ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ 'ಶಿವದೀಪೋತ್ಸವ' ಅಹೋರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಂಗೀತ ವಿದ್ವಾನ್ ಆರ್.ರಘು ಅವರು ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ ಪ್ರಸ್ತುತಪಡಿಸಿದರು. ವಿದ್ವಾನ್ ಶಾಂತಕುಮಾರ್ ವಯೋಲಿನ್, ವಿದ್ವಾನ್ ನಟರಾಜ್ ಮೃದುಗ ಹಾಗೂ ವಿದ್ವಾನ್ ಮೋಹನ್ ಮೋರ್ಚಿಂಗ್ ವಾದ್ಯ ಸಹಕಾರ ನೀಡಿದರು.

ನಾಯಕತ್ವ ಬದಲಾವಣೆ ಮಾತಿನ ವರಸೆ

ಜಾತಿ ಪದ್ಧತಿ, ವರ್ಣಾಶ್ರಮ ಇದೆಯಾ ಇದನ್ನೆಲ್ಲವನ್ನೂ ಅಧ್ಯಯನ ಮಾಡಬಹುದು. ನ್ಯೂಜಿಲೆಂಡ್‌ಗೆ ನಾನು ಒಮ್ಮೆ ಹೋಗಿದ್ದೆ. ಅಲ್ಲಿ ಜಾತಿಯೇ ಇಲ್ಲ. ಶೇ.40 ರಷ್ಟು ಜನ ಜಾತಿಯನ್ನೇ ಹೇಳಲ್ಲ ಎಂದಿದ್ದಾರೆ. ನಾನು ಅಂಬೇಡ್ಕರ್ ಸಿದ್ಧಾಂತ ಇಟ್ಟುಕೊಂಡವನು. ಅಂಬೇಡ್ಕರ್ ಅವರು ವ್ಯಕ್ತಿ ಪೂಜೆ ಮಾಡಬೇಡಿ ಅಂತ ಹೇಳಿದ್ದರು. ವ್ಯಕ್ತಿ ಪೂಜೆ ಸರ್ವಾಧಿಕಾರಿಯನ್ನ ಸೃಷ್ಟಿಸುತ್ತದೆ. ನಾನು ಸಿದ್ದರಾಮಯ್ಯನವರ ಪೂಜೆ ಮಾಡಿಲ್ಲ. ಬುದ್ಧ, ಬಸವ, ಅಂಬೇಡ್ಕರ್ ಅವರನ್ನು ಪೂಜೆ ಮಾಡೋದು. ನಾನು ನೊಂದೂ ಇಲ್ಲ, ಬೆಂದೂ ಇಲ್ಲ. ಸದಾಶಿವನಗರದವರು ಎಲ್ಲೆಲ್ಲಿ ನೊಂದಿದ್ದಾರೆ ನೀವೇ ಕೇಳಿ ಸೂಚ್ಯವಾಗಿ ಪ್ರಶ್ನಿಸಿದ್ದಾರೆ.

ಡಾ.ಹೆಚ್.ಸಿ.ಮಹದೇವಪ್ಪ, ವಿರೋಧಿಗಳಿಗೆ ಟಾಂಗ್ ನೀಡುವಾಗ ನಾಯಿ ಪದ ಬಳಸಿರುವುದು ಮೊದಲೇನಲ್ಲ. 2021ರ ಫೆಬ್ರವರಿಯಲ್ಲಿ ಮೈಸೂರಿನಲ್ಲಿ ಸಿದ್ದರಾಮಯ್ಯ ಅವರ ವಿರುದ್ಧ ಗುಂಪೊಂದು ಘೋಷಣೆ ಕೂಗಿದ್ದರ ಬಗ್ಗೆ ಪ್ರತಿಕ್ರಿಯಿಸುವಾಗಲೂ ಆನೆ ಹೋಗುತ್ತದೆ, ನಾಯಿ ಬೊಗಳುತ್ತದೆ. ಅದರಿಂದ ಏನು ಆಗೋಲ್ಲ ಎಂದಿದ್ದರು.

ಮೈಸೂರು ಮಿತ್ರ

ಸೆಸ್ಕ್‌ಗೆ 528.12 ಕೋಟಿ ರೂ.ಗಳ ನಷ್ಟ

ಈ ನಷ್ಟ ಸರಿದೂಗಿಸುವಂತೆ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಮನವಿ

ಮೈಸೂರು,ಫೆ.16(ಎಂಟಿವೈ)–ವಿದ್ಯುತ್ ಖರೀದಿ ಸೇರಿದಂತೆ ಇನ್ನಿತರ ಮೂಲಗಳಿಂದ ಸೆಸ್ಕ್‌ಗೆ 528.12 ಕೋಟಿ ರೂ. ನಷ್ಟವುಂಟಾಗುತ್ತಿದ್ದು, ಇದನ್ನು ಸರಿದೂಗಿಸುವಂತೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತವು ಪ್ರಸ್ತಾವನೆ ಸಲ್ಲಿಸಿದೆ.

ಮೈಸೂರಿನ ಜಿಪಂ ಸಭಾಂಗಣದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷ ಪಿ.ರವಿಕುಮಾರ್ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಆರ್ಥಿಕ ವರ್ಷ 2024–25ನೇ ಸಾಲಿನ ವಾರ್ಷಿಕ ಕಾರ್ಯ ನಿರ್ವಹಣಾ ಪರಿಶೀಲನೆ ಅರ್ಜಿಯ ಬಗ್ಗೆ ಸಾರ್ವಜನಿಕ ವಿಚಾರಣೆ ಸಭೆಯಲ್ಲಿ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲರಾಜು ಕಳೆದ ವರ್ಷಗಳ ಪ್ರಗತಿ ಮತ್ತು ಸಾಧನೆಗಳ ವಿವರಣೆ ನೀಡಿ, ನಿವ್ವಳ ಆದಾಯ ಕೊರತೆಯನ್ನು ಸರಿದೂಗಿಸಲು ಮನವಿ ಮಾಡಿದರು.

ಸಭೆಯಲ್ಲಿ ಆಯೋಗದ ಅಧ್ಯಕ್ಷ ಪಿ.ರವಿಕುಮಾರ್ ಮಾತನಾಡಿ, ಪ್ರತಿವರ್ಷಕ್ಕೊಮ್ಮೆ ವಿದ್ಯುತ್ ದರ ಹೆಚ್ಚಳಕ್ಕೆ ಅನುಮತಿ ನೀಡಲಾಗುತ್ತಿತ್ತು. ಆದರೆ, ಈಗ ಮೂರು ವರ್ಷಕ್ಕೊಮ್ಮೆ ವಿದ್ಯುತ್ ದರ ಏರಿಕೆ ಮಾಡಲಾಗುತ್ತಿದೆ. ಹಾಗಾಗಿ, ಇದು ದರ ಏರಿಕೆ ಸಭೆಯಲ್ಲ. ಕಾರ್ಯ ನಿರ್ವಹಣಾ ಪರಿಶೀಲನಾ ಅರ್ಜಿ ಕುರಿತಂತೆ ಸಾರ್ವಜನಿಕ ವಿಚಾರಣೆ ನಡೆಯಲಿದೆ. ದರ ಹೆಚ್ಚಳಕ್ಕೂ ಮತ್ತು ಈ ಸಭೆಗೂ ಯಾವುದೇ ಸಂಬಂಧವಿಲ್ಲ. ಕರ್ನಾಟಕ ವಿದ್ಯುತ್ ಸರಬರಾಜು ಕಂಪನಿಗಳು 2026–27ನೇ ಸಾಲಿನಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಗ್ರಾಹಕರಿಗೆ ದರ ಹೆಚ್ಚಳಕ್ಕೆ ಮನವಿ ಮಾಡಿವೆ. ಫೆ.25ರಂದು ನಡೆಯುವ ಸಭೆಯಲ್ಲಿ ಇದರ ಬಗ್ಗೆ ಸೂಕ್ತ ನಿರ್ಧಾರ ಪ್ರಕಟಿಸಲಾಗುತ್ತದೆ. ಸರ್ಕಾರ ದರ ಏರಿಕೆಗೆ ಅನುಮತಿ ಕೊಡಬಹುದು ಅಥವಾ ಕೊಡದೆ ಇರಬಹುದು ಎಂದು ಸ್ಪಷ್ಟಪಡಿಸಿದರು.

ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲರಾಜು ಮಾತನಾಡಿ, 2024–25ರ ಆರ್ಥಿಕ ವರ್ಷದಲ್ಲಿ ಕೆಇಆರ್‌ಸಿ 8428.82 ಮಿಲಿಯನ್ ಯೂನಿಟ್‌ಗೆ ಅನುಮೋದನೆ ನೀಡಿದೆ. 8447.42 ಮಿ.ಯೂನಿಟ್ ಬಳಕೆಯಾಗಿ ಶೇ.0.22ರಷ್ಟು ವ್ಯತ್ಯಾಸವಾಗಿದ್ದರೆ, 7591.20 ಕೋಟಿ ರೂ.ಕಂದಾಯ ಸಂಗ್ರಹಣೆಯ ಬದಲಿಗೆ 7173.29 ಕೋಟಿ ರೂ. ಸಂಗ್ರಹವಾಗಿ ಶೇ.5.83ರಷ್ಟು ವ್ಯತ್ಯಾಸವಾಗಿದೆ. ವಿದ್ಯುತ್ ಮಾರಾಟ, ಆದಾಯ, ವೆಚ್ಚವನ್ನು ಪರಿಗಣಿಸಿದರೆ 528.12 ಕೋಟಿ ರೂ. ಕೊರತೆ ಆಗುತ್ತಿದೆ. ಇದನ್ನು ಸರಿದೂಗಿಸಲು ಅವಕಾಶ ನೀಡುವಂತೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಅಧ್ಯಕ್ಷರು, ಬಡ್ಡಿ ಮತ್ತು ಹಣಕಾಸು ವೆಚ್ಚದಲ್ಲಿ 424.08 ಕೋಟಿ ರೂ.ನಿಂದ 638.85 ಕೋಟಿ ರೂ.ಹೆಚ್ಚಾಗಿದೆ. ಈ ಮೊತ್ತದ ವ್ಯತ್ಯಾಸಕ್ಕೆ ಕಾರಣವೇನು? ಇದರ ಬಗ್ಗೆ ವಿವರ ಕೊಡುವಂತೆ ಸೂಚಿಸಿದರು. ನಂತರ, ಬಡ್ಡಿ ಮತ್ತು ಅಸಲಿನ ಮೊತ್ತವು ಯಾವ ರೀತಿ ಹೆಚ್ಚಾಗಿದೆ ಎಂದು ಅಧಿಕಾರಿಗಳು ವಿವರಿಸಿದರು.

ಪ್ರಗತಿ ವಿವರ: ಕಳೆದ ವರ್ಷದಲ್ಲಿ ಕಂದಾಯ ವಸೂಲಿ ಮತ್ತು ಇತರೆಗಳಿಂದ 200 ಕೋಟಿ ರೂ. ವಸೂಲಾತಿ ಮಾಡಲಾಗಿದ್ದು, 11 ಕೆವಿ ಮಾರ್ಗಗಳ 705 ಸಮರ್ಪಕ ನಿರ್ವಹಣಾ ಮಾಡಲಾಗಿದೆ. ಇದರಿಂದಾಗಿ ಅಡಚಣೆ, ಅಪಘಾತ ಕ್ಷೀಣಿಸಿದೆ. ಸೆಸ್ಕ್ ವ್ಯಾಪ್ತಿಯಲ್ಲಿ 20 ಸಾವಿರ ಪರಿವರ್ತಕಗಳ ಸಮರ್ಪಕ ನಿರ್ವಹಣೆ, ವಿದ್ಯುತ್ ನಷ್ಟವನ್ನು ಕಡಿತಗೊಗಳಿಸಲು ಅಭಿಯಾನ ಆರಂಭಿಸಲಾಗಿದೆ. ಇದರ ಫಲವಾಗಿ 9.38ನಿಂದ 8.76ಗೆ ಕಡಿಮೆಯಾಗಿದ್ದು, 40,461 ಅಪಾಯಕಾರಿ ವಿದ್ಯುತ್ ವ್ಯವಸ್ಥೆಯನ್ನು ಸರಿಪಡಿಸುವ ಕೆಲಸ ಮಾಡಲಾಗಿದೆ ಎಂದು ವಿವರಣೆ ನೀಡಿದರು.

ಕುಸುಮ್–ಸಿ ಯೋಜನೆಯಡಿ 950 ಮೆಗಾವ್ಯಾಟ್ ನಷ್ಟು ಫೀಡರ್ ಸೋಲಾರ್ ಸ್ಟೇಷನ್ ವ್ಯವಸ್ಥೆ ಅಳವಡಿಸಲು ಕ್ರಮ, ಕುಸುಮ್–ಬಿ ಯೋಜನೆಯಡಿ 6 ಸಾವಿರ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ರಿಯಾಯಿತಿಯಡಿ ಸೋಲಾರ್ ಪಂಪ್ ಅಳವಡಿಸಲು ಕ್ರಮಕೈಗೊಳ್ಳಲಾಗಿದೆ. ಪಿಎಂ ಜನ್‌ಮನ್ ಯೋಜನೆಯಡಿ 5467 ಜೇನುಕುರುಬ, ಗಿರಿಜನ, ಆದಿವಾಸಿ ಹಾಗೂ ಬುಡಕಟ್ಟು ಜನರ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ, ಕಳೆದ ವರ್ಷ ಅತಿ ಹೆಚ್ಚು 11 ಕೆವಿ ಮಾರ್ಗಗಳನ್ನು 66 ಕೆವಿ ವಿತರಣಾ ಕೇಂದ್ರಗಳನ್ನಾಗಿ ಮೇಲ್ದರ್ಜೆಗೆ, 150ಕ್ಕೂ ಹೆಚ್ಚು ಹೊಸ ಮಾರ್ಗಗಳ ಅಳವಡಿಕೆ, ಪಿಎಂ ಸೂರ್ಯಘರ್ ಯೋಜನೆಯಡಿ 5337 ಗ್ರಾಹಕರಿಂದ 91.2 ಮೆಗಾವ್ಯಾಟ್‌ನಷ್ಟು ಸೋಲಾರ್ ರೂಫ್ ಟಾಪ್ ಅಳವಡಿಸಲಾಗಿದೆ ಎಂದು ಆಯೋಗದ ಮುಂದೆ ಪ್ರಗತಿಯ ವಿವರವನ್ನು ವಿವರಿಸಿದರು. ಸದಸ್ಯ ಎಚ್.ಕೆ.ಜಗದೀಶ್ ಇದ್ದರು.



ಮೈಸೂರಿನ ಜಿಪಂ ಸಭಾಂಗಣದಲ್ಲಿ ಆಯೋಗದ ಅಧ್ಯಕ್ಷ ಪಿ.ರವಿಕುಮಾರ್ ಅಧ್ಯಕ್ಷತೆಯಲ್ಲಿ ಸೋಮವಾರ ಆರ್ಥಿಕ ವರ್ಷ 2024–25ನೇ ಸಾಲಿನ ವಾರ್ಷಿಕ ಕಾರ್ಯ ನಿರ್ವಹಣಾ ಪರಿಶೀಲನೆ ಅರ್ಜಿಯ ಬಗ್ಗೆ ಸಾರ್ವಜನಿಕ ವಿಚಾರಣೆ ಸಭೆ ನಡೆಯಿತು.

> “ಕೃಷಿ ಪಂಪ್‌ಸೆಟ್‌ಗಳಿಗೆ ನಿರಂತರ 7 ಗಂಟೆ ವಿದ್ಯುತ್ ಪೂರೈಕೆ ಮಾಡದೇ ಬೆಳೆ ನಷ್ಟವಾಗಿದ್ದು, ಪರಿಹಾರ ಕೊಡಬೇಕೆಂದು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ(ಕೆಇಆರ್‌ಸಿ)ಕ್ಕೆ ರೈತರು ಮನವಿ ಮಾಡಿದ್ದಾರೆ. ಮೈಸೂರು, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಗಳ ರೈತರು ಸೆಸ್ಕ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಹನೂರು ರೈತ ಮುಖಂಡ ಶಿವಲಿಂಗಪ್ರಸಾದ್, ಸರ್ಕಾರ ನಿರಂತರ 7 ಗಂಟೆ ವಿದ್ಯುತ್ ಕೊಡುವುದಾಗಿ ಹೇಳುತ್ತದೆ. ಆದರೆ, ಕಾಮಗಾರಿಗಳ ನೆಪದಲ್ಲಿ ಅರ್ಧಗಂಟೆಯೂ ವಿದ್ಯುತ್ ಕೊಡುತ್ತಿಲ್ಲ. ಬೇಸಾಯ ಮಾಡುವುದು ಹೇಗೆ? ನೀರಿಲ್ಲದೇ ಒಣಗಿದ ಬೆಳೆಗಳ ನಷ್ಟ ಕಟ್ಟುವುದು ಯಾರು? ಎಂದು ಪ್ರಶ್ನಿಸಿದರಲ್ಲದೆ, ಹನೂರು ಭಾಗದ ಕಾಂಡಂಚಿನ ಪ್ರದೇಶಗಳಲ್ಲಿ ಹುಲಿ, ಚಿರತೆ ಕಾಟ. ಎಕ್ಸ್‌ಪ್ರೆಸ್ ಲೈನ್ ಬಗ್ಗೆ ಮಾಹಿತಿ ಕೊಟ್ಟಿಲ್ಲ. ಕಾರ್ಖಾನೆಗಳಿಗೆ ನಷ್ಟವಾದರೆ ಪರಿಹಾರ ಕೊಡಲಾಗುತ್ತದೆ. ಅದೇ ಮಾದರಿಯಲ್ಲಿ ರೈತರಿಗೂ ಪರಿಹಾರ ಕೊಡಬೇಕು ಎಂದು ಒತ್ತಾಯಿಸಿದರು.

> “ವಿ.ಪಿ.ಬಳಿಗಾರ್ ಅವರ ಅವಧಿಯಲ್ಲಿ ಸಣ್ಣ ಮತ್ತು ಸೂಕ್ಷ್ಮ ಕೈಗಾರಿಕೆಗಳ ವಿದ್ಯುತ್ ದರ ಪರಿಷ್ಕರಣೆ ಮಾಡಿದ್ದರಿಂದ ಸಣ್ಣ ಕೈಗಾರಿಕೋದ್ಯಮಿಗಳಿಗೆ ಅನುಕೂಲವಾಗಿದೆ. ಆದರೆ ದರ ಕಡಿಮೆಯಾಗಿದೆ ಎಂದು ಕೆಲವರಿಗೆ ಗೊತ್ತೇ ಇಲ್ಲ. ಸೋಲಾರ್ ಅಳವಡಿಸಿಕೊಳ್ಳಿ ಎಂದು ಹೇಳುವ ಸೆಸ್ಕ್ ಅಧಿಕಾರಿಗಳು, ಸಿಬ್ಬಂದಿಗಳು ಮೊದಲು ಸೋಲಾರ್ ತಾವು ಅಳವಡಿಸಿಕೊಳ್ಳಬೇಕು.
>
> –ಎಸ್.ಸುರೇಶ್‌ಕುಮಾರ್ ಜೈನ್, ಪ್ರಧಾನ ಕಾರ್ಯದರ್ಶಿ, ಮೈಸೂರು ಸಣ್ಣ ಕೈಗಾರಿಕೆಗಳ ಸಂಘ.

> “ಕಂದಾಯ ಬಡಾವಣೆಗಳಲ್ಲಿ 20X30, 30X 40 ಮನೆಗಳಿಗೆ ಸಂಪರ್ಕ ಕೊಡಬೇಕಾದರೆ 19,500 ರೂ ಡೆಪಾಸಿಟ್ ಕಟ್ಟಿಸಿಕೊಳ್ಳುತ್ತಾರೆ. ಒಬ್ಬ ಗ್ರಾಹಕನಿಗೆ ಒಂದು ಕಿಲೋ ವ್ಯಾಟ್ ಬೇಕಿದ್ದರೂ ಮೂರು ಕಿಲೋವ್ಯಾಟ್‌ಗೆ ಹಣ ಕಟ್ಟಿಸಿಕೊಳ್ಳುತ್ತಾರೆ. ಇದರಿಂದಾಗಿ ಬಡವರಿಗೆ ತೊಂದರೆಯಾಗಿದೆ. ಶುಲ್ಕ ಕಟ್ಟಿಸಿಕೊಳ್ಳಲು ಕೆಇಆರ್‌ಸಿ ಅಥವಾ ರಾಜ್ಯ ಸರ್ಕಾರ ಅನುಮೋದನೆ ನೀಡಿದೆಯೇ?
>
> –ನಾಗರಾಜು, ಕೆಆರ್‌ಎಸ್ ಪಕ್ಷದ ಮುಖಂಡ.

> “ಬಾಡಿಗೆದಾರರಿಗೆ ಮಳಿಗೆ ಕೊಡುವ ಮುನ್ನವೇ ಟ್ರೇಡ್ ಲೈಸನ್ಸ್ ಪಡೆದುಕೊಳ್ಳುವಂತೆ ಸೆಸ್ಕ್ ಹೇಳುತ್ತದೆ. ಯಾರಿಗೆ ಬಾಡಿಗೆ ಕೊಡುತ್ತೇವೆಂದು ಗೊತ್ತಿಲ್ಲದಿದ್ದ ಮೇಲೆ ಲೈಸನ್ಸ್ ಹೇಗೆ ತೆಗೆದುಕೊಳ್ಳಬೇಕು. ಸ್ಮಾರ್ಟ್ ವಿಚಾರದಲ್ಲಿ ಆಗಿರುವ ಗೊಂದಲ ಸರಿಪಡಿಸಬೇಕು. ಕೆಇಆರ್‌ಸಿಯಲ್ಲಿ ಇರುವ ಕೆಲವು ನಿಯಮ, ನಿಬಂಧನೆಗಳಲ್ಲಿ ಕೆಲವು ಅಂಶಗಳನ್ನು ತಿದ್ದುಪಡಿ ಮಾಡಬೇಕು.
>
> –ಅಶ್ವಥ್ ನಾರಾಯಣ.

> “ಸ್ಮಾರ್ಟ್ ಮೀಟರ್‌ನ್ನು ಬಲವಂತವಾಗಿ ಹಾಕುವ ಯತ್ನ ಮಾಡಲಾಗುತ್ತಿದೆ. ಹೂಟಗಳ್ಳಿ ಎಇಇ ಕಚೇರಿಯಲ್ಲಿ ಕಡತಗಳು ಕಾಣೆಯಾಗುತ್ತವೆ ಎನ್ನುವುದನ್ನು ಮುಂದಿಟ್ಟುಕೊಂಡು ಬೀಗ ಹಾಕಿಕೊಂಡು ಹೋಗಲಾಗುತ್ತದೆ. ಸರ್ಕಾರಿ ಕಚೇರಿಯಲ್ಲಿ ಕಡತಗಳು ಹೇಗೆ ಕಾಣೆಯಾಗುತ್ತವೆ? ಯಾರಾದರೂ ಕಳ್ಳತನ ಮಾಡಿದ್ದಾರೆಯೇ?. ಗುತ್ತಿಗೆದಾರರು ನಿರ್ವಹಿಸುವ ಕೆಲಸವನ್ನು ಲೈನ್‌ಮ್ಯಾನ್, ಎಇ, ಸಿಬ್ಬಂದಿ ನಿರ್ವಹಿಸುತ್ತಿದ್ದಾರೆ. ಆರ್‌ಟಿಐ ಕಾರ್ಯಕರ್ತರಿಗೆ ಬೆದರಿಕೊಂಡು ಗುತ್ತಿಗೆ ನೀಡುವುದನ್ನು ನಿಲ್ಲಿಸಬೇಕು.
>
> –ಶ್ರೀನಿವಾಸ್.

ನಾಳೆಯಿಂದ ಜಪಾನ್–ಭಾರತ ಶೈಕ್ಷಣಿಕ ವಿನಿಮಯ ಕಾರ್ಯಕ್ರಮ

ಮೈಸೂರು,ಫೆ.16(ಎಂಕೆ)–ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ವತಿಯಿಂದ ಫೆ.18ರಿಂದ 25ರವರೆಗೆ ಜಪಾನ್–ಭಾರತ ಶೈಕ್ಷಣಿಕ ವಿನಿಮಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಂಶುಪಾಲ ಡಾ.ಸಿ.ನಟರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಫೆ.18ರಂದು ಬೆಳಗ್ಗೆ 10 ಗಂಟೆಗೆ ಕ್ಯಾಂಪಸ್‌ನಲ್ಲಿರುವ ಐಆರ್‌ಐನ ಡಾ.ರಘುಪತಿ ಸಿಂಘಾನಿಯಾ ಸಭಾಂಗಣದಲ್ಲಿ ಉದ್ಘಾಟನಾ ಕಾರ್ಯಕ್ರಮ ನಡೆಯಲಿದ್ದು, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದಾರೆ ಎಂದರು.

ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದು, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟ್‌ಸೂರ್‌ಮಠ್ ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಜೆಎಸ್‌ಎಸ್ ಉನ್ನತ ಶಿಕ್ಷಣ ಸಂಸ್ಥೆ ಪ್ರೊ ಚಾನ್ಸಿಲರ್ ಡಾ.ಬಿ.ಸುರೇಶ್, ಪ್ರೊ.ತೆರೊಸೊನೆ, ಡಾ.ಎ.ಎನ್.ಸಂತೋಷ್‌ಕುಮಾರ್ ಇನ್ನಿತರರು ಭಾಗವಹಿಸಲಿದ್ದಾರೆ ಎಂದರು.

8 ದಿನಗಳ ಈ ಕಾರ್ಯಕ್ರಮದಲ್ಲಿ ಒಟ್ಟು 35 ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದು, ಆಹಾರ ವ್ಯವಸ್ಥೆ, ಪರಿಸರ ಸುಸ್ಥಿರತೆ, ಕೃಷಿ ಮತ್ತು ಮಾನವ ಆರೋಗ್ಯ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಚರ್ಚೆ, ಪ್ರಯೋಗಾಲಯ ಪರಿಚಯ, ಕ್ಷೇತ್ರ ಭೇಟಿ ಹಾಗೂ ಸಂಯುಕ್ತ ಸಮ್ಮೇಳನಗಳಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು. ಡಾ.ಕಾರ್ತಿಕ, ಪ್ರೊಮಲ್ಲು ಉಪಸ್ಥಿತರಿದ್ದರು.

ಜೆಎಸ್‌ಎಸ್ ವಾಲಿಬಾಲ್ ತಂಡಕ್ಕೆ ದ್ವಿತೀಯ ಬಹುಮಾನ



ಮೈಸೂರು ನಗರದ ಕ್ರೈಸ್ಟ್ ಕಾಲೇಜಿನಲ್ಲಿ ಆಯೋಜಿಸಿದ್ದ ಕ್ರೈಸ್ಟ್ ಕಪ್ 2025–26ನೇ ಸಾಲಿನ ಅಂತರ ಕಾಲೇಜುಗಳ ಪುರುಷರ ವಾಲಿಬಾಲ್ ಸ್ಪರ್ಧೆಯಲ್ಲಿ ಜೆಎಸ್‌ಎಸ್ ಕಲಾ, ವಾಣಿಜ್ಯ–ವಿಜ್ಞಾನ ಕಾಲೇಜಿನ ಪದವಿ ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಗಳಿಸಿದ್ದಾರೆ. ವಿಜೇತರನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಪ್ರಾಂಶುಪಾಲ ಡಾ.ಎಂ.ಪ್ರಭು, ದೈಹಿಕ ಶಿಕ್ಷಣ ನಿರ್ದೇಶಕರಾದ ಎಂ.ಕಾರ್ತಿಕ್, ಸಿ.ಎಸ್.ನಿರಂಜನ್ ಹಾಗೂ ಬೋಧಕ, ಬೋಧಕೇತರರು ಅಭಿನಂದಿಸಿದ್ದಾರೆ.

ಕರಾಟೆಯಲ್ಲಿ ಬಹುಮಾನ ವಿಜೇತರು



ಬೆಂಗಳೂರಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ 8ನೇ ಕೆಟಿಎ ಕರಾಟೆ ಪಂದ್ಯಾವಳಿಯಲ್ಲಿ ಮೈಸೂರಿನ ಟೇಕ್ವಾಂಡೋ ಕರಾಟೆ ಪಟುಗಳು ಬಹುಮಾನಗಳನ್ನು ಪಡೆದುಕೊಂಡಿದ್ದಾರೆ. ಅದ್ವಿಕಾ ಇ ಅರುಣ್–ಚಿನ್ನ, ಕುಶಾಲಿ–ಚಿನ್ನ ಮತ್ತು ಕಂಚು, ಕೌಶಿಕಾ ಎಂ.ಎಸ್.–ಚಿನ್ನ, ಅಂಶ್ ಪ್ರೀತ್ ಸಿಂಗ್–ಚಿನ್ನ, ಆರ್ಯನ್‌ರಾಜ್–ಚಿನ್ನ, ಚಾಯಾಂಕ್–ಬೆಳ್ಳಿ ಮತ್ತು ಚಿನ್ನ, ದಿಶಿತಾ–ಚಿನ್ನ ಗೆದ್ದುಕೊಂಡಿದ್ದಾರೆ. ತರಬೇತುದಾರರು ಡಿ.ವಿ.ಎಸ್. ಪ್ರತಾಪ್ ಬಾಬು.

ಜಾತಿ ನಿಂದನೆ, ಹಲ್ಲೆಗೊಳಗಾದ ಕುಟುಂಬದ ಪರ ನಾಳೆ ಕಾಲ್ನಡಿಗೆ ಜಾಥಾ

ಮೈಸೂರು, ಫೆ.16 (ಎಂಕೆ)–ಜಾತಿ ನಿಂದನೆ ಮತ್ತು ಹಲ್ಲೆಗೊಳಗಾದ ಕುಟುಂಬಕ್ಕೆ ಧೈರ್ಯ ತುಂಬುವ ನಿಟ್ಟಿನಲ್ಲಿ ಹಾಗೂ ಗಲಾಟೆಗೆ ಕಾರಣರಾದ ಪೊಲೀಸ್ ಸಿಬ್ಬಂದಿ ವಜಾ ಮಾಡುವಂತೆ ಆಗ್ರಹಿಸಿ ದಲಿತ ಸಂಘಟನೆಗಳ ಸಾಮೂಹಿಕ ನಾಯಕತ್ವದಲ್ಲಿ ಫೆಬ್ರವರಿ 18ರಂದು ಬೆಳಗ್ಗೆ 11 ಗಂಟೆಗೆ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಭೀಮ್ ಸೇನೆ ರಾಜ್ಯ ಸಂಘಟನಾ ಕಾರ್ಯದರ್ಶಿ ಎಂ.ಮಂಜುನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಭಾಂಗಣದಲ್ಲಿ ಸೋಮವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ನರಸಿಂಹರಾಜ ಪೊಲೀಸ್ ಠಾಣೆ ವ್ಯಾಪ್ತಿಯ ರಾಜೇಂದ್ರನಗರದ ಕುರಿಮಂಡಿ ನಿವಾಸಿ ಪರಿಶಿಷ್ಟ ಸಮುದಾಯದ ಮಣಿಕಂಠ ಮತ್ತು ಆತನ ಪತ್ನಿ ರೀಟಾ ಮೇಲೆ ಫೆ.6ರಂದು ಮುಸ್ಲಿಂ ಸಮುದಾಯದ ರಸೂಲ್ ಮತ್ತು ಆತನ ಕುಟುಂಬಸ್ಥರು ಹಲ್ಲೆ ನಡೆಸಿ, ಜಾತಿ ನಿಂದನೆ ಮಾಡಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಲಾಗಿದೆ. ಈ ನಿಟ್ಟಿನಲ್ಲಿ ನೊಂದ ಕುಟುಂಬಕ್ಕೆ ಧೈರ್ಯ ತುಂಬುವುದಲ್ಲದೆ, ಈ ಗಲಾಟೆಗೆ ಕಾರಣರಾದ ಕಾನ್‌ಸ್ಟೇಬಲ್ ಬಿಂದು, ಪಿಎಸ್‌ಐ ಸುನೀಲ್ ಕುಮಾರ್ ಅವರನ್ನು ಸೇವೆಯಿಂದ ವಜಾಗೊಳಿಸುವಂತೆ ಆಗ್ರಹಿಸಿ ಕಾಲ್ನಡಿಗೆ ಹಮ್ಮಿಕೊಳ್ಳಲಾಗಿದೆ ಎಂದರು.

ಗಾಂಧಿನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಿಂದ ರಾಜೇಂದ್ರನಗರ ಕುರಿಮಂಡಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದವರೆಗೆ ಕಾಲ್ನಡಿಗೆ ಸಾಗಲಿದ್ದು, ವಿವಿಧ ದಲಿತ ಸಂಘಟನೆ ಮುಖಂಡರು ಭಾಗವಹಿಸಲಿದ್ದಾರೆ ಎಂದರು. ದಸಂಸ ಮುಖಂಡ ಶಿವರಾಜ್, ಅಶೋಕಪುರಂ ಮುಖಂಡ ಪುಟ್ಟರಾಜು, ಮಣಿಕಂಠ, ರೀಟಾ ಉಪಸ್ಥಿತರಿದ್ದರು.

ಫೆ.22ಕ್ಕೆ ಸಾಮೂಹಿಕ ಚಂಡಿಕಾಯಾಗ

ಮೈಸೂರು,ಫೆ.16(ಎಸ್‌ಪಿಎನ್)–ಮೈಸೂರು ಶ್ರೀರಾಂಪುರ 2ನೇ ಹಂತದಲ್ಲಿ (ನಾಯ್ಡು ಸ್ಟೋರ್ಸ್ ಸಮೀಪ)ರುವ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದ ಆವರಣದಲ್ಲಿ ಲೋಕಲ್ಯಾಣಕ್ಕಾಗಿ ಫೆ.22ರಂದು ಸಾಮೂಹಿಕ ಚಂಡಿಯಾಗ ಏರ್ಪಡಿಸಿದ್ದು, ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿ, ಬಳಿಕ ಮಹಾಮಂಗಳಾರತಿ, ಪ್ರಸಾದ ವಿನಿಯೋಗ ವಿರುತ್ತದೆ. ಮಾಹಿತಿಗೆ ಮೊ: 98445–58661 ಅನ್ನು ಸಂಪರ್ಕಿಸಬಹುದು ಎಂದು ದೇವಸ್ಥಾನದ ಪ್ರಧಾನ ಅರ್ಚಕ ಸುಧೀಂದ್ರ ಆಚಾರ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಾಶಿವರಾತ್ರಿ ಜಾಗರಣೆ ಭಜನೆ ಕಾರ್ಯಕ್ರಮ



ಶ್ರೀ ರಾಯಿಂಕ ರಬಾರಿ ದೇವಾಸಿ ಸಮಾಜ ಸೇವಾ ಟ್ರಸ್ಟ್ ಆಶ್ರಯದಲ್ಲಿ ಮೈಸೂರಿನ ಗೋವಿಂದರಾವ್ ಮೆಮೋರಿಯಲ್ ಹಾಲ್‌ನಲ್ಲಿ ಲೋಕಕಲ್ಯಾಣಕ್ಕಾಗಿ ಏರ್ಪಡಿಸಿದ್ದ ಮಹಾಶಿವರಾತ್ರಿ ಅಹೋರಾತ್ರಿ ಜಾಗರಣೆ ಭಜನೆ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಭಾಗವಹಿಸಿ, ಶಿವನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಸೀತಾರಾಂ, ಊಕರಾಮ್, ಸೂರಜ್ ದೇಸಾಯಿ, ಮೋನರಾಮ್, ಜಾಲಾರಾಮ್, ಲಾಭುರಾಮ್ ಹಾಗೂ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಯುವ ಸಮೂಹವನ್ನು ನಾಟಕಗಳತ್ತ ಸೆಳೆಯುವ ಕೆಲಸ ಈಗ ಆಗಬೇಕಿದೆ

ಸಂವಾದದಲ್ಲಿ ಹಿರಿಯ ರಂಗಕರ್ಮಿ ಶ್ರೀಮತಿ ಹರಿಪ್ರಸಾದ್ ಅಭಿಮತ

ಮೈಸೂರು,ಫೆ.16(ವಿವಿಹೆಚ್)– ಮಹಾರಾಜ ಕಾಲೇಜು ರಂಗಭೂಮಿಯ ದೇವಾಲಯ. ನಮ್ಮ ರಂಗಭೂಮಿ ಕಲಿಕೆಯ ಆಸ್ಥಾನ ಕರ್ಮಭೂಮಿ ಅದಾಗಿತ್ತು ಎಂದು ಹಿರಿಯ ರಂಗಕರ್ಮಿ ಶ್ರೀಮತಿ ಹರಿಪ್ರಸಾದ್ ತಿಳಿಸಿದರು.

ಮೈಸೂರಿನ ರಂಗಾಯಣ ಆವರಣದ ಬಿ.ವಿ.ಕಾರಂತ ರಂಗ ಚಾವಡಿಯಲ್ಲಿ ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ವತಿಯಿಂದ ಆಯೋಜಿಸಿದ್ದ ನೆನಪಿನಂಗಳ 2ನೇ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಾಟಕ ಒಂದು ಪ್ರಬಲ ಮಾಧ್ಯಮ. ಅದು ಸಮಾಜವನ್ನು ತಿದ್ದುವ ಹೊಣೆಗಾರಿಕೆ, ಜವಾಬ್ದಾರಿಯನ್ನು ಹೊಂದಿದೆ. ಆದರೆ ಇಂದು ಹಾಗಾಗುತ್ತಿಲ್ಲ. ನಮ್ಮ ನೆನ್ನೆಗಳು ಇಂದಿನ ಎಷ್ಟೋ ಜನರಿಗೆ ತಿಳಿದೇ ಇಲ್ಲ. ಅದರ ಬಗ್ಗೆ ತಿಳಿಯುವ ಯುವ ಮನಸ್ಸುಗಳು ಇಂದು ನಮ್ಮೊಂದಿಗೆ ಇಲ್ಲ. ನಾಟಕದಿಂದ ಎಲ್ಲರೂ ದೂರ ಸರಿಯುತ್ತಿದ್ದಾರೆ. ಯುವ ಸಮೂಹವನ್ನು ನಾಟಕಗಳತ್ತ ಸೆಳೆಯುವ ಕೆಲಸ ಇಂದು ಆಗಬೇಕು ಎಂದು ಅಭಿಪ್ರಾಯಪಟ್ಟರು.

ಡಿಜಿಟಲ್ ವೇದಿಕೆ ಮುಖ್ಯ: ಇಂದು ಯುವ ಸಮೂಹ ಹೆಚ್ಚು ಆನ್‌ಲೈನ್ ಗೀಳಿಗೆ ಬಲಿಯಾಗುತ್ತಿದ್ದಾರೆ. ಅವರಿಷ್ಟದ ಮಾಧ್ಯಮವನ್ನೇ ಬಳಸಿಕೊಂಡು ನಾಟಕಗಳ ಬಗೆಗಿನ ಅರಿವು ಮೂಡಿಸುವುದು ಬಹಳ ಮುಖ್ಯ. ರಂಗಭೂಮಿ, ಕಲೆ, ನಾಟಕಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಮಾಹಿತಿ ಹಂಚಿಕೊಂಡಷ್ಟು ಯುವ ಸಮೂಹವನ್ನು ಅತೀ ವೇಗವಾಗಿ ತಲುಪಲು ಸಹಕಾರಿಯಾಗುತ್ತದೆ ಎಂದರು.

ಪಠ್ಯಗಳಲ್ಲಿ ನಾಟಕ ಸೇರಿಸಿ: ಶಿಕ್ಷಣ ಮೂಲಕ ಕೇವಲ ಓದು ಬರಹ ಮಾತ್ರವೇ ಸಿಗುವುದಿಲ್ಲ. ಮನುಷ್ಯನ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಣ ಅತೀ ಮುಖ್ಯ. ಇಂತಹ ಶಿಕ್ಷಣದಲ್ಲಿ ಪಠ್ಯಗಳನ್ನಾಗಿ ನಾಟಕಗಳನ್ನು ಸೇರಿಸುವ ಕೆಲಸ ರಾಜ್ಯ ಸರ್ಕಾರ ಮಾಡಬೇಕು.

ವಿಷಯವಾರು ಒಂದು ಪಠ್ಯವನ್ನು ನಾಟಕವನ್ನಾಗಿ ಬದಲಾಯಿಸಿ, ರಚಿಸುವುದರಿಂದ ಶಿಕ್ಷಣದೊಂದಿಗೆ ರಂಗಭೂಮಿ ಮಹತ್ವವನ್ನು ಸಾರಬಹುದಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ವಿಜ್ಞಾನ ನಾಟಕಗಳಿಗೆ ಹೆಚ್ಚಿನ ಒತ್ತು ನೀಡಿ: ನಾಟಕವನ್ನು ನಾಟಕೀಯವಾಗಿ ಹೇಳುವುದನ್ನು ಮೊದಲು ಬಿಟ್ಟು, ವಿಷಯಗಳನ್ನು ಮನಮುಟ್ಟುವ ಹಾಗೆ ಮಕ್ಕಳಿಗೆ ಕಲಿಸಬೇಕು. ಕಲಿಕಾ ಹಂತದಲ್ಲಿಯೇ ವಿಜ್ಞಾನದ ವಿಷಯಗಳಲ್ಲಿ ಒಂದು ಪಠ್ಯವನ್ನು ನಾಟಕಗಳನ್ನಾಗಿ ರೂಪಿಸುವುದರಿಂದ ಮಕ್ಕಳಲ್ಲಿ ವಿಷಯಗಳ ಮೇಲೆ ರೋಚಕತೆ ಹುಟ್ಟುಹಾಕಿದಂತಾಗುತ್ತದೆ ಎಂದು ಸಲಹೆ ನೀಡಿದರು.

ರಂಗಭೂಮಿ ಮುಂದುವರಿದ ಭಾಗ ಚಲನಚಿತ್ರ?: ರಂಗಭೂಮಿಯ ಮುಂದುವರಿದ ಭಾಗ ಚಲನಚಿತ್ರ ಎಂಬ ಬಗ್ಗೆ ಇಂದಿಗೂ ದ್ವಂದ್ವ ನಿಲುವುಗಳಿವೆ. ನಾಟಕಗಳ ಉತ್ತಮ ಪ್ರದರ್ಶನ ತೋರಿದ ನನಗೆ ನಿರ್ದೇಶಕ ಸಂಪತ್ ಕುಮಾರ್ ಅವರು ಚಲನಚಿತ್ರಗಳಲ್ಲಿ ನಟಿಸುವಂತೆ ಸೂಚಿಸಿದರು. ಡಾ.ರಾಜ್‌ಕುಮಾರ್ ಅವರೊಂದಿಗೆ 'ಒಲವು–ಗೆಲುವು' ಚಿತ್ರದಲ್ಲಿ ನಟಿಸಿದ ಬಳಿಕ 'ಗಾಳಿ ಗೋಪುರ', 'ಚಂದನದ ಗೊಂಬೆ', ಚಿತ್ರಗಳಲ್ಲಿ ನಟಿಸುವ ಅವಕಾಶ ಸಿಕ್ಕಿತ್ತಾದರೂ ವೈಯಕ್ತಿಕ ಕಾರಣಗಳಿಂದ ಹಿಂದೆ ಸರಿದೆ. ಸುದೀಪ್ ಅವರ 'ಹೆಬ್ಬುಲಿ' ಚಿತ್ರದಲ್ಲಿ ಅವರೊಂದಿಗೆ ಪರದೆ ಹಂಚಿಕೊಂಡೆ. ಅದಕ್ಕಾಗಿ 2.5 ಸಾವಿರ ರೂ. ಹಣವನ್ನೂ ನೀಡಿದರು ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಅಧ್ಯಕ್ಷ ರಾಜೇಶ್ ತಲಕಾಡು, ಮಾಧವ್, ರಂಗಕರ್ಮಿ ಮೈಮ್ ರಮೇಶ್, ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ಇಂದಿರಾ ನಾಯರ್, ದೊರೆಸ್ವಾಮಿ, ನಿರೂಪಕಿ ಭುವನಾ, ಕೃಷ್ಣಜನಮನ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ವತಿಯಿಂದ ಹಿರಿಯ ರಂಗಕರ್ಮಿ ಶ್ರೀಮತಿ ಹರಿಪ್ರಸಾದ್ ಅವರನ್ನು ಸನ್ಮಾನಿಸಲಾಯಿತು.

ದೇಶ - ವಿದೇಶ

ಕಚ್ಚಾ ಬಾಂಬ್ ತಯಾರಿಸ್ತಿದ್ದಾಗಲೇ ಬ್ಲಾಸ್ಟ್: ಇಬ್ಬರು ಸಾವು



ಭುವನೇಶ್ವರ: ಸೇಡು ತೀರಿಸಿಕೊಳ್ಳಲು ಕಚ್ಚಾ ಬಾಂಬ್ ತಯಾರಿಸುತ್ತಿದ್ದಾಗಲೇ ಬ್ಲಾಸ್ಟ್ ಆಗಿ, ಇಬ್ಬರು ಸಾವನ್ನಪ್ಪಿರುವ ಘಟನೆ ಒಡಿಸ್ಸಾದ ಭುವನೇಶ್ವರದಲ್ಲಿ ನಡೆದಿದೆ.

ಮೃತರನ್ನು ಶಹನವಾಜ್ ಮಲಿಕ್ (26) ಹಾಗೂ ತಾಯಿ ಲಿಜಾತುನ್ ಬಿಬಿ (51) ಎಂದು ಗುರುತಿಸಲಾಗಿದೆ. ಜ.12ರಂದು ಬಾಂಬ್ ಬ್ಲಾಸ್ಟ್ ಆಗಿದ್ದು, ಕ್ರಿಮಿನಲ್ ಹಿನ್ನೆಲೆ ಹೊಂದಿರೋ ಶಹನವಾಜ್ ಮಲಿಕ್ ಅನ್ನೋ ವ್ಯಕ್ತಿ ತನ್ನ ಮನೆಯ ಮೇಲ್ಛಾವಣಿಯ ಮೇಲೆ ಕಚ್ಚಾ ಬಾಂಬ್ ತಯಾರು ಮಾಡುತ್ತಿದ್ದ. ಬಾಂಬ್ ತಯಾರಿಕೆಗೆ ತನ್ನ ತಾಯಿ, ನಿಶ್ಚಿತಾರ್ಥ ಮಾಡಿಕೊಂಡಿದ್ದ ಹುಡುಗಿ ಹಾಗೂ ಬಾಂಬ್ ತಯಾರಿಕೆಗೆ ಸಹಾಯಕಿಯನ್ನ ಬಳಸಿಕೊಂಡಿದ್ದ ಎಂದು ತಿಳಿದುಬಂದಿದೆ.

ಘಟನೆಯಲ್ಲಿ ಗಾಯಗೊಂಡವರನ್ನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಫೆ.4ರಂದು ಚಿಕಿತ್ಸೆ ಫಲಿಸದೆ ಶಹನವಾಜ್ ಮಲಿಕ್ ಸಾವನ್ನಪ್ಪಿದ್ದರೆ, ಫೆ.10ರಂದು ತಾಯಿ ಲಿಜಾತುನ್ ಬಿಬಿ ಸಾವನ್ನಪ್ಪಿದ್ದಾರೆ. ಇನ್ನು ಮದುವೆಯಾಗಬೇಕಿದ್ದ ಹುಡುಗಿ ತೃಪ್ತಿಮಯಿ ಹಾಗೂ ಸಹಾಯಕಿ ಅಮಿಯಾ ಮಲಿಕ್ ಚಿಂತಾಜನಕ ಸ್ಥಿತಿಯಲ್ಲಿದ್ದಾರೆ. ಘಟನೆಯ ಸಿಸಿಟಿವಿ ದೃಶ್ಯ ಈಗ ಲಭ್ಯವಾಗಿದೆ.

ಕರ್ನಾಟಕದ ವಿದ್ಯಾರ್ಥಿ ಸಾಕೇತ್ ಶವವಾಗಿ ಪತ್ತೆ



ಕ್ಯಾಲಿಫೋರ್ನಿಯಾ: ಅಮೆರಿಕದಲ್ಲಿ ಓದುವ ಕನಸು ಕಾಣುತ್ತಿರುವ ಭಾರತೀಯ ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ಆತಂಕಕಾರಿ ಸುದ್ದಿ ಹೊರಬಿದ್ದಿದೆ. ಕ್ಯಾಲಿಫೋರ್ನಿಯಾದಲ್ಲಿ ಆರು ದಿನಗಳಿಂದ ನಾಪತ್ತೆಯಾಗಿದ್ದ ಕರ್ನಾಟಕದ ವಿದ್ಯಾರ್ಥಿ ಸಾಕೇತ್ ಶ್ರೀನಿವಾಸಯ್ಯ ಶವವಾಗಿ ಪತ್ತೆಯಾಗಿದ್ದಾರೆ. ಭಾರತೀಯ ವಿದ್ಯಾರ್ಥಿಯ ಶವ ಪತ್ತೆಯಾಗಿರುವುದು ಅವರ ಕುಟುಂಬವನ್ನು ಮಾತ್ರವಲ್ಲದೆ ಇಡೀ ಭಾರತೀಯ ವಿದ್ಯಾರ್ಥಿ ಸಮುದಾಯವನ್ನು ಆಘಾತಗೊಳಿಸಿದೆ. ಕರ್ನಾಟಕದ 22 ವರ್ಷದ ಸಾಕೇತ್ ಶ್ರೀನಿವಾಸಯ್ಯ, ಬರ್ಕ್ಲಿಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ರಾಸಾಯನಿಕ ಮತ್ತು ಜೈವಿಕ ಅಣು ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆಯುತ್ತಿದ್ದರು. ಫೆ.9ರಂದು ಕ್ಯಾಂಪಸ್‌ನಿಂದ ಸುಮಾರು 1 ಕಿಲೋ ಮೀಟರ್ ದೂರದಲ್ಲಿ ಅವರನ್ನು ಕೊನೆಯ ಬಾರಿಗೆ ನೋಡಲಾಯಿತು ಮತ್ತು ಅಂದಿನಿಂದ ಅವರ ಯಾವುದೇ ಕುರುಹು ಪತ್ತೆಯಾಗಿರಲಿಲ್ಲ. ಸಾಕೇತ್ ಕಣ್ಮರೆಯಾದ ನಂತರ, ಲೇಕ್ ಅಂಜಾ, ಬರ್ಕ್ಲಿ ಹಿಲ್ಸ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೃಹತ್ ಶೋಧ ಕಾರ್ಯಾಚರಣೆ ಪ್ರಾರಂಭಿಸಲಾಯಿತು. ಟಿಲ್ಡೆನ್ ಪ್ರಾದೇಶಿಕ ಉದ್ಯಾನವನದ ಬಳಿಯ ಮನೆಯ ಬಳಿ ಪಾಸ್‌ಪೋರ್ಟ್ ಮತ್ತು ಲ್ಯಾಪ್‌ಟಾಪ್ ಹೊಂದಿದ್ದ ಬ್ಯಾಗ್ ಪತ್ತೆಯಾಗಿತ್ತು.

ನಿಯಮ ಉಲ್ಲಂಘಿಸಿದ 178 ಖಾಸಗಿ ಆಸ್ಪತ್ರೆಗಳ ಪರವಾನಗಿ ರದ್ದು



ಲಕ್ನೋ: ರೋಗಿಗಳ ಹಿತದೃಷ್ಟಿಯಿಂದ ಉತ್ತರ ಪ್ರದೇಶ ಸರ್ಕಾರವು ನಿಯಮಬಾಹಿರವಾಗಿ ಕಾರ್ಯ ಚರಿಸುತ್ತಿರುವ ಖಾಸಗಿ ಆಸ್ಪತ್ರೆಗಳ ವಿರುದ್ಧ ಬೃಹತ್ ಕಾರ್ಯಾಚರಣೆ ನಡೆಸಿದ್ದು, ಅದರಂತೆ ಇದುವರೆಗೂ ರಾಜ್ಯದ 178 ಖಾಸಗಿ ಆಸ್ಪತ್ರೆಗಳ ಪರವಾನಗಿಯನ್ನು ರದ್ದುಗೊಳಿಸಿದೆ. ಸೋಮವಾರ ವಿಧಾನಸಭೆಯಲ್ಲಿ ಸಮಾಜವಾದಿ ಪಕ್ಷದ ಶಾಸಕ ಅತುಲ್ ಪ್ರಧಾನ್ ಅವರ ಪ್ರಶ್ನೆಗೆ ಉತ್ತರಿಸಿದ ಉಪಮುಖ್ಯಮಂತ್ರಿ ಬ್ರಜೇಶ್ ಪಾಠಕ್, ರಾಜ್ಯದ ವಿವಿಧ ಖಾಸಗಿ ಆಸ್ಪತ್ರೆಗಳ ವಿರುದ್ಧ ಸುಮಾರು 500ಕ್ಕೂ ಹೆಚ್ಚು ದೂರುಗಳು ದಾಖಲಾಗಿದ್ದವು. ತನಿಖೆಯ ನಂತರ 178 ಆಸ್ಪತ್ರೆಗಳ ಪರವಾನಗಿಯನ್ನು ಕಟ್ಟುನಿಟ್ಟಾಗಿ ರದ್ದುಗೊಳಿಸಲಾಗಿದೆ. ಇದರಲ್ಲಿ 59 ಆಸ್ಪತ್ರೆಗಳು ಮೇಲ್ಮನವಿ ಸಲ್ಲಿಸಿದ ನಂತರ ವಿಚಾರಣೆ ನಡೆಸಿ ಅವರ ಪರವಾನಗಿಯನ್ನು ಪುನಃಸ್ಥಾಪಿಸಲಾಗಿದೆ ಎಂದರು. ನಿಯಮಗಳನ್ನು ಗಾಳಿಗೆ ತೂರಿ ಕಾರ್ಯನಿರ್ವಹಿಸುತ್ತಿದ್ದ 281 ಆಸ್ಪತ್ರೆಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಇದರ ಜೊತೆಗೆ ಗಂಭೀರ ಲೋಪದೋಷಗಳು ಕಂಡುಬಂದ ಹಿನ್ನೆಲೆಯಲ್ಲಿ ಸುಮಾರು 533 ಆಸ್ಪತ್ರೆಗಳನ್ನು ಅಧಿಕಾರಿಗಳು ಸೀಜ್ ಮಾಡಿದ್ದಾರೆ. ಅಷ್ಟು ಮಾತ್ರವಲ್ಲದೆ ಇನ್ನೂ 1,542 ಆಸ್ಪತ್ರೆಗಳಿಗೆ ನೋಟಿಸ್ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

7 ಪಾಕ್ ಸೈನಿಕರ ಬಂಧಿಸಿ, ಬಲೂಚಿಸ್ತಾನ್ ಸೇನೆಯಿಂದ ಗಡುವು!



ಇಸ್ಲಾಮಾಬಾದ್/ಬಲೂಚಿಸ್ತಾನ್: ಪಾಕಿಸ್ತಾನದ ಭದ್ರತಾ ಪಡೆಯ ಏಳು ಸೈನಿಕರನ್ನು ಕಸ್ಟಡಿಯಲ್ಲಿ ಇರಿಸಿರುವುದಾಗಿ ಪ್ರತ್ಯೇಕತಾವಾದಿ ಉಗ್ರಗಾಮಿ ಗುಂಪು ಬಲೂಚ್ ಲಿಬರೇಶನ್ ಆರ್ಮಿ ಹೇಳಿಕೊಂಡಿದ್ದು, ಕೈದಿಗಳ ವಿನಿಮಯಕ್ಕಾಗಿ ಪಾಕಿಸ್ತಾನ ಸರ್ಕಾರಕ್ಕೆ ಏಳು ದಿನಗಳ ಗಡುವು ನೀಡಿದೆ. ಗಡುವಿನ ಅವಧಿಯೊಳಗೆ ಮಾತುಕತೆ ನಡೆಯದಿದ್ದರೆ ಬಂಧಿತರಿಗೆ ಮರಣದಂಡನೆ ವಿಧಿಸುವ ಎಚ್ಚರಿಕೆ ನೀಡಿರುವುದಾಗಿ ವರದಿ ತಿಳಿಸಿದೆ. ಬಲೂಚ್ ಲಿಬರೇಶನ್ ಆರ್ಮಿಯ ಮಾಧ್ಯಮ ವಿಭಾಗವಾದ ಹಕ್ಕಲ್, ವೀಡಿಯೊ ಸಂದೇಶ ಬಿಡುಗಡೆ ಮಾಡಿದ್ದು, ಈ ಅಂತಿಮ ಗಡುವು ಮುಗಿಯಲು ಆರು ದಿನಗಳು ಬಾಕಿ ಉಳಿದಿರುವುದಾಗಿ ತಿಳಿಸಿದೆ. ಈ ಅಂತಿಮ ಗಡುವಿನ ಕುರಿತು ಪಾಕಿಸ್ತಾನದ ಮಿಲಿಟರಿ ಅಥವಾ ಸರ್ಕಾರಿ ಅಧಿಕಾರಿಗಳಿಂದ ಯಾವುದೇ ತಕ್ಷಣದ ಅಧಿಕೃತ ಪ್ರತಿಕ್ರಿಯೆ ಬಂದಿಲ್ಲ ಎಂದು ವರದಿ ಹೇಳಿದೆ. BLA ಪ್ರಕಾರ, ಬಂಧಿತರನ್ನು 'ಆಪರೇಷನ್ ಹೆರೋಫ್' ನ ಎರಡನೇ ದಾಳಿ ಸಮಯದಲ್ಲಿ ಸೆರೆಹಿಡಿಯಲಾಗಿದೆ. ಕಾರ್ಯಾಚರಣೆಯ ಸಮಯದಲ್ಲಿ ತನ್ನ ಹೋರಾಟಗಾರರು ಪಾಕಿಸ್ತಾನಿ ಭದ್ರತಾ ಪಡೆಗಳಿಗೆ ಸೇರಿದ ಒಟ್ಟು 17 ಯೋಧರನ್ನು ವಿವಿಧ ಕಾರ್ಯಾಚರಣೆಗಳಲ್ಲಿ ಬಂಧಿಸಿರುವುದಾಗಿ ತಿಳಿಸಿದೆ.

ಬಿಹಾರದ 25 ಲಕ್ಷ ಮಹಿಳೆಯರ ಖಾತೆಗೆ ತಲಾ 10 ಸಾವಿರ ಜಮೆ ಮಾಡಿದ ಸರ್ಕಾರ



ಪಟ್ನಾ: ಮುಖ್ಯಮಂತ್ರಿ ಮಹಿಳಾ ರೋಜ್‌ಗಾರ್ ಯೋಜನೆ ಅಡಿಯಲ್ಲಿ ಬಿಹಾರದ ನಿತೀಶ್ ಕುಮಾರ್ ಸರ್ಕಾರವು ರಾಜ್ಯದ 25 ಲಕ್ಷ ಮಹಿಳೆಯರ ಬ್ಯಾಂಕ್ ಖಾತೆಗೆ 10 ಸಾವಿರ ಜಮೆ ಮಾಡಲಾಗಿದೆ.

ಮಹಿಳಾ ಸಬಲೀಕರಣ ಹಾಗೂ ಸ್ವಉದ್ಯೋಗಕ್ಕೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಮುಖ್ಯಮಂತ್ರಿ ಮಹಿಳಾ ರೋಜ್‌ಗಾರ್ ಯೋಜನೆಯನ್ನು ಜಾರಿಗೊಳಿಸಲಾಗಿತ್ತು. ಪ್ರಧಾನಿ ಮೋದಿ ಅವರು 2025ರ ಸೆಪ್ಟೆಂಬರ್ ನಲ್ಲಿ ಯೋಜನೆಗೆ ಚಾಲನೆ ನೀಡಿದ್ದರು. ಇದುವರೆಗೂ ರಾಜ್ಯದ 1.81 ಕೋಟಿ ಮಹಿಳೆಯರು ಈ ಯೋಜನೆಯ ಸದುಪಯೋಗ ಪಡೆದುಕೊಂಡಿದ್ದು, ಅವರ ಖಾತೆಗೆ ತಲಾ 10 ಸಾವಿರ ಜಮೆ ಮಾಡಲಾಗಿದೆ. ಇದಕ್ಕಾಗಿ 2500 ಕೋಟಿ ವೆಚ್ಚಮಾಡಲಾಗಿದೆ. ಇದನ್ನು ಸದ್ಬಳಕೆ ಮಾಡಿಕೊಂಡ ಮಹಿಳಾ ಉದ್ಯಮಿಗಳಿಗೆ, ಅವರ ಉದ್ಯಮವನ್ನು ವಿಸ್ತರಿಸಲು 2 ಲಕ್ಷ ನೀಡಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮುಖ್ಯಮಂತ್ರಿ ಮಹಿಳಾ ರೋಜ್‌ಗಾರ್ ಯೋಜನೆ ಅಡಿಯಲ್ಲಿ ಉದ್ಯಮಗಳನ್ನು ಸ್ಥಾಪಿಸಿರುವ ಮಹಿಳೆಯರಿಗೆ 2 ಲಕ್ಷದವರೆಗೆ ಹಣಕಾಸು ನೆರವು ಒದಗಿಸುವುದಾಗಿ ಇತ್ತೀಚೆಗೆ ಮುಖ್ಯಮಂತ್ರಿ ನಿತೀಶ್‌ಕುಮಾರ್ ತಿಳಿಸಿದ್ದರು.

ಮೈಸೂರು ಮಿತ್ರ ಮಂಗಳವಾರ 17 ಫೆಬ್ರವರಿ 2026

ಪೊಲೀಸರ ಆತ್ಮಸ್ಥೈರ್ಯ ಕುಗ್ಗಿಸುವ ಕೆಲಸ ಮಾಡಬೇಡಿ



ಸುಂಟಿಕೊಪ್ಪದಲ್ಲಿ ಪೊಲೀಸ್ ವಸತಿ ಗೃಹವನ್ನು ಉದ್ಘಾಟಿಸಿ ಗೃಹ ಸಚಿವ ಡಾ. ಜಿ.ಪರಮೇಶ್ವರ ಮಾತನಾಡಿದರು.

ಮಡಿಕೇರಿ, ಫೆ.16–ರಾಜ್ಯ ಪೊಲೀಸರ ಆತ್ಮಸ್ಥೈರ್ಯ ಕುಗ್ಗಿಸುವ ಕೆಲಸ ಯಾರೂ ಮಾಡಬಾರದು ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಅಭಿಪ್ರಾಯ ಪಟ್ಟಿದ್ದಾರೆ.

ವಸತಿ ಮತ್ತು ಮೂಲಭೂತ ಅಭಿವೃದ್ಧಿ ನಿಗಮ ನಿಯಮಿತದಿಂದ ಸುಂಟಿಕೊಪ್ಪದಲ್ಲಿ 3.64 ಕೋಟಿ ರೂ ವೆಚ್ಚದಲ್ಲಿ ನಿರ್ಮಿಸಿರುವ ಪೊಲೀಸ್ ವಸತಿ ಗೃಹವನ್ನು ಭಾನುವಾರ ಉದ್ಘಾಟಿಸಿ, ಇಡೀ ದೇಶದಲ್ಲಿಯೇ ರಕ್ಷಣೆ, ಸುರಕ್ಷತೆಯಲ್ಲಿ ಪೊಲೀಸ್ ಇಲಾಖೆ ಪ್ರಥಮ ಸ್ಥಾನದಲ್ಲಿದೆ. ಹಗಲು, ರಾತ್ರಿ, ಮಳೆ, ಬಿಸಿಲು, ನಿದ್ರೆ ಇಲ್ಲದೆ ಪೊಲೀಸರು ಕರ್ತವ್ಯ ನಿರ್ವಹಿಸುತ್ತಿದ್ದು, ಅವರನ್ನು ಗೌರವಿಸಬೇಕು. ಅದನ್ನು ಬಿಟ್ಟು ಅವರ ಆತ್ಮಸ್ಥೈರ್ಯ ಕುಗ್ಗಿಸುವ ಕೆಲಸ ಯಾರೂ ಮಾಡಬಾರದು ಎಂದು ಪರೋಕ್ಷವಾಗಿ ವಿಪಕ್ಷಗಳಿಗೆ ಕುಟುಕಿದರು.

ಪೊಲೀಸರಿಗಾಗಿ ರಾಜ್ಯದಲ್ಲಿ ಸುಮಾರು 40 ಸಾವಿರ ವಸತಿಗೃಹ ನಿರ್ಮಿಸಲಾಗಿದ್ದು, ಇನ್ನೂ 60 ಸಾವಿರ ವಸತಿಗೃಹ ನಿರ್ಮಿಸುವ ಗುರಿ ಇದೆ. ಪೊಲೀಸ್ ಇಲಾಖೆಯಲ್ಲಿ ಅತ್ಯಂತ ಕೆಳಸ್ತರದಲ್ಲಿ ಕೆಲಸ ನಿರ್ವಹಿಸುವ ಸಿಬ್ಬಂದಿಗಳಿಗೆ ವೇತನ ಹೆಚ್ಚಿಸಲಾಗಿದೆ. ಸಣ್ಣ ಮನೆಯಲ್ಲಿ ವಾಸ ಮಾಡುವುದನ್ನು ಮನಗಂಡು ಪೊಲೀಸರಿಗೆ ವಸತಿ ಸೌಕರ್ಯ ಒದಗಿಸಲಾಗುತ್ತಿದೆ ಎಂದರು. ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಅಭಿವೃದ್ಧಿ ನಿಗಮದಿಂದ 2030 ರವರೆಗೂ ಹಂತ ಹಂತವಾಗಿ ವಸತಿ ಕಲ್ಪಿಸಲಾಗುತ್ತದೆ ಹಿಂದೆ 18 ಲಕ್ಷ ರೂ ವೆಚ್ಚದಲ್ಲಿ ಕಟ್ಟಡ ನಿರ್ಮಿಸಲಾಗುತ್ತಿತ್ತು, ಈಗ 33 ಲಕ್ಷ ರೂ ವೆಚ್ಚ ಆಗಲಿದೆ. ಪೊಲೀಸರು ನೆಮ್ಮದಿಯ ಜೀವನ ಮಾಡಬೇಕು ಎಂಬುದು ಸರ್ಕಾರದ ಆಶಯವಾಗಿದೆ ಎಂದರು.

ಖಾಲಿ ಇರುವ ಪೊಲೀಸ್ ಹುದ್ದೆ ಭರ್ತಿ ಮಾಡಬೇಕು. ಪೊಲೀಸ್ ವಸತಿ ಗೃಹ ಮತ್ತಷ್ಟು ಕಟ್ಟಬೇಕು. ಮುಂದಿನ ಬಜೆಟ್‌ನಲ್ಲಿ ಇನ್ನೂ ಎರಡು ಪೊಲೀಸ್ ಠಾಣೆ ಆರಂಭಕ್ಕೆ ಅವಕಾಶ ಮಾಡಬೇಕು ಎಂದು ಶಾಸಕ ಡಾ.ಮಂತರ್ ಗೌಡ ಸಚಿವರಲ್ಲಿ ಮನವಿ ಮಾಡಿದರು. ಜಿಲ್ಲೆಯಲ್ಲಿ ಪೊಲೀಸ್ ತರಬೇತಿ ಕೇಂದ್ರಕ್ಕೆ ಜಾಗವಿದ್ದು, ಅದನ್ನೂ ಸೂಕ್ತ ಉದ್ದೇಶಕ್ಕೆ ಬಳಸಿ ಕೊಳ್ಳುವಂತಾಗಬೇಕು ಎಂದು ಸಲಹೆ ನೀಡಿದರು.

ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಅರುಣ್ ಮಾಚಯ್ಯ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ ಧರ್ಮಜ ಉತ್ತಪ್ಪ, ಸುಂಟಿಕೊಪ್ಪ ಗ್ರಾ.ಪಂ. ನಿಕಟ ಪೂರ್ವ ಅಧ್ಯಕ್ಷ ಸುನಿಲ್ ಕುಮಾರ್, ದಕ್ಷಿಣ ವಲಯ ಪೊಲೀಸ್ ಮಹಾ ನಿರೀಕ್ಷಕ ಬೋರಲಿಂಗಯ್ಯ, ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್, ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ, ಎಸ್ಪಿ ಆರ್.ಎನ್. ಬಿಂದುಮಣಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್ ಮತ್ತಿತರರು ಉಪಸ್ಥಿತರಿದ್ದರು.

ಜಿಲ್ಲಾ ನ್ಯಾಯಾಲಯದಲ್ಲಿ ಬಾಂಬ್ ಬೆದರಿಕೆ: ಕೆಲಕಾಲ ಆತಂಕ



ಬಾಂಬ್ ಬೆದರಿಕೆ ಹಿನ್ನೆಲೆಯಲ್ಲಿ ಶ್ವಾನದಳದೊಂದಿಗೆ ಪೊಲೀಸರು ತಪಾಸಣೆ ನಡೆಸಿದರು.

ಮಡಿಕೇರಿ, ಫೆ.16– ಜಿಲ್ಲಾ ನ್ಯಾಯಾಲಯದಲ್ಲಿ ಬಾಂಬ್ ಇಡಲಾಗಿದೆ ಎಂಬ ಇ–ಮೇಲ್ ಸಂದೇಶದಿಂದ ಸಿಬ್ಬಂದಿಗಳು ನ್ಯಾಯಾಧೀಶರು ಹಾಗೂ ವಕೀಲರು ಕೆಲ ಗಂಟೆಗಳ ಕಾಲ ಆತಂಕಕ್ಕೆ ಒಳಗಾದ ಘಟನೆ ನಡೆದಿದೆ.

ಇ–ಮೇಲ್ ಸಂದೇಶ ಕಂಡು ಬಂದ ತಕ್ಷಣವೇ ನ್ಯಾಯಾಧೀಶರು, ವಕೀಲರು ಹಾಗೂ ಕೋರ್ಟ್ ಸಿಬ್ಬಂದಿಗಳು ಕೋರ್ಟ್ ಕಟ್ಟಡದಿಂದ ಹೊರ ಬಂದು ಗೇಟಿನ ಹೊರ ಭಾಗದಲ್ಲಿ ನಿಂತಿದ್ದ ದೃಶ್ಯ ಕಂಡು ಬಂತು.

ಶ್ವಾನದಳ ಪರಿಶೀಲನೆ: ಘಟನೆಯ ಮಾಹಿತಿ ಅರಿತ ತಕ್ಷಣವೇ ಜಿಲ್ಲಾ ಬಾಂಬ್ ಸ್ಕ್ವಾಡ್, ಶ್ವಾನದಳ ಕೋರ್ಟ್‌ಗೆ ಆಗಮಿಸಿ ಸಂಪೂರ್ಣ ಕಟ್ಟಡವನ್ನು ಪರಿಶೀಲನೆ ನಡೆಸಿತು. ನ್ಯಾಯಾಲಯ ಹಿಂಭಾಗ, ಕೋರ್ಟ್ ಹಜಾರ, ವಾಹನ ಪಾರ್ಕಿಂಗ್ ಸ್ಥಳ, ಕ್ಯಾಂಟೀನ್ ಮತ್ತಿತರ ಕಡೆಗಳಲ್ಲಿ ಸ್ಫೋಟಕ ಸಹಿತ ಅನುಮಾನಾಸ್ಪದ ವಸ್ತುಗಳಿಗಾಗಿ ಹುಡುಕಾಟ ನಡೆಸಿತು.

ಘಟನಾ ಸ್ಥಳಕ್ಕೆ ಎಸ್.ಪಿ.ಬಿಂದುಮಣಿ, ಡಿವೈಎಸ್‌ಪಿ ಸೂರಜ್, ವೃತ್ತ ನಿರೀಕ್ಷಕ ಪಿ.ಕೆ.ರಾಜು, ಗುಪ್ತಚರ ದಳದ ಡಿವೈಎಸ್‌ಪಿ ಐ.ಪಿ. ಮೇದಪ್ಪ, ಡಿಸಿಐಬಿ, ಕ್ರೈಂ ಸಿಬ್ಬಂದಿ ಪರಿಶೀಲನೆ ನಡೆಸಿದರು. ಎಲ್ಲಾ ಸುರಕ್ಷತಾ ಮಾನದಂಡಗಳನ್ನು ಅಳವಡಿಸಿದ ಬಳಿಕ ಇದೊಂದು ಹುಸಿ ಬಾಂಬ್ ಬೆದರಿಕೆ ಎಂಬುದು ಖಚಿತವಾಗಿ ನಂತರ ಪೊಲೀಸರು ಪ್ರಕರಣ ದಾಖಲು ಮಾಡಿ ಕೊಂಡು ತನಿಖೆ ನಡೆಸುತ್ತಿದ್ದಾರೆ.

ಹುಸಿ ಬಾಂಬ್ ಬೆದರಿಕೆ ಪ್ರಕರಣಕ್ಕೆ ವಕೀಲರ ಸಂಘ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ನ್ಯಾಯಾಂಗ ವ್ಯವಸ್ಥೆಗೆ ಬಾಂಬ್ ಬೆದರಿಕೆ ಹಾಕಿರುವ ಆರೋಪಿ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ವಕೀಲರ ಸಂಘ ಆಗ್ರಹಿಸಿದೆ.

ಮನರೇಗಾ ಜಾರಿಗೆ ಒತ್ತಾಯಿಸಿ ಪ್ರತಿಭಟನೆ



ಮನರೇಗಾ ಯೋಜನೆಯ ಜಾರಿಗೆ ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರು ಪಾದಯಾತ್ರೆ ನಡೆಸಿದರು.

ವಿರಾಜಪೇಟೆ, ಫೆ.16– ನರೇಗಾ ಯೋಜನೆಯಿಂದ ಗ್ರಾಮೀಣ ಪ್ರದೇಶದಲ್ಲಿನ ಹಿಂದುಳಿದ ವರ್ಗದವರಿಗೆ ಅನುಕೂಲವಾಗುತ್ತಿತ್ತು. ಇದೀಗ ಇದನ್ನು ಕೇಂದ್ರ ಸರ್ಕಾರ ಕಿತ್ತು ಕೊಂಡು ಜನತೆಗೆ ಅನ್ಯಾಯವೆಸಗಿದೆ ಎಂದು ಶಾಸಕ ಎ.ಎಸ್.ಪೊನ್ನಣ್ಣ ಆರೋಪಿಸಿದ್ದಾರೆ.

ಬ್ಲಾಕ್ ಕಾಂಗ್ರೆಸ್ ವತಿಯಿಂದ ಮನರೇಗಾ ಬಚಾವೋ ಸಂಗ್ರಾಮದ ಅಂಗವಾಗಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿ ಮೊದಲಿದ್ದ ಯೋಜನೆಯನ್ನೆ ಸರ್ಕಾರ ಮತ್ತೆ ಜಾರಿಗೊಳಿಸುವವರೆಗೂ ನಮ್ಮ ಹೋರಾಟ ಮುಂದುವರೆಯಲಿದೆ. ಯೋಜನೆಗೆ ಕೇಂದ್ರ ಸರ್ಕಾರದಿಂದ ಶೇ 90ರಷ್ಟು ಅನುದಾನ ಬರುತ್ತಿತ್ತು ಇದೀಗ ಅನುದಾನವಿಲ್ಲದಂತಾಗಿದೆ ಎಂದು ದೂರಿದರು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಮಾತನಾಡಿದರು. ಸಿ.ಎಸ್. ಅರುಣ್ ಮಾಚಯ್ಯ, ಧರ್ಮಜ ಉತ್ತಪ್ಪ, ಮಾಜಿ ಎಂಎಲ್ಸಿ ಸದಸ್ಯೆ ವೀಣಾ ಅಚ್ಚಯ್ಯ, ಎಸ್.ಎಚ್. ಮತೀನ್, ಅಧ್ಯಕ್ಷ ಪಿ.ರಂಜಿ ಪೂಣಚ್ಚ, ಮೀದೇರಿರ ನವೀನ್, ಇಸ್ಮಾಯಿಲ್, ರೂಪ ದೇವಯ್ಯ, ಪಿ.ಜಿ ಅಯ್ಯಪ್ಪ, ಟಾಟು ಮೊಣ್ಣಪ್ಪ, ಕೆ.ಬಿ.ಶಾಂತಪ್ಪ, ಹನೀಫ್ ಇದ್ದರು.

ಇಗ್ಗುತ್ತಪ್ಪ ದೇವಾಲಯದ ವಾರ್ಷಿಕ ಉತ್ಸವ ಸಂಪನ್ನ



ನಾಪೋಕ್ಲು, ಫೆ.16–(ದುಗ್ಗಳ)–ಇಲ್ಲಿಗೆ ಸಮೀಪದ ಪೇರೂರು ಗ್ರಾಮದ ಇಗ್ಗುತ್ತಪ್ಪ ದೇವಾಲಯದಲ್ಲಿ ಭಾನುವಾರ ವಾರ್ಷಿಕ ಉತ್ಸವ ಶಿವರಾತ್ರಿಯ ವಿಶೇಷ ಪೂಜೆ ರುದ್ರಾಭಿಷೇಕ ಮತ್ತು ಮಹಾಪೂಜೆ ಶ್ರದ್ಧಾ ಭಕ್ತಿಯಿಂದ ಸಂಪನ್ನಗೊಂಡಿತ್ತು.

ಭಕ್ತರು ಬೆಳಿಗ್ಗೆಯಿಂದಲೇ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಮಧ್ಯಾಹ್ನ ಭಕ್ತರಿಂದ ತುಲಾಭಾರ ಸೇವೆ ನಡೆಯಿತು. ಮಧ್ಯಾಹ್ನ ದೇವಾಲಯದ ಆವರಣದಲ್ಲಿ ಗ್ರಾಮಸ್ಥರಿಂದ ಬೊಳಕಾಟ್ ಪ್ರದರ್ಶನ ಏರ್ಪಡಿಸಲಾಯಿತು.

ಅಪಾರ ಸಂಖ್ಯೆಯಲ್ಲಿ ಸೇರಿದ್ದ ಭಕ್ತರು ಉತ್ಸವದಲ್ಲಿ ಪಾಲ್ಗೊಂಡು ದೇವರ ನೃತ್ಯ ಬಲಿ ವೀಕ್ಷಿಸಿ ಪುನೀತಭಾವ ಹೊಂದಿದರು. ದೇವಾಲಯದ ಅರ್ಚಕ ಗಿರೀಶ್ ನೇತೃತ್ವದಲ್ಲಿ ರುದ್ರಾಭಿಷೇಕ, ವಿಶೇಷ ಪೂಜೆಗಳು ಸೇರಿದಂತೆ ಪೂಜಾ ವಿಧಿ ವಿಧಾನ ಕಾರ್ಯಕ್ರಮಗಳು ಜರುಗಿದವು. ಆಡಳಿತ ಮಂಡಳಿ ಅಧ್ಯಕ್ಷರು, ಮಚ್ಚೂರ ರವೀಂದ್ರ, ಕಾರ್ಯದರ್ಶಿ ಅಪ್ಪಚ್ಚಿರ ಪೊನ್ನಪ್ಪ ತಕ್ಕ ಮುಖ್ಯಸ್ಥರು, ದೇವಾಲಯ ಸಮಿತಿ ಸದಸ್ಯರು, ಭಕ್ತರು ಪಾಲ್ಗೊಂಡಿದ್ದರು.

ಸುಗಮವಾಗಿ ಪಿಯು ಪರೀಕ್ಷೆ ನಡೆಸಲು ಡಿಸಿ ಸೂಚನೆ



ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಪೂರ್ವಭಾವಿ ಸಭೆ ನಡೆಸಿದರು.

ಮಡಿಕೇರಿ, ಫೆ.16–ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯು ಇದೇ ಫೆ. 28 ರಿಂದ ಮಾ.17 ರವರೆಗೆ ನಡೆಯಲಿದ್ದು, ಪರೀಕ್ಷೆಯಲ್ಲಿ ವ್ಯವಸ್ಥಿತವಾಗಿ ನಡೆಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ನಿರ್ದೇಶನ ನೀಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಅವರ ಕಚೇರಿ ಸಭಾಂಗಣದಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಸಿದ್ಧತೆ ಸಂಬಂಧ ಸೋಮವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಪರೀಕ್ಷೆಯನ್ನು ಯಾವುದೇ ರೀತಿ ಗೊಂದಲ ಉಂಟಾಗದೆ ಸುಗಮ ಹಾಗೂ ಸುವ್ಯ ವಸ್ಥಿತವಾಗಿ ನಡೆಸಬೇಕು. ಪರೀಕ್ಷೆಗೆ ಮೇಲ್ವಿಚಾರಕರ ನಿಯೋಜನೆ, ಪೊಲೀಸರು ಹಾಗೂ ಆರೋಗ್ಯ ಸಿಬ್ಬಂದಿಗಳ ನಿಯೋಜನೆ ಸೇರಿದಂತೆ ಪಿಯು ಪರೀಕ್ಷಾ ಪ್ರಾಧಿಕಾರದ ನಿರ್ದೇಶನವನ್ನು ಚಾಚೂ ತಪ್ಪದೆ ಪಾಲಿಸುವಂತೆ ಸೂಚಿಸಿದರು.

ದ್ವಿತೀಯ ಪಿಯುಸಿ ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸಬೇಕು. ಪರೀಕ್ಷಾ ಕೊಠಡಿಗಳಲ್ಲಿ ಸಿಸಿಟಿವಿ ಅಳವಡಿಸುವುದು ಸೇರಿದಂತೆ ಪರೀಕ್ಷಾ ಪಾವಿತ್ರ್ಯತೆಯನ್ನು ಕಾಪಾಡಬೇಕು. ಪರೀಕ್ಷಾ ಕೇಂದ್ರಗಳ ಚಲನವಲನ ಸಂಬಂಧಿಸಿದಂತೆ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಮಾಡಬೇಕು. ವಿದ್ಯಾರ್ಥಿಗಳು ನೋಂದಣಿ ಸಂಖ್ಯೆ ಹಾಗೂ ಕೊಠಡಿ ಸಂಖ್ಯೆ ಖಾತರಿಪಡಿಸಿಕೊಳ್ಳಲು ಕೇಂದ್ರದ ನಾಲ್ಕೈದು ಕಡೆಗಳಲ್ಲಿ ಮಾಹಿತಿ ಒದಗಿಸುವಂತಾಗಬೇಕು ಎಂದು ಸಲಹೆ ಮಾಡಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಮಾತನಾಡಿ, ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯನ್ನು ಸುಗಮವಾಗಿ ನಡೆಸಲು ಪದವಿ ಪೂರ್ವ ಶಿಕ್ಷಣ, ಕಂದಾಯ, ಪೊಲೀಸ್, ಖಜಾನೆ, ಸಾರಿಗೆ, ಸೆಸ್ಕ್, ಆರೋಗ್ಯ ಹೀಗೆ ವಿವಿಧ ಇಲಾಖೆಗಳು ತಂಡವಾಗಿ ಕಾರ್ಯ ನಿರ್ವಹಿಸಲಾಗುತ್ತದೆ ಎಂದು ಹೇಳಿದರು.

ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ವಿಜಯ್ ಮಾತನಾಡಿ, ಜಿಲ್ಲೆಯಲ್ಲಿ ಈ ಬಾರಿ 5255 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದು, ಮೊದಲ ಬಾರಿಗೆ 4,809 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ. 250 ಖಾಸಗಿಯಾಗಿ ಹಾಗೂ 196 ಪುನರಾವರ್ತಿತ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಕಲಾ ವಿಭಾಗದಲ್ಲಿ 1,054 ವಿದ್ಯಾರ್ಥಿಗಳು, ವಾಣಿಜ್ಯ ವಿಭಾಗದಲ್ಲಿ 2603 ವಿದ್ಯಾರ್ಥಿಗಳು, ವಿಜ್ಞಾನ ವಿಭಾಗದಲ್ಲಿ 1598 ವಿದ್ಯಾರ್ಥಿಗಳು ಒಟ್ಟು 5,255 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಜಿಲ್ಲೆಯ 18 ಕೇಂದ್ರ ಗಳಲ್ಲಿ ದ್ವಿತೀಯ ಪಿಯು ಪರೀಕ್ಷೆ ನಡೆಯಲಿದೆ. ತಾಲೂಕಿನ 5, ಸೋಮವಾರಪೇಟೆ ತಾಲೂಕಿನ 8 ಮತ್ತು ವಿರಾಜಪೇಟೆ ತಾಲೂಕಿನ 5 ಕಡೆಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದು ತಿಳಿಸಿದರು.

ಜಿಲ್ಲಾ ಖಜಾನಾಧಿಕಾರಿ ರಘುನಾಥ್, ಭಾಗಮಂಡಲ ಕಾವೇರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಕೆ.ಜೆ.ದಿವಾಕರ, ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣಪ್ಪ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಸದಾಶಿವ ಪಲ್ಲೇದ್, ಸಿದ್ಧರಾಜು ಬೆಳ್ಳಯ್ಯ, ಹಂಡ್ರಂಗಿ ನಾಗರಾಜು ಅವರು ಮಾತನಾಡಿದರು. ಪ್ರಾದೇಶಿಕ ಸಾರಿಗೆ ಅಧಿಕಾರಿ ಸತೀಶ್, ತಹಶೀಲ್ದಾರ್ ಶ್ರೀಧರ, ಕಿರಣ್ ಗೌರಯ್ಯ, ಪೊಲೀಸ್ ಇನ್ಸ್‌ಪೆಕ್ಟರ್ ರಾಜು, ವಿವಿಧ ಕಾಲೇಜಿನ ಪ್ರಾಂಶುಪಾಲರು, ಮೇಲ್ವಿಚಾರಕರು ಇತರರು ಇದ್ದರು.

ಫೆ.19, ಮಡಿಕೇರಿಯಲ್ಲಿ ಗೋಪಾಲಕೃಷ್ಣ ಪ್ರಶಸ್ತಿ ಪ್ರದಾನ

ಮಡಿಕೇರಿ,ಫೆ.16: ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನೀಡಲಾಗುವ ಪತ್ರಿಕಾರಂಗದ ಭೀಷ್ಮ ಬಿ.ಎಸ್. ಗೋಪಾಲಕ?ಷ್ಣ ಹೆಸರಿನ ದತ್ತಿ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಫೆ.19 ರಂದು ಗುರುವಾರ ಸಂಜೆ 6 ಗಂಟೆಗೆ ಮಡಿಕೇರಿಯಲ್ಲಿ ಕೊಡಗು ಪತ್ರಕರ್ತರ ಸಂಘದ ಸಹಯೋಗದಲ್ಲಿ ಆಯೋಜಿಸಲಾಗಿದೆ. ಮಡಿಕೇರಿಯ ವೈದ್ಯ ಸಾಹಿತಿ ಡಾ.ಕೆ.ಬಿ. ಸೂರ್ಯ ಕುಮಾರ್ ಅವರಿಗೆ ಅಂದು ಪ್ರಶಸ್ತಿ ಪ್ರಧಾನ ಮಾಡಲಾಗುತ್ತದೆ.

ನಗರದ ರೆಡ್ ಬ್ರಿಕ್ಸ್ ಇನ್ ನ ಸತ್ಕಾರ್ ಸಭಾಂಗಣದಲ್ಲಿ ಫೆ.19 ರಂದು ಗುರುವಾರ ಸಂಜೆ 6 ಗಂಟೆಗೆ ಆಯೋಜಿತ ಸಮಾರಂಭವನ್ನು ಹಿರಿಯ ಸಾಹಿತಿ ಬಿ.ಎ. ಷಂಶುದ್ದೀನ್ ಉದ್ಘಾಟಿಸಲಿದ್ದು, ಹಿರಿಯ ಸಾಹಿತಿ ಬಾಲಸುಬ್ರಹ್ಮಣ್ಯ ಕಂಜರ್ಪಣೆ, ದಿ. ಬಿ.ಎಸ್. ಗೋಪಾಲಕೃಷ್ಣ ಹೆಸರಿನ ದತ್ತಿ ಪ್ರಶಸ್ತಿಯನ್ನು ಸಾಹಿತಿ ಬಾಲಸುಬ್ರಹ್ಮಣ್ಯ ಕಂಜರ್ಪಣೆ ವೈದ್ಯ ಸಾಹಿತಿ ಡಾ.ಕೆ.ಬಿ. ಸೂಯ9ಕುಮಾರ್ ಅವರಿಗೆ ಪ್ರದಾನ ಮಾಡಲಿದ್ದಾರೆ.

ಪರಿಷತ್ ಅಧ್ಯಕ್ಷ ಕೇಶವಕಾಮತ್ ಅಧ್ಯಕ್ಷತೆಯಲ್ಲಿ ಹಿರಿಯ ಪತ್ರಕರ್ತರಾದ ಜಿ.ರಾಜೇಂದ್ರ, ಬಿ.ಜಿ. ಅನಂತಶಯನ, ಟಿ.ಪಿ. ರಮೇಶ್, ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಟಿ. ಅನಿಲ್ ಮಡಿಕೇರಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಕಡ್ಲೇರ ತುಳಸಿ ಮೋಹನ್ ಪಾಲ್ಗೊಳ್ಳಲಿದ್ದಾರೆ ಎಂದು ಕಸಾಪ ಪ್ರಕಟಣೆ ತಿಳಿಸಿದೆ.

ನಿಡುಬೆ ಬಸಪ್ಪ ನಿಧನ



ನಾಪೋಕ್ಲು, ಫೆ.16–ಕೊರಂಗಾಲ ಗ್ರಾಮದ ನಿವಾಸಿ ನಿಡುಬೆ ಮನೆ ಪಟ್ಟೆದಾರ ನಿಡುಬೆ ಬಸಪ್ಪ (88) ಸೋಮವಾರ ನಿಧನರಾದರು. ಮೃತರು ಮೂವರು ಪುತ್ರರು, ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಕೊರಂಗಾಲ ಗ್ರಾಮದಲ್ಲಿ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿ.ವೆಂಕಟೇಶ್



ನಾಪೋಕ್ಲು: ಕಾಂತೂರು ಮೂರ್ನಾಡು ನಿವಾಸಿ ಕೆರೆಮನೆ ವಿ. ವೆಂಕಟೇಶ್ (ರಾಜು 88) ಭಾನುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಹಾಗೂ ಒಬ್ಬ ಪುತ್ರನನ್ನು ಅಗಲಿದ್ದಾರೆ.ಮೃತರ ಅಂತ್ಯಕ್ರಿಯೆ ಸೋಮವಾರ ಜರುಗಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾದಪ್ಪನ ಸನ್ನಿಧಿಯಲ್ಲಿ ಭಕ್ತ ಸಾಗರದಿಂದ ಶಿವರಾತ್ರಿ ಜಾಗರಣೆ



ಮಹಾಶಿವರಾತ್ರಿ ಹಬ್ಬದ ಹಿನ್ನೆಲೆಯಲ್ಲಿ ಮಹದೇಶ್ವರ ಸ್ವಾಮಿ ಬೆಟ್ಟದಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಭಕ್ತರು ಸ್ವಾಮಿಯ ದರ್ಶನ ಪಡೆಯುವುದರೊಂದಿಗೆ ಮಾದಪ್ಪನ ಸ್ಮರಣೆ ಮಾಡುತ್ತಾ ಜಾಗರಣೆ ಮಾಡಿದರು.

ಹನೂರು: ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ಮಾದಪ್ಪನ ಸನ್ನಿಧಿಯಲ್ಲಿ ವಿಜೃಂಭಣೆಯಿಂದ ನಡೆದ ಮಹಾ ಶಿವರಾತ್ರಿ ಜಾಗರಣೆ ಉತ್ಸವದಲ್ಲಿ ಭಕ್ತ ಸಾಗರವೇ ನೆರೆದು ಮಾದಪ್ಪನ ಸ್ಮರಣೆ ಮಾಡಿದರೆ ಸಾಲೂರು ಬೃಹನ್ ಮಠದ ಅಧ್ಯಕ್ಷರಾದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮಿಗಳ ಜೊತೆ ಗೂಡಿ ಕಲಾ ಸಂಸ್ಕೃತಿಯನ್ನು ಶಾಸಕ ಎಂ.ಆರ್. ಮಂಜುನಾಥ್ ಅವರು ಭಾಗವಹಿಸಿ ಸಂಭ್ರಮಿಸಿದರು.

ಚಾ.ನಗರ ಜಿಲ್ಲೆ ಹನೂರು ತಾಲ್ಲೂಕು ವ್ಯಾಪ್ತಿಯಲ್ಲಿರುವ ನಾಡಿನ ಪ್ರಸಿದ್ಧ ಯಾತ್ರಾ ಸ್ಥಳವಾದ ಮಲೆ ಮಹದೇಶ್ವರ ಬೆಟ್ಟ ಮಹದೇಶ್ವರರು ನೆಲೆಸಿರುವ ಪ್ರಖ್ಯಾತ ದೇಗುಲದಲ್ಲಿ ಶನಿವಾರದಿಂದ ಪ್ರಾರಂಭವಾದ ಮಹಾಶಿವರಾತ್ರಿ ಜಾತ್ರಾ ಮಹೋತ್ಸವ. ಮೊದಲ ದಿನ ಮಾದಪ್ಪನಿಗೆ ವಿಶೇಷ ಪೂಜೆಗಳು ನಡೆದವು. ಆಗಮಿಸಿದ ಲಕ್ಷಾಂತರ ಮಂದಿ ಭಕ್ತರು ದೇಗುಲಕ್ಕೆ ಭೇಟಿ ನೀಡಿ, ಮಾದಪ್ಪನ ದರ್ಶನ ಪಡೆದರು.

ಭಕ್ತ ಸಾಗರ: ಐದು ದಿನಗಳ ಕಾಲ ನಡೆಯುವ ಮಹಾಶಿವರಾತ್ರಿ ಹಬ್ಬದಲ್ಲಿ ಮಹದೇಶ್ವರ ಸ್ವಾಮಿಯ ದರ್ಶನ ಪಡೆದು ಇಷ್ಟಾರ್ಥಗಳು ಸಿದ್ಧಿಸುತ್ತವೆ ಎಂಬ ನಂಬಿಕೆ ಹೊಂದಿರುವ ಭಕ್ತರಲ್ಲಿ ಅಚಲ ದೃಢ ನಿರ್ಧಾರ ಪೂರ್ವಿಕರ ನಂಬಿಕೆಯನ್ನು ಉಳಿಸಲು ಮಾದಪ್ಪನ ದರ್ಶನ ಪಡೆಯಲು ಭಕ್ತ ಸಾಗರವೇ ಹರಿದು ಬಂದಿತ್ತು. ದೇಗುಲದ ಆವರಣ ಸೇರಿದಂತೆ ಎತ್ತ ನೋಡಿದರೂ ಕಣ್ಣು ಹಾಯಿಸಿದಷ್ಟು ದೂರ ಭಕ್ತರು ತುಂಬಿ ತುಳುಕುತ್ತಿದ್ದರು. ಎಲ್ಲೆಡೆ ಮಹದೇಶ್ವರನ ನಾಮ ಸ್ಮರಣೆ ಅನುರಣಿಸುತ್ತಿತ್ತು.

ಜಾತ್ರೆ ಆರಂಭಕ್ಕೂ ಮುನ್ನವೇ ನಾಡಿನ ಹಲವು ಭಾಗಗಳಿಂದ ಭಕ್ತರು ಕಾಲ್ನಡಿಗೆಯಲ್ಲಿ ಬಂದು ಕ್ಷೇತ್ರದಲ್ಲಿ ಬಿಡಾರ ಹೂಡಿದ್ದಾರೆ. ದೇಗುಲದ ಪ್ರಾಂಗಣ, ಸಾಲೂರು ಮಠದ ಸುತ್ತಮುತ್ತ ಸಾರ್ವಜನಿಕ ಸ್ಥಳಗಳಲ್ಲಿ ಬಿಡಾರ ಹೂಡಿರುವ ಭಕ್ತರು ಮಹಾ ರಥೋತ್ಸವದಲ್ಲಿ ಭಾಗವಹಿಸಲು ಉತ್ಸುಕರಾಗಿದ್ದಾರೆ. ರಾಜ್ಯದ ನಾನಾ ಭಾಗಗಳಲ್ಲದೆ ನೆರೆಯ ರಾಜ್ಯಗಳಾದ ತಮಿಳುನಾಡು ಹಾಗೂ ಕೇರಳದಿಂದಲೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದಾರೆ.

ಸಾಲೂರು ಮಠದ ಶ್ರೀಗಳಾದ ಶಾಂತ ಮಲ್ಲಿಕಾರ್ಜುನ ಸ್ವಾಮಿ ಮತ್ತು ಶಾಸಕ ಎಂ.ಆರ್. ಮಂಜುನಾಥ್ ಅವರು ರಾತ್ರಿ ನಡೆದ ಮಹಾ ಶಿವರಾತ್ರಿ ಜಾಗರಣೆಯಲ್ಲಿ ಇಡೀ ರಾತ್ರಿ ಪೂರ್ತಿ ಭಾಗವಹಿಸಿದ್ದರು. ವಿವಿಧ ಕಲಾ ತಂಡಗಳಿಂದ ಗ್ರಾಮೀಣ ಸೊಗಡು ಜಾನಪದ ಕಲೆ ಹಾಡುಗಾರಿಕೆ ನೃತ್ಯ ಕಲಾ ಸಂಸ್ಕೃತಿ ದರ್ಶನವನ್ನು ಕಣ್ತುಂಬಿಕೊಂಡರು. ಇವರ ಜೊತೆ ಮಾದಪ್ಪನ ಲಕ್ಷಾಂತರ ಭಕ್ತರು ಶ್ರೀಗಳು ಮತ್ತು ಶಾಸಕರ ಅನುಯಾಯಿಗಳು ಕೂಡ ರಾತ್ರಿ ಜಾಗರಣೆಯಲ್ಲಿ ಭಾಗವಹಿಸಿದ್ದರು.

ಜಾಗರಣೆ ಮುಗಿದ ಬಳಿಕ ಸಾಲೂರು ಮಠದ ಶ್ರೀಗಳು ಶಾಸಕ ಮಂಜುನಾಥ್ ಜಿಲ್ಲಾಧಿಕಾರಿ ರೂಪ ಬೇಡಗಂಪನ ಅರ್ಚಕರು ಸಮ್ಮುಖದಲ್ಲಿ ಶಾಂತ ಮಲ್ಲಿಕಾರ್ಜುನ ಸ್ವಾಮಿಗಳು ಮಾದಪ್ಪ ಸ್ವಾಮಿಗೆ ಬಂಗಾರದ ಕಿರೀಟ ಧಾರಣೆ ಮಾಡಿ ಪೂಜೆ ಸಲ್ಲಿಸಿದರು.

ಈ ವೇಳೆ ಜಿಲ್ಲಾಧಿಕಾರಿ ಶ್ರೀರೂಪ, ಪ್ರಾಧಿಕಾರ ಕಾರ್ಯದರ್ಶಿ ರಘು ಕೊಳ್ಳೇಗಾಲ ಡಿವೈಎಸ್ಪಿ ಧರ್ಮೇಂದ್ರ ಹಾಗೂ ಮುಖಂಡ ರಾದ ಡಿ ಆರ್ ಮಾದೇಶ್, ಮಂಜೇಶ್, ಚಿನ್ನವೆಂಕಟ್, ವಿಜಯ್ ಕುಮಾರ್, ಕೃಷ್ಣ, ಎಸ್.ಆರ್. ಮಹದೇವ್, ಸುರೇಶ್ ಇದ್ದರು.


ಕಾಡಿನಿಂದ ಹೊರ ಬಂದ ಜಿಂಕೆ ರಕ್ಷಿಸಿ ಅರಣ್ಯ ಇಲಾಖೆಗೆ ಒಪ್ಪಿಸಿದ ಯುವಕ



ಬೇಗೂರು (ಗುಂಡ್ಲುಪೇಟೆ): ಬೇಂಕಿಯ ಜ್ವಾಲೆ ತಾಳಲಾರದೆ ಕಾಡಿನಿಂದ ನಾಡಿನತ್ತ ಬಂದ ಜಿಂಕೆಯೊಂದನ್ನು ಪ್ರಾಣಿ ಪ್ರಿಯ ಪ್ರದೀಪ್ ಮಣೆಗಾರ ರಕ್ಷಿಸಿ ಅರಣ್ಯಾಧಿಕಾರಿಗಳಿ ಗೊಪ್ಪಿಸಿದ ಘಟನೆ ಸಮೀಪದ ಕುರುಬರ ಹುಂಡಿ ಗ್ರಾಮದಲ್ಲಿ ನಡೆದಿದೆ.

ಕಳೆದ ಎರಡು ದಿನಗಳ ಹಿಂದೆ ಆಕಸ್ಮಿಕವಾಗಿ ಬಿದ್ದ ಬೆಂಕಿಯಿಂದ ಬೇಗೂರು ಸಮೀಪದ ಮಂಚಳ್ಳಿ ಗ್ರಾಮದ ಸಿದ್ದಪ್ಪಾಜಿ ಗುಡ್ಡ ಹಾಗೂ ಕುರುಬರಹುಂಡಿ ಗ್ರಾಮದ ನೀಲಿಸಿದ್ದಪ್ಪಾಜಿ ಬೆಟ್ಟ ಗಳಲ್ಲಿ ಬೆಂಕಿ ಕಾಣಿಸಿಕೊಂಡಿದ್ದು ಇದರಿಂದ ಗಾಬರಿಗೊಂಡ ಜಿಂಕೆಯೊಂದು ಕಾಡಿನಿಂದ ನಾಡಿನತ್ತ ದಿಕ್ಕು ತಪ್ಪಿ ಬಂದು ಕುರುಬರಹುಂಡಿ ಗ್ರಾಮದ ಹರೀಶ್ ಬಿನ್ ಸಿದ್ದಪ್ಪ ರವರ ಮನೆಗೆ ನುಗ್ಗಿತು. ವಿಷಯ ತಿಳಿದ ಹರೀಶ್ ಮನೆಯ ಬಾಗಿಲು ಹಾಕಿ ಸಹಾಯಕ್ಕೆ ಕೂಗಿಕೊಂಡಾಗ ಅಲ್ಲೇ ಇದ್ದ ಪ್ರದೀಪ್ ಮಣೆಗಾರ ಸೇರಿ ಜಿಂಕೆಯನ್ನು ಹಿಡಿದು ಹಗ್ಗದಿಂದ ಕಟ್ಟಿ ಕೂಡಲೇ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ವಿಷಯ ತಿಳಿಸಿದ್ದು ಅರಣ್ಯ ಇಲಾಖೆ ಸಿಬ್ಬಂದಿಗಳು ಜಿಂಕೆಯನ್ನು ಮತ್ತೆ ಕಾಡಿಗೆ ಬಿಟ್ಟಿದ್ದಾರೆ

ಗುಂಡಾಲ್ ಜಲಾಶಯದಲ್ಲಿ ಗಂಡು ಹುಲಿಯ ಕಳೇಬರ ಪತ್ತೆ



ಚಾಮರಾಜನಗರ: ಹುಲಿಗಳ ನಾಡು ಚಾಮರಾಜನಗರ ಜಿಲ್ಲೆಯಲ್ಲಿ ಹುಲಿಗಳ ಸಾವಿನ ಪ್ರಕರಣ ಮುಂದುವರಿದಿದ್ದು, ಭಾನುವಾರವೂ ಒಂದು ಗಂಡು ಹುಲಿ ಕಳೇಬರ ಪತ್ತೆಯಾಗಿದೆ.

ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಗುಂಡಾಲ್ ಜಲಾಶಯದ ದಡದಲ್ಲಿ ಹುಲಿಯ ಮೃತದೇಹ ತೇಲುತ್ತಿರುವ ರೀತಿ ಪತ್ತೆಯಾಗಿದೆ. ಸುಮಾರು 5 ರಿಂದ 6 ವರ್ಷ ಪ್ರಾಯದ ಹುಲಿ ಇದಾಗಿದ್ದು, ಹುಲಿಯು ಉರುಳಿಗೆ ಸಿಲುಕಿ ಸಾವನ್ನಪ್ಪಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಅಧಿಕಾರಿಗಳು ಪ್ರಕಟಣೆ ಮೂಲಕ ಮಾಹಿತಿ ಹಂಚಿಕೊಂಡಿದ್ದು, ಕೊಳ್ಳೇಗಾಲ ವನ್ಯಜೀವಿ ವಲಯದ ಗುಂಡಾಲ್ ಶಾಖೆಯಲ್ಲಿ ಸಿಬ್ಬಂದಿ ಗಸ್ತಿನಲ್ಲಿರುವಾಗ ಹುಲಿ ಮೃತಪಟ್ಟಿರುವುದು ಬೆಳಕಿಗೆ ಬಂದಿದೆ ಎಂದು ತಿಳಿಸಿದೆ.

ಮೇಲ್ನೋಟಕ್ಕೆ ಉರುಳಿಗೆ ಸಿಲುಕಿ ಗುಂಡಾಲ್ ಡ್ಯಾಮ್ ಹತ್ತಿರ ಬಂದು ನೀರಿನ ದಡದಲ್ಲಿ ಮೃತಪಟ್ಟಿರುವ ಸಾಧ್ಯತೆ ಇದೆ. ಎನ್‌ಟಿಸಿಎ ಮಾರ್ಗಸೂಚಿಯಂತೆ ಎನ್‌ಟಿಸಿಯ ನಾಮನಿರ್ದೇಶಿತ ಪ್ರತಿನಿಧಿ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮುಖ್ಯ ವನ್ಯಜೀವಿ ಪರಿಪಾಲಕರ ಸಮ್ಮುಖದಲ್ಲಿ ಪಶು ವೈದ್ಯಾಧಿಕಾರಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಕಳೇಬರವನ್ನು ಸುಡಲಾಗುವುದು. ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ನಡೆಯುತ್ತಿದೆ ಎಂದು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಕ್ಯಾಮರಾ ಕಣ್ಣಿಗೆ ಸೆರೆ ಸಿಕ್ಕ ಅಪರೂಪದ ಪ್ರಾಣಿ ಬ್ಲಾಕ್ ಫಾಕ್ಸ್



ಅಪರೂಪದ ಪ್ರಾಣಿ ಬ್ಲಾಕ್ ಫಾಕ್ಸ್ (ಕಪ್ಪು ನರಿ) ಕ್ಯಾಮರಾಕ್ಕೆ ಪೋಸ್ ಕೊಟ್ಟಿದೆ. ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲದ ಮುಡುಗುಂಡದಿಂದ ಬಿಳಿರಂಗನ ಬೆಟ್ಟದ ವಡ್ಡುಗೆರೆ ಕಡೆಗೆ ಹೋಗುವ ರಸ್ತೆ ಬದಿಯ ಜಮೀನಿನಲ್ಲಿ ನರಿ ಜಾತಿಗೆ ಸೇರಿದ ಬ್ಲಾಕ್ ಫಾಕ್ಸ್ (ಕಪ್ಪು ನರಿ) ಕಾಣಿಸಿಕೊಂಡಿದೆ. ಈ ಚಿತ್ರವನ್ನು ಕಿರಣ್ ಮಿಠಾಯಿ ಕೊಳ್ಳೇಗಾಲ ಹಾಗೂ ನವೀನ್ ವನ್ಯಜೀವಿ ಛಾಯಾಗ್ರಾಹಕರು ತಮ್ಮ ಕ್ಯಾಮರಾದಲ್ಲಿ ಸೆರೆಹಿಡಿದಿದ್ದಾರೆ.

ಚಾ.ನಗರ ಜಿಲ್ಲೆಯಾದ್ಯಂತ ಮಹಾಶಿವರಾತ್ರಿ ಆಚರಣೆ



ಚಾಮರಾಜನಗರ: ಜಿಲ್ಲೆಯಾದ್ಯಂತ ಭಾನುವಾರ ಸಂಭ್ರಮ–ಸಡಗರದಿಂದ ಮಹಾ ಶಿವರಾತ್ರಿ ಹಬ್ಬವನ್ನು ಆಚರಿಸಲಾಯಿತು.

ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಹಾಗೂ ಹನೂರು ತಾಲೂಕು ಕೇಂದ್ರ ಸೇರಿದಂತೆ ಜಿಲ್ಲೆಯ ಎಲ್ಲಾ ಗ್ರಾಮೀಣ ಪ್ರದೇಶಗಳಲ್ಲಿರುವ ಶಿವನ ದೇವಾಲಯಗಳಲ್ಲಿ ಮುಂಜಾನೆಯಿಂದಲೇ ಪ್ರಾರ್ಥನೆ, ಜಪ, ಧ್ಯಾನ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ನಡೆಯಿತು.

ಬೆಳಗ್ಗೆಯಿಂದಲೇ ಭಕ್ತರು ದೇವಾಲಯಗಳಿಗೆ ತೆರಳಿ ಶಿವನ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಚಾಮರಾಜನಗರದ ಐತಿಹಾಸಿಕ ಚಾಮರಾಜೇಶ್ವರಸ್ವಾಮಿ ದೇವಾಲಯದಲ್ಲಿ ಶಿವರಾತ್ರಿ ಹಿನ್ನೆಲೆಯಲ್ಲಿ ಬೆಳಗ್ಗೆಯಿಂದಲೇ ವಿಶೇಷ ಪೂಜಾ ಕಾರ್ಯಗಳು ನಡೆಯಿತು. ನಗರ ಸೇರಿದಂತೆ ಸುತ್ತಲಿನ ಗ್ರಾಮಗಳ ಜನರು ದೇವಾಲಯಕ್ಕೆ ಆಗಮಿಸಿ ಸ್ವಾಮಿಯ ದರ್ಶನ ಪಡೆದು ಶಿವನಾಮ ಸ್ಮರಣೆ ಮಾಡಿದರು.

ಯಳಂದೂರು ತಾಲೂಕಿನ ಮಾಂಬಳ್ಳಿ ವೈದ್ಯನಾಥೇಶ್ವರ, ಆಮೆಕೆರೆ ಗಜಾರಣ್ಯ ಕ್ಷೇತ್ರದ ಶಿವ–ಪಾರ್ವತಿ ದೇವಸ್ಥಾನ, ಪಂಚಲಿಂಗೇಶ್ವರ ಹಾಗೂ ಗೌರೀಶ್ವರ ದೇವಾಲಯ, ಗಣಿಗನೂರು ನೀಲಕಂಠೇಶ್ವರ ಹಾಗೂ ಕೆಸ್ತೂರು ತ್ರಿನೇತ್ರೇಶ್ವರ ದೇವಾಲಯಗಳಿಗೆ ಭಕ್ತರು ತೆರಳಿ ಪೂಜೆ ಸಲ್ಲಿಸಿದರು.

ಇದಲ್ಲದೇ ಕೊಳ್ಳೇಗಾಲ, ಹನೂರು ಹಾಗೂ ಗುಂಡ್ಲುಪೇಟೆ ತಾಲೂಕಿನಾದ್ಯಂತ ಇರುವ ಮಲೆ ಮಹದೇಶ್ವರ ದೇಗುಲಗಳು ಸೇರಿದಂತೆ ಶಿವನ ಆಲಯದಲ್ಲಿ ವಿಶೇಷ ವ್ರತಾಚರಣೆ ನಡೆಯಿತು. ಶಿವರಾತ್ರಿ ಅಂಗವಾಗಿ ಎಲ್ಲೆಡೆ ಹಬ್ಬದ ಸಂಭ್ರಮ ಮನೆ ಮಾಡಿತ್ತು. ನಗರ, ಪಟ್ಟಣ ಹಾಗೂ ಗ್ರಾಮೀಣ ಪ್ರದೇಶ ಸೇರಿದಂತೆ ಎಲ್ಲೆಡೆ ಭಕ್ತರು ಮಡಿಯುಟ್ಟು ಶಿವ ಕ್ಷೇತ್ರಗಳಿಗೆ ತೆರಳಿ ಶಿವನಾಮ ಸ್ಮರಣೆ ಮಾಡಿದರು. ಸ್ತ್ರೀಯರು ಬೆಳಗ್ಗೆಯೇ ಮನೆಯನ್ನು, ತಳಿರು ತೋರಣಗಳಿಂದ ಸಿಂಗರಿಸಿ, ಶಿವನಿಗೆ ಪೂಜೆ ಸಲ್ಲಿಸಿದರು.

ರಸ್ತೆ ಅಪಘಾತದಲ್ಲಿ ಬರ್ತ್‌ಡೇ ದಿನವೇ ಯುವಕ ಸಾವು



ಕೊಳ್ಳೇಗಾಲ, ಫೆ16–ಕಾರು ಡಿಕ್ಕಿ ಹೊಡೆದ ಪರಿಣಾಮ ಜನುಮ ದಿನದಂದೇ ಬೈಕ್ ಸವಾರ ಸಾವನ್ನಪ್ಪಿರುವ ಘಟನೆ ತಾಲೂಕಿನ ಸತ್ತೇಗಾಲ ಹ್ಯಾಂಡ್ ಪೋಸ್ಟ್ ಬಳಿ ಭಾನುವಾರ ಸಂಭವಿಸಿದೆ.

ತಾಲೂಕಿನ ಸತ್ತೇಗಾಲ ಗ್ರಾಮದ ಸುರೇಶ್ ಅವರ ಪುತ್ರ ಸುನೀಲ್(27) ಮೃತ ದುರ್ದೈವಿ.

ಈತ ಬೆಂಗಳೂರಿನಲ್ಲಿ ಹೋಟೆಲ್ ನಡೆಸುತ್ತಿದ್ದು, ಶಿವರಾತ್ರಿ ಹಬ್ಬದ ದಿನವಾದ ಭಾನುವಾರ ಅವನ ಜನುಮದಿನವಾಗಿತ್ತು. ಭಾನುವಾರ ಶಿವರಾತ್ರಿ ಹಬ್ಬ ಮತ್ತು ತನ್ನ ಹುಟ್ಟು ಹಬ್ಬದ ಸಲುವಾಗಿ ಮ.ಬೆಟ್ಟಕ್ಕೆ ತೆರಳಲು ಊರಿಗೆ ಆಗಮಿಸಿದ್ದ ತನ್ನ ಕುಟುಂಬದವರನ್ನು ದೇವಸ್ಥಾನಕ್ಕೆ ಕಳುಹಿಸಿ ಸುನೀಲ್ ಜಮೀನು ಕಡೆ ಹೋಗಿ ಅಲ್ಲಿಂದ ವಾಪಸ್ ಬಂದು ಬೆಟ್ಟಕ್ಕೆ ತೆರಳಲು ತನ್ನ ಬೈಕ್‌ನಲ್ಲಿ ಹ್ಯಾಂಡ್ ಪೋಸ್ಟ್ ಬಳಿ ತೆರಳುತ್ತಿದ್ದಾಗ ಶಿವನಸಮುದ್ರ ಕಡೆಯಿಂದ ಬಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ತೀವ್ರವಾಗಿ ಗಾಯಗೊಂಡ. ಈ ಹಿನ್ನೆಲೆಯಲ್ಲಿ ತಕ್ಷಣ ಗಾಯಾಳನ್ನು ಕೊಳ್ಳೇಗಾಲ ಆಸ್ಪತ್ರೆಗೆ ಕರೆದುಕೊಂಡು ಬರುವಷ್ಟರಲ್ಲಿ ಗಾಯಾಳು ಸಾವನ್ನಪ್ಪಿದ್ದಾನೆ.

ವಿಚಾರ ತಿಳಿದ ಮೃತನ ಕುಟುಂಬದವರು ಬೆಟ್ಟದಿಂದ ವಾಪಸ್ಸಾಗಿ ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಮರಣೋತ್ತರ ಪರೀಕ್ಷೆ ನಡೆಸಿ ಬಳಿಕ ವಾರಸುದಾರರಿಗೆ ಒಪ್ಪಿಸಿ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ. ಬೈಕ್‌ನಲ್ಲಿ ಕುಳಿತಿದ್ದ ಹಿಂಬದಿ ಸವಾರ ರೋಹನ್ ಸಣ್ಣ, ಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾನೆ

ಕುಡಿದು ಆಟೋ ಓಡಿಸಿದ ಚಾಲಕನಿಗೆ ಬೋರ್ಡ್ ಹಿಡಿದು ನಿಲ್ಲುವ ಶಿಕ್ಷೆ



ಚಾಮರಾಜನಗರ: ಮದ್ಯಪಾನ ಮಾಡಿ ಆಟೋ ಚಾಲನೆ ಮಾಡಿ ಪೊಲೀಸರಿಗೆ ಸಿಕ್ಕಿಬಿದ್ದ ಚಾಲಕನಿಗೆ 'ಮದ್ಯಪಾನ ಮಾಡಿ ವಾಹನವನ್ನು ಚಲಾಯಿಸಬೇಡಿ' ಎಂಬ ಫಲಕ ಹಿಡಿದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಂತೆ ಚಾಮರಾಜನಗರ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರು ಶಿಕ್ಷೆ ವಿಧಿಸಿ, ಆದೇಶಿಸಿದ್ದಾರೆ.

ನಗರದ ನಿವಾಸಿಯೂ ಆದ ಆಟೋ ಚಾಲಕ ರಾಜಶೇಖರ್ ಶಿಕ್ಷೆಗೆ ಒಳಗಾದವನು.

ಈತ ಮದ್ಯಪಾನ ಮಾಡಿ ಆಟೋ ಚಾಲನೆ ಮಾಡುವಾಗ ಸಂಚಾರಿ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾನೆ. ಬಳಿಕ ಪೊಲೀಸರು ಈತನ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಈ ಸಂಬಂಧ ವಿಚಾರಣೆ ನಡೆಸಿದ ಚಾಮರಾಜನಗರ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಾದ ಸಿ.ಡಿ. ಪ್ರಕಾಶ್ ಅವರು, ಆರೋಪಿಗೆ ಒಂದು ಸಾವಿರ ದಂಡ ಹಾಗೂ ಮದ್ಯಪಾನ ಮಾಡಿ ವಾಹನವನ್ನು ಚಲಾಯಿಸಬೇಡಿ ಎಂಬ ಬೋರ್ಡ್ ಹಿಡಿದು ಜಾಗೃತಿ ಮೂಡಿಸುವಂತೆ ಶಿಕ್ಷೆ ವಿಧಿಸಿ ಆದೇಶಿಸಿದ್ದಾರೆ.

ಅದರಂತೆ ಸೋಮವಾರ ಬೆಳಗ್ಗೆ 10 ರಿಂದ ಮಧ್ಯಾಹ್ನ 12 ಗಂಟೆವರೆಗೆ ಹಾಗೂ ಸಂಜೆ 4 ಗಂಟೆಯಿಂದ 6 ಗಂಟೆಯವರೆಗೂ ನಗರದ ಭುವನೇಶ್ವರಿ ವೃತ್ತದಲ್ಲಿ ಆಟೋ ಚಾಲಕ ರಾಜಶೇಖರ್ ಮದ್ಯಪಾನ ಮಾಡಿ ವಾಹನವನ್ನು ಚಲಾಯಿಸಬೇಡಿ ಎಂಬ ಫ್ಲೆಕ್ಸ್ ಬೋರ್ಡ್ ಹಿಡಿದು ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದನು.


ಕೊಯಮತ್ತೂರಿನ ಈಶ ಯೋಗ ಕೇಂದ್ರದಲ್ಲಿ ಮಹಾಶಿವರಾತ್ರಿ ಅದ್ದೂರಿ ಆಚರಣೆ

ಕೇಂದ್ರ ರಕ್ಷಣಾ ಸಚಿವ ರಾಜನಾಥ್‌ಸಿಂಗ್, ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಇತರ ಗಣ್ಯರ ಉಪಸ್ಥಿತಿ

ಮೈಸೂರು, ಫೆ.16– ತಮಿಳುನಾಡು ಕೊಯಮತ್ತೂರಿನ ಈಶ ಯೋಗ ಕೇಂದ್ರದಲ್ಲಿ ಮಹಾಶಿವರಾತ್ರಿ ಎಂದಿನಂತೆ ಸಂಭ್ರಮ–ಸಡಗರದಿಂದ ನೆರವೇರಿತು.

ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಕೇಂದ್ರ ಮಾಹಿತಿ ಮತ್ತು ಪ್ರಸಾರ ಹಾಗೂ ಸಂಸದೀಯ ವ್ಯವಹಾರಗಳ ರಾಜ್ಯ ಸಚಿವ ಡಾ.ಎಲ್.ಮುರುಗನ್ ಸೇರಿ ಅನೇಕ ರಾಜಕೀಯ ಗಣ್ಯರು, ಕ್ರೀಡಾಪಟುಗಳು, ಉದ್ಯಮಿಗಳು, ನಟರು, ಗಾಯಕರು, ಕಲಾವಿದರು ಸೇರಿದಂತೆ ಅನೇಕ ಗಣ್ಯರು ರಾತ್ರಿಯಿಡೀ(ಸಂಜೆ 6ರಿಂದ ಬೆಳಗ್ಗೆ 6) ಸದ್ಗುರು ಮುನ್ನಡೆಸಿದ ವಾರ್ಷಿಕ ಸಾಂಸ್ಕೃತಿಕ ವೈಭವಕ್ಕೆ ಸಾಕ್ಷಿಯಾದರು.

ಸದ್ಗುರುಗಳು ಯೋಗ ಕೇಂದ್ರದಲ್ಲಿ ಕೇಂದ್ರ ಸಚಿವ ರಾಜನಾಥ್ ಸಿಂಗ್ ಅವರನ್ನು ಬರಮಾಡಿಕೊಂಡು, ಇತರ ಗಣ್ಯರೊಂದಿಗೆ ಧ್ಯಾನಲಿಂಗಕ್ಕೆ ಪೂಜೆ ಸಲ್ಲಿಸಿದ ನಂತರ ಎಲ್ಲರನ್ನೂ ಆಚರಣೆಯ ಪ್ರಮುಖ ಸ್ಥಳವಾದ ಪ್ರಖ್ಯಾತ ಆದಿಯೋಗಿಯ ಬಳಿಗೆ ಕರೆದೊಯ್ದರು. ಈ ವೇಳೆ ಸಚಿವರು ಯೋಗೇಶ್ವರ ಲಿಂಗಕ್ಕೆ ಕೈಲಾಸ ತೀರ್ಥ ಸಮರ್ಪಿಸಿದರು. ವಿಶ್ವದಾದ್ಯಂತ ಯೋಗದ ಮಹತ್ವ ಪಸರಿಸುವ ಮಹಾಯೋಗ ಯಜ್ಞವನ್ನು ಬೆಳಗಿಸುವ ಮೂಲಕ ರಾತ್ರಿಯಿಡೀ ನಡೆದ ಶಿವರಾತ್ರಿ ಸಂಭ್ರಮಾಚರಣೆಗೆ ಚಾಲನೆ ನೀಡಿದರು. ಲಿಂಗ ಭೈರವಿ ಉತ್ಸವ ಮೂರ್ತಿ ಮೆರವಣಿಗೆ ಮತ್ತು ಮಹಾ ಆರತಿಯೊಂದಿಗೆ ಅದ್ಭುತವಾಗಿ ಪ್ರಾರಂಭವಾಯಿತು.



ತಮಿಳುನಾಡು ಕೊಯಮತ್ತೂರಿನ ಈಶ ಯೋಗ ಕೇಂದ್ರದಲ್ಲಿ ಸದ್ಗುರು ನೇತೃತ್ವದಲ್ಲಿ ಮಹಾ ಶಿವರಾತ್ರಿ ಆಚರಣೆ ಅದ್ದೂರಿಯಾಗಿ ನೆರವೇರಿತು.



ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಸೇರಿದಂತೆ ಹಲವು ಗಣ್ಯರು ಪಾಲ್ಗೊಂಡಿದ್ದರು.

ಸದ್ಗುರುಗಳು ಗಣ್ಯರು ಮತ್ತು ಪ್ರೇಕ್ಷಕರನ್ನು ಕಾರ್ಯಕ್ರಮಕ್ಕೆ ಸ್ವಾಗತಿಸುತ್ತಾ, ಆದಿಯೋಗಿ ಕೇವಲ ಭೂತಕಾಲಕ್ಕೆ ಸೇರಿದವರಲ್ಲ. ಅವರು ಭವಿಷ್ಯತ್ತಿಗೆ ಸೇರಿದವರು. ಏಕೆಂದರೆ ಅವರು ನೀಡಿರುವುದು ನಂಬಿಕೆಯ ಕಟ್ಟುಪಾಡುಗಳು, ತತ್ವಶಾಸ್ತ್ರಗಳು, ಸಿದ್ಧಾಂತಗಳು ಅಥವಾ ಬೋಧನೆಗಳು ಆನಂದ ಮಯ ಜೀವನಕ್ಕೆ ಸಾಧನಗಳಾಗಿವೆ. ಇವು ಮುಂದಿನ ಎರಡು ವರ್ಷಗಳಲ್ಲಿ ಜಾಗತಿಕವಾಗಿ ಪ್ರಸಾರಗೊಳ್ಳಬೇಕೆಂದು ಬಯಸುತ್ತೇವೆ ಎಂದರು.

ಇದೇ ವೇಳೆ ಭವ್ಯ ಭಾರತ ನಿರ್ಮಾಣಕ್ಕೆ ಕೊಡುಗೆ ನೀಡಿರುವ ಹಾಗೂ ನೀಡುತ್ತಿರುವವರನ್ನು ಗುರುತಿಸಿ, ಗೌರವಿಸುವ ಉದ್ದೇಶದಿಂದ ಸದ್ಗುರು 'ಭವ್ಯ ಭಾರತ ಭೂಷಣ್' ಪ್ರಶಸ್ತಿ ಘೋಷಿಸಿದರು. ಶ್ರೀ ನಂಬಿ ನಾರಾಯಣ್ ಮತ್ತು ಶ್ರೀ ಕಿರಣ್ ಕುಮಾರ್(ವಿಜ್ಞಾನ ಮತ್ತು ತಂತ್ರಜ್ಞಾನ), ಶ್ರೀಮತಿ ಅಲರ್ಮೆಲ್ ವಲ್ಲಿ (ಶಾಸ್ತ್ರೀಯ ನೃತ್ಯ), ಶ್ರೀಮತಿ ಎನ್.ರಾಜಂ(ಸಂಗೀತ), ವಿಕ್ರಮ್ ಸಂಪತ್ (ಇತಿಹಾಸ ಮತ್ತು ಸಂಸ್ಕೃತಿ), ಶ್ರೀಮತಿ ಸೈನಾ ನೆಹ್ವಾಲ್(ಕ್ರೀಡೆ), ಏರ್ ಮಾರ್ಷಲ್ ಜಿತೇಂದ್ರ ಮಿಶ್ರಾ, ಲೆಫ್ಟಿನೆಂಟ್ ಜನರಲ್ ಎವಿಎಸ್ ರಾಥಿ ಮತ್ತು ವೈಸ್ ಅಡ್ಮಿರಲ್ ಆರ್ವಿ ಗೋಖಲೆ (ಆಪರೇಷನ್ ಸಿಂಧೂರ್ ಗೌರವಾರ್ಥವಾಗಿ) ಅವರಿಗೆ ರಕ್ಷಣಾ ಸಚಿವರು ಪ್ರಶಸ್ತಿ ಪ್ರದಾನ ಮಾಡಿ, ಅಭಿನಂದಿಸಿದರು. ಈ ವೇಳೆ ಕೇಂದ್ರ ಸಚಿವ ರಾಜನಾಥ್ ಸಿಂಗ್ ಮಾತನಾಡಿ, ಇಲ್ಲಿ ನಾನು ಅನುಭವಿಸುತ್ತಿರುವ ದೈವತ್ವವು ಅವಿಸ್ಮರಣೀಯ. ಯಾರೂ ಹೇಳದಿದ್ದರೂ ಈ ಸ್ಥಳವು ದೇವದೇವ ಮಹಾದೇವನ ಅನುಗ್ರಹಕ್ಕೆ ಪಾತ್ರವಾಗಿದೆ. ಮಾನವಕುಲವು ಒತ್ತಡ, ಆತಂಕ ಮತ್ತು ಆಂತರಿಕ ಅಶಾಂತಿಯ ನಡುವೆ ಸಾಗುತ್ತಿರುವಾಗ, ಶಿವನ ಪ್ರಸ್ತುತತೆ ಇನ್ನಷ್ಟು ಗಹನವಾಗುತ್ತದೆ. ಶಿವನು ಅವ್ಯವಸ್ಥೆಯ ನಡುವೆಯೂ ಸಮತೋಲನವನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬುದನ್ನು ತೋರಿಸುವ ಒಂದು ಜೀವಂತ ಸಾಧ್ಯತೆ. ಆಧ್ಯಾತ್ಮಿಕತೆ ಎಂಬುದು ಜೀವನವನ್ನು ಹೆಚ್ಚು ಪರಿಣಾಮಕಾರಿ ಮತ್ತು ಸಮತೋಲನಗೊಳಿಸುವ ಒಂದು ವಿಜ್ಞಾನ. ಇದನ್ನು ಮನದಟ್ಟು ಮಾಡಿಕೊಡುವ ಮೂಲಕ ಸದ್ಗುರುಗಳು ಮಹಾಶಿವರಾತ್ರಿಯನ್ನು ಒಂದು ಅಂತರರಾಷ್ಟ್ರೀಯ ಆಧ್ಯಾತ್ಮಿಕ ಸಂಭ್ರಮಾಚರಣೆಯನ್ನಾಗಿ ಮುನ್ನಡೆಸುತ್ತಿದ್ದಾರೆ ಎಂದು ಬಣ್ಣಿಸಿದರು.

ಈಶ ಯೋಗ ಕೇಂದ್ರಕ್ಕೆ ಭಕ್ತರು ಸಾಗರೋಪಾದಿಯಲ್ಲಿ ಆಗಮಿಸಿದ್ದರು. 70ಕ್ಕೂ ಹೆಚ್ಚು ದೇಶಗಳಿಂದ ಸಾವಿರ ಶಿಬಿರಾರ್ಥಿಗಳು, 4 ಸಾವಿರಕ್ಕೂ ಹೆಚ್ಚು ಸ್ವಯಂ ಸೇವಕರು ಭಾಗವಹಿಸಿದ್ದರು. ಹಲವಾರು ಗಣ್ಯರು, ಆಧ್ಯಾತ್ಮಿಕ ನಾಯಕರು ಮತ್ತು ಕಲಾವಿದರು ವಿವಿಧ ಕಾರ್ಯಕ್ರಮ ನಡೆಸಿಕೊಟ್ಟರು. ಜಗತ್ತಿನ 25 ಭಾಷೆಗಳ 200ಕ್ಕೂ ಹೆಚ್ಚು ಟಿವಿ ಚಾನೆಲ್‌ಗಳು ಹಾಗೂ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳಲ್ಲಿ ಮಹಾಶಿವರಾತ್ರಿ ಆಚರಣೆಯ ನೇರಪ್ರಸಾರ ಮಾಡಲಾಯಿತು.

ವರಿಷ್ಠರ ಆದೇಶ ಧಿಕ್ಕರಿಸಿ ವಿದೇಶ ಪ್ರವಾಸ ಹೊರಟಿರುವ ಸಚಿವರು, ಶಾಸಕರು!

ಬೆಂಗಳೂರು, ಫೆ.16(ಕೆಎಂಶಿ)–ಪಕ್ಷದ ವರಿಷ್ಠರ ಆದೇಶಕ್ಕೂ ಮಣಿಯದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಬಲಿಗ 20 ಮಂದಿ ಸಚಿವರು, ಶಾಸಕರು ವಿದೇಶ ಪ್ರವಾಸಕ್ಕೆ ತೆರಳುತ್ತಿದ್ದಾರೆ.

ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ ತೆರೆಮರೆಯಲ್ಲಿ ಭಾರೀ ಸಮರ ನಡೆದಿರುವ ಬೆನ್ನಲ್ಲೇ ಮುಖ್ಯಮಂತ್ರಿ ಆಪ್ತ ಸಚಿವ, ಶಾಸಕರು ತಮ್ಮ ಕುಟುಂಬ ಸಮೇತ ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್‌ಗೆ 10 ದಿನಗಳ ಪ್ರವಾಸಕ್ಕೆ ಹೊರಟಿದ್ದಾರೆ.

ಆದೇಶ ಧಿಕ್ಕರಿಸಿ ಕೆಲವು ಶಾಸಕರು ವಿದೇಶ ಪ್ರವಾಸಕ್ಕೆ ತೆರಳುತ್ತಿದ್ದಾರೆ ಎಂಬ ಮಾಹಿತಿ ಬರುತ್ತಿದ್ದಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಸಿದ್ದರಾಮಯ್ಯ ಬಳಗದಲ್ಲಿರುವ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರನ್ನು ತಮ್ಮ ನಿವಾಸಕ್ಕೆ ಕರೆಸಿಕೊಂಡು ಸಮಾಲೋಚನೆ ನಡೆಸಿದ್ದಾರೆ.

ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ನಾಯಕತ್ವದಲ್ಲಿ ಕಳೆದ ವಾರವೇ 11 ಶಾಸಕರು ವಿದೇಶ ಪ್ರವಾಸ ಕೈಗೊಳ್ಳಬೇಕಿತ್ತು. ಅಧಿಕಾರ ಹಸ್ತಾಂತರ ಗೊಂದಲದ ನಡುವೆ ಪಕ್ಷದ ಶಾಸಕರು ವಿದೇಶ ಪ್ರವಾಸ ಕೈಗೊಂಡರೆ ತಪ್ಪು ಸಂದೇಶ ಹೋಗುತ್ತದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಅವರನ್ನು ಸಂಪರ್ಕಿಸಿ, ನಮ್ಮ ಸದಸ್ಯರು ವಿದೇಶ ಪ್ರವಾಸ ಕೈಗೊಳ್ಳದಿರಲು ಮಲ್ಲಿಕಾರ್ಜುನ ಖರ್ಗೆ ಆದೇಶಿಸಿದ್ದಾರೆ ಎಂಬ ಮಾಹಿತಿ ನೀಡಿದ್ದರು.



ಸುರ್ಜೇವಾಲ, ಮುಖ್ಯಮಂತ್ರಿ ಅವರನ್ನಷ್ಟೇ ಅಲ್ಲದೆ, ವಿದೇಶ ಪ್ರವಾಸ ತೆರಳುತ್ತಿರುವವರನ್ನೂ ಸಂಪರ್ಕಿಸಿ ವರಿಷ್ಠರ ಆದೇಶ ಪಾಲಿಸುವಂತೆ ಸಲಹೆ ಮಾಡಿದ್ದರು.

ಸಿದ್ದರಾಮಯ್ಯ ಮತ್ತು ಶಿವಕುಮಾರ್ ನಡುವೆ ಅಧಿಕಾರಕ್ಕಾಗಿ ಉಂಟಾಗಿರುವ ಬಿಕ್ಕಟ್ಟು ಪರಿಹಾರಕ್ಕೆ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಮಧ್ಯಪ್ರವೇಶ ಮಾಡುತ್ತಿದ್ದಾರೆ ಎಂಬ ಖಚಿತ ಮಾಹಿತಿ ದೊರೆಯುತ್ತಿದ್ದಂತೆ, ಮುಖ್ಯಮಂತ್ರಿ ತಮ್ಮ ಬೆಂಬಲಿಗರ ವಿದೇಶ ಪ್ರವಾಸಕ್ಕೆ ಹಸಿರು ನಿಶಾನೆ ತೋರಿದ್ದಾರೆನ್ನಲಾಗಿದೆ.

ನಾಯಕನ ಆದೇಶದಂತೆ ಅಧ್ಯಯನ ನೆಪದಲ್ಲಿ ಶಾಸಕರು ವಿದೇಶ ಪ್ರವಾಸಕ್ಕೆ ತೆರಳಲಿದ್ದಾರೆ.

ಶಾಸಕರ ವಿದೇಶ ಪ್ರವಾಸದ ಪೂರ್ಣ ವೆಚ್ಚವನ್ನು ಸಿದ್ದರಾಮಯ್ಯ ಬಣಕ್ಕೆ ಸೇರಿದ ಇಬ್ಬರು ಸಚಿವರು ಭರಿಸಿರುವರಲ್ಲದೆ, ಪ್ರವಾಸ ಹೊರಟವರ ಎಲ್ಲಾ ವ್ಯವಸ್ಥೆಯನ್ನು ಇವರೇ ಮಾಡಿದ್ದಾರೆ.

ಸಚಿವ ಕೆ.ವೆಂಕಟೇಶ್ ನಾಯಕತ್ವದಲ್ಲಿ ವಿಧಾನಸಭಾ ಸದಸ್ಯರಾದ ಪುಟ್ಟರಂಗ ಶೆಟ್ಟಿ, ಎಚ್.ಡಿ.ತಮ್ಮಯ್ಯ, ಹಂಪನಗೌಡ ಬಾದರ್ಲಿ, ದೇವೇಂದ್ರಪ್ಪ, ಯಶವಂತರಾಯ ಗೌಡ ಪಾಟೀಲ್, ಬಿ.ಎಂ.ನಾಗರಾಜ್, ಜೆ.ಟಿ.ಪಾಟೀಲ್, ಅಲ್ಲಮಪ್ರಭು ಪಾಟೀಲ್, ಬಸನಗೌಡ ದದ್ದಲ್, ಎ.ಆರ್.ಕೃಷ್ಣಮೂರ್ತಿ, ಬಸನಗೌಡ ತುರುವೀಹಾಳ್, ಬಿ.ಬಿ.ಚಿಮ್ಮನಕಟ್ಟಿ, ಮಹಂತೇಶ್ ಕೌಜಲಗಿ, ರಾಘವೇಂದ್ರ ಇಟ್ನಾಳ್, ರಘುಮೂರ್ತಿ, ಅನಿಲ್ ಚಿಕ್ಕಮಾಧು. ವಿಧಾನ ಪರಿಷತ್ ಸದಸ್ಯರಾದ ವಸಂತಕುಮಾರ್, ಶರಣಗೌಡ ಬಯ್ಯಾಪುರ, ಡಾ. ತಿಮ್ಮಯ್ಯ ಪ್ರವಾಸದಲ್ಲಿರುವ ಸದಸ್ಯರು.

ಬಾಗೇಪಲ್ಲಿ ಕಾಂಗ್ರೆಸ್ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಆಯ್ಕೆ ಅಸಿಂಧು!

● ಹೈಕೋರ್ಟ್ ಏಕಸದಸ್ಯ ಪೀಠ ಆದೇಶ ● ಪರಾಜಿತ ಬಿಜೆಪಿ ಅಭ್ಯರ್ಥಿ ಮುನಿರಾಜು ತಕರಾರು ಅರ್ಜಿ ವಿಚಾರಣೆ ಬಳಿಕ ಆದೇಶ

ಬೆಂಗಳೂರು, ಫೆ.16(ಕೆಎಂಶಿ)–ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಸ್.ಎನ್. ಸುಬ್ಬಾರೆಡ್ಡಿ ಆಯ್ಕೆಯನ್ನು ಅಸಿಂಧುಗೊಳಿಸಿ ಕರ್ನಾಟಕ ಹೈಕೋರ್ಟ್ ಇಂದು ಆದೇಶ ಮಾಡಿದೆ.

ಕಳೆದ 2023ರ ಚುನಾವಣೆಯಲ್ಲಿ ಸುಬ್ಬಾರೆಡ್ಡಿ ವಿರುದ್ಧ ಸ್ಪರ್ಧಿಸಿದ್ದ ಬಿಜೆಪಿ ಅಭ್ಯರ್ಥಿ ಸಿ.ಮುನಿರಾಜು ಸಲ್ಲಿಸಿದ್ದ ತಕರಾರು ಅರ್ಜಿ ವಿಚಾರಣೆ ನಡೆಸಿದ ನ್ಯಾ.ಎಂ.ಜೆ.ಎಸ್.ಕಮಲ್ ಅವರ ಏಕಸದಸ್ಯ ಪೀಠ ಈ ಆದೇಶ ಮಾಡಿದೆ.

ಹೈಕೋರ್ಟ್ ತೀರ್ಪನ್ನು ಚುನಾವಣಾ ಆಯೋಗ ಹಾಗೂ ವಿಧಾನಸಭಾ ಕಾರ್ಯದರ್ಶಿ ಅವರಿಗೂ ರವಾನಿಸುವಂತೆ ನ್ಯಾಯಪೀಠ ಸೂಚಿಸಿದ್ದು, ಶಾಸಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳು ಸ್ಥಗಿತಗೊಳ್ಳಲಿವೆ.

ಸುಬ್ಬಾರೆಡ್ಡಿ ಅವರನ್ನು ವಿಧಾನಸಭಾ ಸದಸ್ಯತ್ವದಿಂದ ಅನರ್ಹಗೊಳಿಸಿದ್ದರೂ, ಎರಡನೇ ಸ್ಥಾನದಲ್ಲಿದ್ದ ಮುನಿರಾಜು ಅವರನ್ನು ವಿಜಯಿ ಅಭ್ಯರ್ಥಿ ಎಂಬುದಾಗಿ ಘೋಷಿಸಲು ಹೈಕೋರ್ಟ್ ನಿರಾಕರಿಸಿದೆ.

ಈ ಬಗ್ಗೆ ಚುನಾವಣಾ ಆಯೋಗ ತೀರ್ಮಾನ ಕೈಗೊಳ್ಳಬೇಕಿದ್ದು, ಕ್ಷೇತ್ರಕ್ಕೆ ಹೊಸದಾಗಿ ಉಪ ಚುನಾವಣೆ ನಡೆಸುವ ಅಥವಾ ಎರಡನೇ ಅಭ್ಯರ್ಥಿಯನ್ನು ವಿಜಯಿ ಎಂದು ಘೋಷಿಸುವ ಜವಾಬ್ದಾರಿ ಚುನಾವಣಾ ಆಯೋಗದ ಮುಂದಿದೆ.



ಚುನಾವಣೆಗೆ ಸ್ಪರ್ಧಿಸಿದ ವೇಳೆ ಕಾಂಗ್ರೆಸ್ ಅಭ್ಯರ್ಥಿ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ ನೀಡಿದ ವಿವರಗಳು ಸುಳ್ಳಿನಿಂದ ಕೂಡಿದ್ದು ಆಯ್ಕೆಯನ್ನು ಅಸಿಂಧು ಎಂಬುದಾಗಿ ಘೋಷಿಸುವಂತೆ ಬಿಜೆಪಿ ಅಭ್ಯರ್ಥಿ ಹೈಕೋರ್ಟ್‌ಗೆ ತಕರಾರು ಅರ್ಜಿ ಸಲ್ಲಿಸಿದ್ದರು.

ಕಾಂಗ್ರೆಸ್ ಅಭ್ಯರ್ಥಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ, ತಮ್ಮ ಆಸ್ತಿ ವಿವರ ಮುಚ್ಚಿಟ್ಟು ಸುಳ್ಳು ವಿವರ ನೀಡಿದ್ದಾರೆ, ಅಲ್ಲದೆ, ಆಸ್ತಿಗಳ ತೆರಿಗೆ ಪಾವತಿ ಬಾಕಿ ಮಾಹಿತಿಯನ್ನೂ ಉಲ್ಲೇಖಿಸಿಲ್ಲ, ಈ ಹಿನ್ನೆಲೆಯಲ್ಲಿ ಅವರ ಆಯ್ಕೆಯನ್ನು ಅನೂರ್ಜಿತಗೊಳಿಸಬೇಕು ಎಂದು ಕೋರಿ ಚುನಾವಣಾ ತಕರಾರು ಅರ್ಜಿ ಸಲ್ಲಿಸಲಾಗಿತ್ತು. 2 ಕಡೆಯ ವಾದ–ಪ್ರತಿವಾದ ಆಲಿಸಿದ ಹೈಕೋರ್ಟ್, ಪ್ರಮಾಣ ಪತ್ರದಲ್ಲಿ ನೀಡಿದ ವಿವರಗಳು ಸತ್ಯಕ್ಕೆ ದೂರವಾಗಿದ್ದರಿಂದ ಸುಬ್ಬಾರೆಡ್ಡಿ ಆಯ್ಕೆಯನ್ನು ಅಸಿಂಧು ಎಂದು ಘೋಷಿಸಿತು.

ಮೇಲ್ಮನವಿ ಸಲ್ಲಿಕೆವರೆಗೆ ಆದೇಶಕ್ಕೆ ತಡೆಯಾಜ್ಞೆ ನೀಡುವಂತೆ ಎಸ್.ಎನ್.ಸುಬ್ಬಾರೆಡ್ಡಿ ಪರ ಹಿರಿಯ ವಕೀಲ ಜಯಕುಮಾರ್ ಎಸ್.ಪಾಟೀಲ್ ಮನವಿ ಮಾಡಿದರು. ಈ ಮನವಿಗೆ ಅರ್ಜಿದಾರರ ಪರ ಹಿರಿಯ ವಕೀಲರಾದ ನಳಿನಾ ಮಾಯಗೌಡ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಕೆಗೆ ಕಾಲಾವಕಾಶ ಇದ್ದು, ಆದೇಶಕ್ಕೆ ತಡೆಯಾಜ್ಞೆ ದೊರೆಯದಿದ್ದಲ್ಲಿ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರಕ್ಕೆ ಮರುಚುನಾವಣೆ ಅನಿವಾರ್ಯವಾಗಲಿದೆ.



ಪಾಕ್ ವಿರುದ್ಧ ಗೆದ್ದ ಭಾರತ ಸೂಪರ್ 8ಗೆ

ಕೊಲಂಬೋ, ಫೆ.16– ಇಶಾನ್ ಕಿಶನ್ ಅವರ ಭರ್ಜರಿ ಅರ್ಧಶತಕ ಹಾಗೂ ಬೌಲರ್‌ಗಳ ಕರಾರುವಾಕ್ ಬೌಲಿಂಗ್ ದಾಳಿ ನೆರವಿನಿಂದ ಬದ್ಧವೈರಿ ಪಾಕಿಸ್ತಾನದ ವಿರುದ್ಧ ಭಾರತ 61 ರನ್‌ಗಳ ಅಮೋಘ ಜಯ ಸಾಧಿಸಿದೆ. ಆ ಮೂಲಕ ಗ್ರೂಪ್ 'ಎ' ವಿಭಾಗದಲ್ಲಿ 6 ಅಂಕ ಸಂಪಾದಿಸಿ ಸೂಪರ್ 8 ಹಂತವನ್ನು ಪ್ರವೇಶಿಸಿದೆ. ಅಲ್ಲದೇ ಕಳೆದ 9 ಪಂದ್ಯಗಳಲ್ಲಿ 8ನೇ ಪಂದ್ಯವನ್ನು ಟೀಂ ಇಂಡಿಯಾ ಗೆದ್ದಂತಾಗಿದೆ.

ಕೊಲಂಬೋದ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆದ 'ಎ' ಗುಂಪಿನ ಭಾನುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 175 ರನ್ ಗಳಿಸಿತು. ಇದಕ್ಕುತ್ತರವಾಗಿ ಪಾಕಿಸ್ತಾನ 18 ಓವರ್‌ಗಳಲ್ಲಿ 114 ರನ್ ಗಳಿಸುವಷ್ಟರಲ್ಲಿ ಆಲೌಟ್ ಆಗಿ ಸೋಲು ಅನುಭವಿಸಿತು.

ನಿಧಾನಗತಿಯ ಪಿಚ್ ನಲ್ಲಿ ಸ್ಪರ್ಧಾತ್ಮಕ ಗುರಿ ಪಡೆದಿದ್ದ ಪಾಕಿಸ್ತಾನ ಮೊದಲ ಓವರ್‌ನಲ್ಲೇ ಅಪಾಯಕಾರಿ ಸಾಹಿಬ್‌ಝಾದಾ ಫರ್ಹಾನ್ ವಿಕೆಟ್ ಕಳೆದುಕೊಂಡಿತು. ನಂತರ ಬಂದ ಸೈಮ್ ಅಯೂಬ್ 6, ನಾಯಕ ಸಲ್ಮಾನ್ ಆಘಾ 4, ಬಾಬರ್ ಅಜಂ 5 ರನ್ ಗಳಿಸಿ ಬಹುಬೇಗ ವಿಕೆಟ್ ಒಪ್ಪಿಸಿದರು. ಈ ವೇಳೆಗೆ ಪಾಕಿಸ್ತಾನ 34 ರನ್ ಆಗುವಷ್ಟರಲ್ಲಿ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ನಂತರ ಆಗಮಿಸಿದ ಉಸ್ಮಾನ್ ಖಾನ್ 34 ಎಸೆತಗಳಲ್ಲಿ 6 ಬೌಂಡರಿ, 1 ಸಿಕ್ಸರ್ ಒಳಗೊಂಡ 44 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ಶಹೀನ್ ಶಾ ಅಫ್ರಿದಿ 23, ಶದಾಬ್ ಖಾನ್ 14, ಫಹೀಮ್ ಅಶ್ರಫ್ 10 ರನ್ ಗಳಿಸಿದರು. ಭಾರತದ ಪರ ಹಾರ್ದಿಕ್ ಪಾಂಡ್ಯ, ಬುಮ್ರಾ, ಅಕ್ಷರ್ ಪಟೇಲ್, ವರುಣ್ ಚಕ್ರವರ್ತಿ ತಲಾ 2, ಕುಲದೀಪ್ ಯಾದವ್, ತಿಲಕ್ ವರ್ಮಾ ತಲಾ 1 ವಿಕೆಟ್ ಪಡೆದರು.



ಇದಕ್ಕೂ ಮೊದಲು ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತದ ಪರ ಇನ್ನಿಂಗ್ಸ್ ಆರಂಭಿಸಿದ ಅಭಿಷೇಕ್ ಶರ್ಮಾ ಮೊದಲ ಓವರ್‌ನಲ್ಲಿ ಶೂನ್ಯಕ್ಕೆ ಔಟಾದರು. ನಂತರ ಇಶಾನ್ ಕಿಶನ್ ಹಾಗೂ ತಿಲಕ್ ವರ್ಮಾ 2ನೇ ವಿಕೆಟ್‌ಗೆ 87 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು.

ಬ್ಯಾಟಿಂಗ್‌ಗೆ ಸಹಕಾರ ನೀಡದ ಪಿಚ್‌ನಲ್ಲಿ ಯಾವುದೇ ಒತ್ತಡವಿಲ್ಲದೆ ಪಾಕ್ ಬೌಲಿಂಗ್ ಬೆಂಡೆತ್ತಿದ ಇಶಾನ್ ಕಿಶನ್ 27 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಅಲ್ಲದೇ ಶತಕದತ್ತ ಮುನ್ನುಗ್ಗುತ್ತಿದ್ದ ವೇಳೆ 40 ಎಸೆತಗಳಲ್ಲಿ 3 ಸಿಕ್ಸರ್, 10 ಬೌಂಡರಿ ಒಳಗೊಂಡ 77 ರನ್ ಗಳಿಸಿ ವಿಕೆಟ್ ಒಪ್ಪಿಸಿ ಹೊರ ನಡೆದರು. ನಂತರ ಬಂದ ತಿಲಕ್ ವರ್ಮಾ 25, ನಾಯಕ ಸೂರ್ಯಕುಮಾರ್ ಯಾದವ್ 32, ಶಿವಂ ದುಬೆ 27, ರಿಂಕು ಸಿಂಗ್ ಅಜೇಯ 11 ರನ್ ಗಳಿಸಿ ತಂಡ ಗೌರವಯುತ ಮೊತ್ತ ದಾಖಲಿಸಲು ನೆರವಾದರು. ಪಾಕ್ ಪರ ಸಯೀಮ್ ಅಯೂಬ್ 3, ಸಲ್ಮಾನ್ ಆಘಾ, ಉಸ್ಮಾನ್ ತಾರೀಕ್ ಹಾಗೂ ಶಹೀನ್ ಅಫ್ರಿದಿ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಇಶಾನ್ ಕಿಶನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ವೆಸ್ಟ್ ಇಂಡೀಸ್, ಯುಎಸ್‌ಎಗೆ ಜಯ

ಮುಂಬೈ/ಚೆನ್ನೈ, ಫೆ.16– ಟಿ20 ವಿಶ್ವಕಪ್‌ನ ಭಾನುವಾರ ನಡೆದ ಮತ್ತೆರಡು ಪಂದ್ಯಗಳಲ್ಲಿ ನೇಪಾಳ ವಿರುದ್ಧ ವೆಸ್ಟ್ ಇಂಡೀಸ್ ಹಾಗೂ ನಮೀಬಿಯಾ ವಿರುದ್ಧ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ(ಯುಎಸ್‌ಎ) ಜಯ ಗಳಿಸಿದೆ.

ವೆಸ್ಟ್ ಇಂಡೀಸ್‌ಗೆ ಜಯ: ಮುಂಬೈನ ವಾಂಖೇಡೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬ್ಯಾಟಿಂಗ್ ಹಾಗೂ ಬೌಲಿಂಗ್ ನಲ್ಲಿ ಉತ್ತಮ ಪ್ರದರ್ಶನ ನೀಡಿದ ವೆಸ್ಟ್ ಇಂಡೀಸ್ ನೇಪಾಳ ವಿರುದ್ಧ 9 ವಿಕೆಟ್‌ಗಳ ಭರ್ಜರಿ ಜಯ ದಾಖಲಿಸಿದೆ. ಆ ಮೂಲಕ ಸೂಪರ್ 8ಗೆ ಸಿ ಗುಂಪಿನ ಮೊದಲ ತಂಡವಾಗಿ ಲಗ್ಗೆ ಹಾಕಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನೇಪಾಳ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 133 ರನ್ ಗಳಿಸಿತು. ತಂಡದ ಪರ ದೀಪೇಂದ್ರ ಸಿಂಗ್ ಐರೀ ತಲಾ 3 ಸಿಕ್ಸ್, ಬೌಂಡರಿ ಒಳಗೊಂಡ 58, ಸೋಂಪಾಲ್ ಕಾಮಿ 26, ಲೋಕೇಶ್ ಬಾಂ 13, ಆಸಿಫ್ ಶೇಖ್, ಗುಲ್ಸನ್ ಝಾ ತಲಾ 11 ರನ್ ಗಳಿಸಿದರು. ವೆಸ್ಟ್ ಇಂಡೀಸ್ ಪರ ಜೇಸನ್ ಹೋಲ್ಡರ್ 4, ಅಕೇಲ್ ಹುಸೇನ್, ಮ್ಯಾಥ್ಯೂ ಫೋರ್ಡ್, ಶಾಮರ್ ಜೋಸೆಫ್ ಹಾಗೂ ರೋಸ್ಟನ್ ಚೇಸ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.



134 ರನ್‌ಗಳ ಸಾಧಾರಣ ಗುರಿ ಬೆನ್ನತ್ತಿದ ವೆಸ್ಟ್ ಇಂಡೀಸ್ 15.2 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ ಗುರಿ ತಲುಪಿತು. ತಂಡದ ಪರ ಬ್ರೆಂಡನ್ ಕಿಂಗ್ 22 ರನ್ ಗಳಿಸಿದರೆ, ಶಾಯ್ ಹೋಪ್ 44 ಎಸೆತಗಳಲ್ಲಿ 3 ಸಿಕ್ಸರ್, 5 ಬೌಂಡರಿ ಒಳಗೊಂಡ ಅಜೇಯ 61, ಶಿಮ್ರಾನ್ ಹೆಟ್ಮೆಯರ್ ಅಜೇಯ 46 ರನ್ ಗಳಿಸಿ ತಂಡಕ್ಕೆ ಜಯ ತಂದು ಕೊಟ್ಟರು. ನೇಪಾಳ ಪರ ನಂದನ್ ಯಾದವ್ 1 ವಿಕೆಟ್ ಪಡೆದರು. ಜೇಸನ್ ಹೋಲ್ಡರ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಯುಎಸ್‌ಗೆ ಗೆಲುವು: ಚೆನ್ನೈನ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಯುಎಸ್‌ಎ ನಮೀಬಿಯಾ ವಿರುದ್ಧ 31 ರನ್ ಗೆಲುವು ಸಾಧಿಸಿದೆ. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಯುಎಸ್‌ಎ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 199 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಪರ ಸಂಜಯ್ ಕೃಷ್ಣಮೂರ್ತಿ 6 ಸಿಕ್ಸರ್, 4 ಬೌಂಡರಿ ಒಳಗೊಂಡ 68, ಮೊನಾಂಕ್ ಪಟೇಲ್ 52, ಮಿಲಿಂದ್ ಕುಮಾರ್ 28, ಶಯಾನ್ ಜಹಂಗೀರ್ 22, ಸೈತೇಜ ಮುಕ್ಕಮಲ್ಲ 17 ರನ್ ಗಳಿಸಿದರು. ನಮೀಬಿಯಾ ಪರ ವಿಲ್ಲೆಮ್ ಮೈಬರ್ಗ್, ಗೆರ್ಹಾರ್ಡ್ ಎರಾಸ್ಮಸ್ ತಲಾ 2 ವಿಕೆಟ್ ಪಡೆದರು.

200 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ನಮೀಬಿಯಾ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 168 ರನ್ ಗಳಿಸಲಷ್ಟೇ ಶಕ್ತವಾಯಿತು. ತಂಡದ ಪರ ಲೌರೆನ್ ಸ್ಟೀನ್‌ಕ್ಯಾಂಪ್ 58, ಜೆಜೆ ಸ್ಮಿತ್ 31, ಜಾನ್ ನಿಕೋಲ್ ಲಾಫ್ಟಿ–ಈಟನ್ 28, ಜಾನ್ ಫ್ರೈಲಿಂಕ್ 19, ಝೇನ್ ಗ್ರೀನ್ 18 ರನ್ ಗಳಿಸಿದರು. ಯುಎಸ್‌ಎ ಪರ ಶ್ಯಾಡ್ಲಿ ವ್ಯಾನ್ ಶಾಲ್ಕ್‌ವಿಕ್ 2, ಶುಭಂ ರಂಜಾನೆ, ಅಲಿ ಖಾನ್, ಸೌರಭ್ ನೇತ್ರವಲ್ಕರ್ ತಲಾ ಒಂದೊಂದು ವಿಕೆಟ್ ಪಡೆದರು. ಸಂಜಯ್ ಕೃಷ್ಣಮೂರ್ತಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಪಾತುಮ್ ನಿಸ್ಸಂಕ ಶತಕ: ಸೂಪರ್ 8ಗೆ ಶ್ರೀಲಂಕಾ

ಪಲ್ಲೆಕೆಲೆ, ಫೆ.16– ಪಾತುಮ್ ನಿಸ್ಸಂಕ ಅವರ ಶತಕದ ನೆರವಿನಿಂದ ಆಸ್ಟ್ರೇಲಿಯಾ ವಿರುದ್ಧ ಶ್ರೀಲಂಕಾ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ 'ಬಿ' ಗುಂಪಿನ ಮೊದಲ ತಂಡವಾಗಿ ಲಂಕಾ ಸೂಪರ್ 8 ಪ್ರವೇಶಿಸಿದರೇ, ಸತತ ಸೋಲುಗಳಿಂದ ಕಂಗೆಟ್ಟಿರುವ ಆಸ್ಟ್ರೇಲಿಯಾ ಬಹುತೇಕ ಟೂರ್ನಿಯಿಂದಲೇ ಹೊರ ಬೀಳುವ ಆತಂಕ ಎದುರಾಗಿದೆ.

ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 181 ರನ್‌ಗಳಿಗೆ ಆಲೌಟಾಯಿತು. ನಂತರ ಗುರಿ ಬೆನ್ನಟ್ಟಿದ ಶ್ರೀಲಂಕಾ 18 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 184 ರನ್ ಗಳಿಸಿ ಜಯದ ನಗೆ ಬೀರಿತು.



ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಕುಸಾಲ್ ಪರೇರಾ ಕೇವಲ 1 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಪಾತುಂ ನಿಸ್ಸಾಂಕ ಜೊತೆಗೂಡಿದ ಕುಸಾಲ್ ಮೆಂಡಿಸ್ 2ನೇ ವಿಕೆಟ್‌ಗೆ 97 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ 51 ರನ್ ಗಳಿಸಿದ್ದ ಕುಸಾಲ್ ಮೆಂಡಿಸ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಬಿರುಸಿನ ಬ್ಯಾಟಿಂಗ್ ನಡೆಸಿದ ಪಾತುಂ ನಿಸ್ಸಾಂಕ 52 ಎಸೆತಗಳಲ್ಲಿ 10 ಬೌಂಡರಿ, 5 ಸಿಕ್ಸ್ ಒಳಗೊಂಡ ಅಜೇಯ 100 ರನ್ ಗಳಿಸಿ ತಂಡಕ್ಕೆ ಜಯ ತಂದುಕೊಟ್ಟರು. ಮತ್ತೊಂದೆಡೆ ಉತ್ತಮ ಸಾಥ್ ನೀಡಿದ ಪವನ್ ರತ್ನಾಯಕೆ ಔಟಾಗದೇ 28 ರನ್ ಗಳಿಸಿದರು. ಆಸೀಸ್ ಪರ ಮಾರ್ಕಸ್ ಸ್ಟೋಯಿನಿಸ್ 2 ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ಪರ ಮಿಷೆಲ್ ಮಾರ್ಶ್ 54, ಟ್ರಾವಿಸ್ ಹೆಡ್ 56, ಜೋಶ್ ಇಂಗ್ಲಿಸ್ 27, ಗ್ಲೆನ್ ಮ್ಯಾಕ್ಸ್‌ವೆಲ್ 22 ರನ್ ಗಳಿಸಿದರು. ಉಳಿದವರಿಂದ ನಿರೀಕ್ಷಿತ ಆಟ ಮೂಡಿಬಾರದ ಕಾರಣ ಎಲ್ಲರೂ ಪೆವಿಲಿಯನ್ ಪರೇಡ್ ನಡೆಸಿದರು. ಶ್ರೀಲಂಕಾ ಪರ ದುಶನ್ ಹೇಮಂತ 3, ದುಷ್ಮಂತ ಚಮೀರ 2, ಮಹೇಶ್ ತೀಕ್ಷಣ, ಡುನೀತ್ ವೆಲ್ಲಾಲಗೆ, ಕಮಿಂದು ಮೆಂಡಿಸ್ ತಲಾ ಒಂದೊಂದು ವಿಕೆಟ್ ಪಡೆದರು. ಪಾತುಮ್ ನಿಸ್ಸಂಕ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು. ಬಿ ಗ್ರೂಪಿನಿಂದ ಶ್ರೀಲಂಕಾ 3 ಪಂದ್ಯ ಗೆದ್ದು ಈಗಾಗಲೇ ಸೂಪರ್ 8 ಪ್ರವೇಶಿಸಿದೆ. ಮಂಗಳವಾರ ಜಿಂಬಾಬ್ವೆ ಮತ್ತು ಐರ್ಲೆಂಡ್ ನಡುವೆ ಪಂದ್ಯ ನಡೆಯಲಿದ್ದು, ಈ ಪಂದ್ಯದಲ್ಲಿ ಜಿಂಬಾಬ್ವೆ ಗೆದ್ದರೆ ಆಸ್ಟ್ರೇಲಿಯಾ ಟಿ20 ಸರಣಿಯಿಂದಲೇ ಹೊರ ಬೀಳಲಿದೆ.

ಅಫ್ಘಾನಿಸ್ತಾನ್, ಇಂಗ್ಲೆಂಡ್‌ಗೆ ಭರ್ಜರಿ ಜಯ

ದೆಹಲಿ/ಕೋಲ್ಕತ್ತಾ, ಫೆ.16– ಸೋಮವಾರ ನಡೆದ ಮತ್ತೆರಡು ಟಿ20 ವಿಶ್ವಕಪ್‌ನ ಪಂದ್ಯಗಳಲ್ಲಿ ಯುಎಇ ವಿರುದ್ಧ ಅಫ್ಘಾನಿಸ್ತಾನ್ ಹಾಗೂ ಇಟಲಿ ವಿರುದ್ಧ ಇಂಗ್ಲೆಂಡ್ ಜಯ ಗಳಿಸಿದೆ.

ಅಫ್ಘಾನಿಸ್ತಾನ್‌ಗೆ ಜಯ: ದೆಹಲಿಯ ಅರುಣ್ ಜೇಟ್ಲಿ ಮೈದಾನದಲ್ಲಿ ನಡೆದ ಪಂದ್ಯಾವಳಿಯ 28ನೇ ಪಂದ್ಯದಲ್ಲಿ ಯುಎಇ ವಿರುದ್ಧ ಅಫ್ಘಾನಿಸ್ತಾನ್ 5 ವಿಕೆಟ್‌ಗಳ ಜಯ ಸಾಧಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಯುಎಇ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 160 ರನ್ ಗಳಿಸಿತು. ತಂಡದ ಪರ ಶೋಯೆಬ್ ಖಾನ್ 68, ಅಲಿಶನ್ ಶರಾಫು 40, ಹೈದರ್ ಅಲಿ, ಸೈದ್ ಹೈದರ್ ತಲಾ 13, ಮುಹಮ್ಮದ್ ವಾಸೀಂ 10 ರನ್ ಗಳಿಸಿದರು. ಅಫ್ಘಾನಿಸ್ತಾನ್ ಪರ ಅಜ್ಮತುಲ್ಲಾ ಒಮರ್ಜೈ 4, ಮುಜೀಬ್ ಉರ್ ರೆಹಮಾನ್ 2, ರಶೀದ್ ಖಾನ್ 1 ವಿಕೆಟ್ ಪಡೆದರು.



161 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಅಫ್ಘಾನಿಸ್ತಾನ್ 19.5 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 162 ರನ್ ಗಳಿಸಿ ಜಯ ಗಳಿಸಿತು. ತಂಡದ ಪರ ಇಬ್ರಾಹಿಂ ಜದ್ರಾನ್ 53, ಅಜ್ಮತುಲ್ಲಾ ಒಮರ್ಜೈ 40, ದರ್ವಿಶ್ ರಸೂಲಿ 33, ಸೆಡಿಕುಲ್ಲಾ ಅಟಲ್ 16 ರನ್ ಗಳಿಸಿದರು. ಯುಎಇ ಪರ ಜುನೈದ್ ಸಿದ್ದಿಕ್, ಮುಹಮ್ಮದ್ ಅರ್ಫಾನ್ ತಲಾ 2, ಮುಹಮ್ಮದ್ ಜಾವದುಲ್ಲಾ 1 ವಿಕೆಟ್ ಪಡೆದರು. ಅಜ್ಮತುಲ್ಲಾ ಒಮರ್ಜೈ ಪಂದ್ಯ ಪುರುಷ ಪ್ರಶಸ್ತಿಗೆ ಭಾಜನರಾದರು.

ಸೂಪರ್ 8ಗೆ ಇಂಗ್ಲೆಂಡ್: ಕೋಲ್ಕತ್ತಾದ ಈಡನ್ ಗಾರ್ಡನ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಇಟಲಿ ವಿರುದ್ಧ 24 ರನ್ ಜಯ ಗಳಿಸಿದ ಇಂಗ್ಲೆಂಡ್ ಸೂಪರ್ 8ಗೆ ಎಂಟ್ರಿ ಪಡೆದಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 202 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಪರ ವಿಲ್ ಜಾಕ್ಸ್ 22 ಎಸೆತಗಳಲ್ಲಿ 4 ಸಿಕ್ಸರ್, 3 ಬೌಂಡರಿ ಒಳಗೊಂಡ 53 ರನ್ ಗಳಿಸಿದರು. ಉಳಿದಂತೆ ಫಿಲ್ ಸಾಲ್ಟ್ 28, ಜಾಕೋಬ್ ಬೆಥೆಲ್ 23, ಟಾಮ್ ಬ್ಯಾಂಟನ್ 30, ಸ್ಯಾಮ್ ಕರ್ರನ್ 25, ಜೇಮಿ ಓವರ್‌ಟನ್ 15 ರನ್ ಗಳಿಸಿದರು. ಕ್ರಿಶನ್ ಕಲುಗಮಗೆ, ಗ್ರಾಂಟ್ ಸ್ಟೀವರ್ಟ್ ತಲಾ 2, ಜೆಜೆ ಸ್ಮಟ್ಸ್, ಅಲಿ ಹಸನ್, ಬೆನ್ ಮಾನೆಂಟಿ ತಲಾ ಒಂದೊಂದು ವಿಕೆಟ್ ಪಡೆದರು.

ನಂತರ ಗುರಿ ಬೆನ್ನತ್ತಿದ ಇಟಲಿ 20 ಓವರ್‌ಗಳಲ್ಲಿ 178 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಬೆನ್ ಮಾನೆಂಟಿ 60, ಗ್ರಾಂಟ್ ಸ್ಟೀವರ್ಟ್ 45, ಜಸ್ಟೀನ್ ಮೋಸ್ಕಾ 43 ರನ್ ಗಳಿಸಿದರು. ಇಂಗ್ಲೆಂಡ್ ಪರ ಜೇಮಿ ಓವರ್‌ಟನ್, ಸ್ಯಾಮ್ ಕರ್ರನ್ ತಲಾ 3, ಜೋಫ್ರಾ ಆರ್ಚರ್ 2, ಆದಿಲ್ ರಶೀದ್ ಹಾಗೂ ವಿಲ್ ಜಾಕ್ಸ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ವಿಲ್ ಜಾಕ್ಸ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ದಕ್ಷಿಣ ಕಾಶಿಯಲ್ಲಿ ಶಿವರಾತ್ರಿ ಜಾಗರಣೆ, ಶಿವನಾಮ ಸ್ಮರಣೆ



ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ ಆವರಣದಲ್ಲಿ ಶಿವರಾತ್ರಿ ಅಂಗವಾಗಿ ಜಮಾಯಿಸಿದ್ದ ಸಾವಿರಾರು ಭಕ್ತರು.

ನಂಜನಗೂಡು, ಫೆ.16– ದಕ್ಷಿಣ ಕಾಶಿ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ವಿಶೇಷ ಧಾರ್ಮಿಕ ಪೂಜೆ ಹಾಗೂ ರಾತ್ರಿ ಜಾಗರಣೆಯಲ್ಲಿ ನಿರತರಾಗಿದ್ದ ಭಕ್ತರು ಭಕ್ತಿ ಸಾಗರದಲ್ಲಿ ಮಿಂದರು.

ಶಿವರಾತ್ರಿ ಹಿನ್ನೆಲೆಯಲ್ಲಿ ಭಾನುವಾರ ಬೆಳಗ್ಗೆಯೇ ಸಾವಿರಾರು ಭಕ್ತರು ದೇವಾಲಯಕ್ಕೆ ಆಗಮಿಸಿದ್ದರು. ಸಾಮಾನ್ಯ ದರ್ಶನಕ್ಕೆ ತೆರಳುವವರ ಸಂಖ್ಯೆ ಹೆಚ್ಚಾಗಿದ್ದರಿಂದ ಕೆಲವರು 100ರೂ.ಗಳ ವಿಶೇಷ ದರ್ಶನದ ಟಿಕೆಟ್ ಪಡೆದು ದೇವಾಲಯದ ಒಳ ಪ್ರವೇಶಿಸಿದರು.

ಮಹಾ ಶಿವರಾತ್ರಿ ಅಂಗವಾಗಿ ಮುಂಜಾನೆ 4 ರಿಂದಲೇ ದೇವಾಲಯದಲ್ಲಿ ದೇಗುಲದ ಆಗಮಿಕ ನಾಗಚಂದ್ರ ದೀಕ್ಷಿತ್ ನೇತೃತ್ವದಲ್ಲಿ ಉಷಾ ಕಾಲದ ಪೂಜೆ ನೆರವೇರಿಸಿ ಶ್ರೀಕಂಠೇಶ್ವರಸ್ವಾಮಿಗೆ ಗಂಧ, ಕುಂಕುಮ, ಅರಿಶಿನ, ಹಾಲು, ಮೊಸರು, ಎಳನೀರು ಸೇರಿದಂತೆ ಫಲ ಪಂಚಾಮೃತ ಅಭಿಷೇಕ ನೆರವೇರಿಸಲಾಯಿತು. ಬಳಿಕ ಮಡಿ ವಸ್ತ್ರಾಲಂಕಾರದ ನಂತರ ಮಹಾಮಂಗಳಾರತಿ ನೆರವೇರಿಸಿ ಭಕ್ತರಿಗೆ ದೇವರ ದರ್ಶನಕ್ಕೆ ಅನುವು ಮಾಡಿ ಕೊಡಲಾಯಿತು. ಅಲ್ಲದೇ ಸ್ವಾಮಿಗೆ ಕೊಳಗ ಧರಿಸಿ, ವಿಶೇಷ ಹೂಗಳಿಂದ ಅಲಂಕೃತಗೊಳಿಸಲಾಗಿತ್ತು. ದೇವಾಲಯದ ಹೊರ ಮತ್ತು ಒಳ ಆವರಣವನ್ನು ವಿಶೇಷ ಹೂಗಳಿಂದ ಸಿಂಗರಿಸಲಾಗಿತ್ತು.

ಮಹಾಶಿವರಾತ್ರಿ ಅಂಗವಾಗಿ ಶ್ರೀಕಂಠೇಶ್ವರಸ್ವಾಮಿಗೆ 11 ಬಾರಿ ರುದ್ರಪಾರಾಯಣ ಹಾಗೂ ಬೆಳಗಿನ ಅವಧಿಯಲ್ಲಿ 4 ಜಾವದ ಅಭಿಷೇಕ ನಡೆಸಲಾಯಿತು. ಜೊತೆಗೆ ದೇವಾಲಯದ ಒಳಾವರಣದಲ್ಲಿ ಶಿವನ ವಿವಿಧ ಅವತಾರಗಳನ್ನು ಪ್ರತಿಬಿಂಬಿಸುವ ಮೂರ್ತಿಗಳಿಗೆ ಪೂಜೆ ಸಲ್ಲಿಸಿ ಬಿಲ್ವಾರ್ಚನೆ ನಡೆಸಲಾಯಿತು.

ಸಾಂಸ್ಕೃತಿಕ ಕಾರ್ಯಕ್ರಮ: ಶಿವರಾತ್ರಿ ಹಬ್ಬದ ಜಾಗರಣೆಗಾಗಿ ದೇವಾಲಯದ ವತಿಯಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮಕ್ಕೆ ದರ್ಶನ್ ಧ್ರುವನಾರಾಯಣ ಚಾಲನೆ ನೀಡಿದರು. ಜಾನಪದ ಗೀತೆ, ಭಕ್ತಿ ಗೀತೆ, ಹಾಸ್ಯ, ನೃತ್ಯ, ಶಿವ ತಾಂಡವ ನೃತ್ಯ ಮತ್ತು ಭರತನಾಟ್ಯ ಕಾರ್ಯಕ್ರಮಗಳು ಭಕ್ತರ ಕಣ್ಮನ ಸೆಳೆದವು. ಅಲ್ಲದೇ ರಾಕ್ಷಸ ಮಂಟಪ ವೃತ್ತದಲ್ಲಿ ಕನ್ನಡ ಹಾಡುಗಳ ಗಾಯನ ಕಾರ್ಯಕ್ರಮ ಜನರ ಮನ ಸೆಳೆಯಿತು.

ನಗರದ ಕಾಶಿ ವಿಶ್ವನಾಥ ದೇವಾಲಯದಲ್ಲಿ ಶಿವರಾತ್ರಿ ಹಬ್ಬದ ಅಂಗವಾಗಿ ವಿಶೇಷ ಪೂಜೆ ಏರ್ಪಡಿಸಲಾಗಿತ್ತು. ಸಾವಿರಾರು ಭಕ್ತರು ದೇವರ ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು. ಅಲ್ಲದೆ ದೇವಿರಮ್ಮನ ಹಳ್ಳಿಯ ಬಡಾವಣೆಯ ಶರಣ ಸಂಗಮ ಮಠದಲ್ಲಿ 108 ಶಿವಲಿಂಗಗಳ ದರ್ಶನ ಪಡೆದು ಭಕ್ತಿ ಮೆರೆದರು. ತಾಲೂಕಿನ ಮಲ್ಲನಮೂಲೆ, ಚಿಕ್ಕಯ್ಯನ ಛತ್ರದ ಪ್ರಸನ್ನ ನಂಜುಂಡೇಶ್ವರ ದೇವಾಲಯದಲ್ಲೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ದರ್ಶನ ಪಡೆದು ಭಕ್ತಿ ಸಾಗರದಲ್ಲಿ ಮಿಂದು ಎದ್ದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ನಗರಸಭಾ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ಜಿಪಂ ಮಾಜಿ ಸದಸ್ಯೆ ಲತಾ, ದೇವಾಲಯದ ಧರ್ಮದರ್ಶಿಗಳಾದ ಗೋವಿಂದರಾಜು, ಗೋಪಾಲಕೃಷ್ಣ ಮುಖಂಡರಾದ ರಾಜೇಶ್, ಗಂಗಾಧರ್, ಎಸ್.ಪಿ.ಮಹೇಶ್, ಶಿವಪ್ಪದೇವರು, ಶ್ರೀಧರ್, ಸತೀಶ್‌ಗೌಡ, ಕಮಲೇಶ್, ಶ್ರೀಕಂಠೇಶ್ವರಸ್ವಾಮಿ ದೇವಾಲಯದ ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷ ಇಂಧನ್‌ಬಾಬು, ದೇವಾಲಯದ ಇಫ ಕೃಷ್ಣ ಮತ್ತಿತರರಿದ್ದರು.

ತ್ರಿಕಾಲ ದಾಸೋಹಕ್ಕೆ ಚಾಲನೆ



ದಾಸೋಹ ಭವನದಲ್ಲಿ ಬೆಳಗಿನ ಉಪಹಾರ ವಿತರಣೆಗೆ ಶಾಸಕ ದರ್ಶನ್ ಚಾಲನೆ ನೀಡಿದರು.

ನಂಜನಗೂಡು: ದೇವಾಲಯದ ದಾಸೋಹ ಭವನದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ ಅವರು ಭಕ್ತರಿಗೆ ಬೆಳಗಿನ ತಿಂಡಿ ವಿತರಿಸುವ ಕಾರ್ಯಕ್ಕೆ ಚಾಲನೆ ನೀಡಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಾಸೋಹ ಭವನದಲ್ಲಿ ಮಧ್ಯಾಹ್ನದ ಊಟವನ್ನು ಮಾತ್ರ ನೀಡಲಾಗುತ್ತಿತ್ತು. ಇದರಿಂದ ದೇವಾಲಯಕ್ಕೆ ಆಗಮಿಸುವ ಭಕ್ತರು ಬೆಳಗ್ಗಿನ ತಿಂಡಿಗೆ ಪರದಾಡುತ್ತಿದ್ದರು. ಹೀಗಾಗಿ ದೇವಾಲಯಕ್ಕೆ ಆಗಮಿಸುವ ಭಕ್ತರಿಗೆ ಬೆಳಗಿನ ತಿಂಡಿ ಹಾಗೂ ಮಧ್ಯಾಹ್ನದ ಊಟ ಜೊತೆಗೆ ವಿಶೇಷ ದಿನಗಳಂದು ರಾತ್ರಿ ಊಟವನ್ನು ಪ್ರಸಾದ ರೂಪದಲ್ಲಿ ನೀಡಲು ತೀರ್ಮಾನಿಸಲಾಗಿದೆ ಎಂದರು.

ಭಾರತ-ಅಮೆರಿಕಾ ಮುಕ್ತ ವ್ಯಾಪಾರ ಒಪ್ಪಂದ

ರೈತರಿಂದ ಒಪ್ಪಂದದ ಪತ್ರ ಸುಟ್ಟು ಆಕ್ರೋಶ



ರೈತರು ಭಾರತ–ಅಮೆರಿಕಾ ಮುಕ್ತ ವ್ಯಾಪಾರ ಒಪ್ಪಂದದ ಪ್ರತಿ ಸುಟ್ಟು ಹಾಕಿದರು.

ತಿ.ನರಸೀಪುರ, ಫೆ.16– ಭಾರತ–ಅಮೆರಿಕಾ ಮುಕ್ತ ವ್ಯಾಪಾರ ಒಪ್ಪಂದ ದೇಶದ ರೈತರ ಮರಣ ಶಾಸನವಾಗಿದೆ ಎಂದು ಆರೋಪಿಸಿ ಸಂಯುಕ್ತ ಕಿಸಾನ್ ಮೋರ್ಚಾ ರಾಜಕೀಯೇತರ ಸಂಘಟನೆ ಹಾಗೂ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ನೇತೃತ್ವದಲ್ಲಿ ತಾಲೂಕಿನ ಕಿರಗಸೂರು ಗ್ರಾಪಂ ಎದುರು ಗ್ರಾಮಸ್ಥರು, ರೈತ ಮುಖಂಡರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಒಪ್ಪಂದದ ಪತ್ರದ ಪ್ರತಿಯನ್ನು ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ಮೈಸೂರು–ಚಾಮರಾಜನಗರ ಜಿಲ್ಲಾ ಕಾರ್ಯಾಧ್ಯಕ್ಷ ಕಿರಗಸೂರು ಶಂಕರ್ ಮಾತನಾಡಿ, ಭಾರತ–ಅಮೆರಿಕಾ ಮುಕ್ತ ವ್ಯಾಪಾರ ಒಪ್ಪಂದ ಮಾಡಿರುವುದು ದೇಶದ ರೈತರಿಗೆ ಮರಣ ಶಾಸನ ಬರೆದಂತಾಗಿದೆ. ಅಲ್ಲದೇ ಕೃಷಿ ವಲಯಕ್ಕೆ ದೊಡ್ಡ ಆಘಾತವಾಗಲಿದೆ. ಈ ಸಹಿಯನ್ನು ಹಿಂಪಡೆಯದಿದ್ದರೆ ಮುಂಬರುವ ದಿನಗಳಲ್ಲಿ ಸಂಯುಕ್ತ ಕಿಸಾನ್ ಮೋರ್ಚ್ ಹಾಗೂ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ದೇಶಾದ್ಯಂತ ಉಗ್ರ ಹೋರಾಟ ಮಾಡಲಿದೆ ಎಂದು ಎಚ್ಚರಿಕೆ ನೀಡಿದರು.

ಈಗಾಗಲೇ ಕೃಷಿ ಉತ್ಪನ್ನಗಳ ಬೆಲೆ ಖಾತರಿ ಕಾನೂನು ಜಾರಿಯಾಗಬೇಕು. ಡಾ.ಎನ್.ಎಸ್.ಸ್ವಾಮಿನಾಥನ್ ವರದಿ ಜಾರಿಯಾಗಬೇಕು. ರೈತರ ಸಂಪೂರ್ಣ ಸಾಲ ಮನ್ನಾ ಆಗಬೇಕು ಎಂದು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ರೈತ ಜಾಗೃತಿ ಯಾತ್ರೆ ಆರಂಭಗೊಂಡಿದ್ದು, ತಮಿಳುನಾಡು, ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣಕ್ಕೆ ನಮ್ಮ ಯಾತ್ರೆ ತಲುಪಿದೆ. ಮಾ.19ರಂದು ದೆಹಲಿಯ ರಾಮ್‌ಲೀಲಾ ಮೈದಾನದಲ್ಲಿ ರೈತರ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಜೊತೆಗೆ ಅಮೆರಿಕಾ ಭಾರತ ಒಪ್ಪಂದದ ವಿಚಾರ ಸೇರಿ ಬೃಹತ್ ರೈತರ ಸಮಾವೇಶ ಮಾಡಿ ಸರ್ಕಾರಕ್ಕೆ ಎಚ್ಚರಿಕೆ ನೀಡಲಾಗುವುದು ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಜಂಟಿ ಕಾರ್ಯದರ್ಶಿ ಬಿ.ಪಿ.ಪರಶಿವ ಮೂರ್ತಿ, ಕರೋಹಟ್ಟಿ ಉಮೇಶ್, ರಾಜ್ ಕುಮಾರ್, ಕೆಇಬಿ ಯೋಗೇಶ್, ಕರ್ಪೂರ ರಘು, ಸುರೇಶ್, ರಾಜೀವ್, ಮಹದೇವ, ಮಹೇಶ್, ಅಂಕಪ್ಪ, ಬಸವಲಿಂಗಪ್ಪ ನಾಗ, ಮಾದೇಶ್, ಸ್ವಾಮಿ, ಚಂದ್ರು, ಶಂಕ್ರಿ ಮತ್ತಿತರರಿದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪೂರ್ವ ತಯಾರಿ ಕಾರ್ಯಾಗಾರ

ಮಕ್ಕಳ ಮೊಬೈಲ್ ಗೀಳು ನಿಯಂತ್ರಣಕ್ಕೆ ಶೀಘ್ರ ಶಿಬಿರ



ಕಾರ್ಯಾಗಾರವನ್ನು ಶಾಸಕ ದರ್ಶನ್ ಧ್ರುವನಾರಾಯಣ್ ಉದ್ಘಾಟಿಸಿದರು.

ನಂಜನಗೂಡು, ಫೆ.16– ಮಕ್ಕಳಲ್ಲಿ ಹೆಚ್ಚುತ್ತಿರುವ ಮೊಬೈಲ್ ಗೀಳಿನಿಂದಾಗುತ್ತಿರುವ ಅನಾಹುತ ನಿಯಂತ್ರಿಸುವ ಸಲುವಾಗಿ ಶಿಕ್ಷಣ ಇಲಾಖೆ ಸಹಯೋಗದೊಂದಿಗೆ ಆರೋಗ್ಯ ಇಲಾಖೆಯಿಂದ ಶೀಘ್ರ ತಜ್ಞ ವೈದ್ಯರ ಮಾರ್ಗದರ್ಶನದಲ್ಲಿ ಮಕ್ಕಳ ಮೊಬೈಲ್ ಗೀಳು ನಿಯಂತ್ರಣಕ್ಕೆ ಶಿಬಿರ ಆಯೋಜಿಸಲಾಗುವುದು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ಕಾರ್ಮೆಲ್ ಆಂಗ್ಲ ಮಾಧ್ಯಮ ಶಾಲೆ ಆವರಣದಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯಿಂದ ಸೋಮವಾರ ಎಸ್‌ಎಸ್‌ಎಲ್‌ಸಿ ಮಕ್ಕಳಿಗಾಗಿ ಆಯೋಜಿಸಿದ್ದ ಪರೀಕ್ಷಾ ಪೂರ್ವ ತಯಾರಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚೆಗೆ ವಿದ್ಯಾರ್ಥಿಗಳು ಟಿವಿ, ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣದ ಪ್ರಭಾವದಿಂದ ಶೈಕ್ಷಣಿಕ ವ್ಯಾಸಂಗಕ್ಕೆ ಧಕ್ಕೆ ತಂದುಕೊಳ್ಳುತ್ತಿರುವುದಾಗಿ ಪೋಷಕರು ಆತಂಕ ವ್ಯಕ್ತಪಡಿಸಿದ್ದಾರೆ. ಹೀಗಾಗಿ ಜೀವನದ ಪ್ರಮುಖ ಘಟ್ಟಗಳಲ್ಲೊಂದಾಗಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಬರೆಯಲು ಸಜ್ಜಾಗಿರುವ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನದ ಅವಶ್ಯಕತೆ ಇದೆ. ಹೀಗಾಗಿ ದಸಂಸ ಮಕ್ಕಳಿಗೆ ಪರೀಕ್ಷೆಗೆ ಸಜ್ಜಾಗಲು ನೆರವಾಗುತ್ತಿರುವುದು ಉತ್ತಮ ಕಾರ್ಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲೂಕಿಗೆ ಕಳೆದ ವರ್ಷ ಶೇ.73 ಫಲಿತಾಂಶ ಲಭ್ಯವಾಗಿದ್ದು, ಈ ವರ್ಷ ಕನಿಷ್ಠ ಶೇ.90 ರಷ್ಟು ಫಲಿತಾಂಶ ಲಭ್ಯವಾಗುವಂತೆ ಶಿಕ್ಷಣ ಇಲಾಖೆ ಅಧಿಕಾರಿಗಳು ಈಗಿನಿಂದಲೇ ಶ್ರಮವಹಿಸಬೇಕು ಎಂದು ಸಲಹೆ ನೀಡಿದರು.

ದಸಂಸ ತಾಲೂಕು ಸಂಚಾಲಕ ಸುರೇಶ್ ಶಂಕರಪುರ ಮಾತನಾಡಿ, ತಾಲೂಕಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ನುರಿತ ಶಿಕ್ಷಕರ ಮಾರ್ಗದರ್ಶನದಲ್ಲಿ ತಾಲೂಕಿನ 5 ಹೋಬಳಿ ವ್ಯಾಪ್ತಿಯಲ್ಲಿ ಪರೀಕ್ಷಾ ಪೂರ್ವ ತರಬೇತಿ ಕಾರ್ಯಾಗಾರವನ್ನು ಕಳೆದ ನಾಲ್ಕು ವರ್ಷಗಳಿಂದ ನಡೆಸಲಾಗುತ್ತಿದ್ದು, ಮಕ್ಕಳು ಕಾರ್ಯಾಗಾರದ ನೆರವನ್ನು ಪಡೆದುಕೊಂಡು ಉತ್ತಮ ಫಲಿತಾಂಶ ಪಡೆದುಕೊಳ್ಳಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ಬಿಇಓ ಮಹೇಶ್, ದಸಂಸ ಸಂಘಟನಾ ಸಂಚಾಲಕ ಯಶ್ವಂತ್ ಕುಮಾರ್, ಕಾರ್ಮೆಲ್ ಶಾಲೆಯ ಮುಖ್ಯಶಿಕ್ಷಕಿ ಡೋರಿನ್ ಜಾಕ್ಸ್, ಶಿಕ್ಷಣ ಸಂಯೋಜಕ ಫಣಿರಾಜ್, ಚಿಕ್ಕಣ್ಣ ಹಗಿನವಾಳು ಇತರರಿದ್ದರು.

> "ವಿದ್ಯಾರ್ಥಿಗಳು ತಂತ್ರಜ್ಞಾನದ ಬಲದಿಂದ ಲಭ್ಯವಾಗುವ ಜ್ಞಾನವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಪರೀಕ್ಷೆಯನ್ನು ನಿರ್ಭೀತಿಯಿಂದ ಎದುರಿಸುವ ಜೊತೆಗೆ ಕೊನೆ ಕ್ಷಣದಲ್ಲಿ ಕಠಿಣ ಪರಿಶ್ರಮದ ಮೂಲಕ ಸಮರ್ಥವಾಗಿ ಸಜ್ಜುಗೊಳ್ಳಬೇಕು. ಆ ಮೂಲಕ ಉತ್ತಮ ಫಲಿತಾಂಶ ಪಡೆದುಕೊಳ್ಳಬಹುದಾಗಿದ್ದು, ಅಮೂಲ್ಯ ಸಮಯ ವ್ಯರ್ಥ ಮಾಡದೆ ವಿದ್ಯಾರ್ಥಿಗಳು ನಿಯಮಿತವಾಗಿ ವ್ಯಾಸಂಗದಲ್ಲಿ ತೊಡಗಿಸಿಕೊಳ್ಳಬೇಕು.
> – ಸ್ಮಿತಾ, ತಹಸೀಲ್ದಾರ್.

ಚುಂಚನಕಟ್ಟೆ ಡೇರಿ ಅಧ್ಯಕ್ಷೆ–ಉಪಾಧ್ಯಕ್ಷೆ ಆಯ್ಕೆ



ಚುಂಚನಕಟ್ಟೆ ನೂತನ ಅಧ್ಯಕ್ಷೆ, ಉಪಾಧ್ಯಕ್ಷೆಯನ್ನು ಸನ್ಮಾನಿಸಲಾಯಿತು.

ಚುಂಚನಕಟ್ಟೆ, ಫೆ.16– ಚುಂಚನಕಟ್ಟೆ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಅಧ್ಯಕ್ಷೆಯಾಗಿ ಅನಿತಾ ಆನಂದ್ ಹಾಗೂ ಉಪಾಧ್ಯಕ್ಷೆಯಾಗಿ ಬಸಮ್ಮಣಿ ಸೋಮಶೇಖರ ಆಯ್ಕೆಯಾಗಿದ್ದಾರೆ.

ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಡೇರಿ ಆರಂಭವಾದ 20 ವರ್ಷಗಳ ನಂತರ ಇದೇ ಮೊದಲ ಬಾರಿಗೆ ಚುನಾವಣೆ ನಡೆದು ಅವಿರೋಧವಾಗಿ 11 ಮಂದಿ ನಿರ್ದೇಶಕರು ಆಯ್ಕೆಯಾಗಿದ್ದರು. ಸೋಮವಾರ ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಅನಿತಾ ಆನಂದ್ ಮತ್ತು ಗಾಯಿತ್ರಮ್ಮ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಮತದಾನದಲ್ಲಿ ಅನಿತಾ 8 ಮತಗಳನ್ನು ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರೇ, ಗಾಯಿತ್ರಮ್ಮ 5 ಮತಗಳನ್ನು ಪಡೆದು ಪರಾಭವಗೊಂಡರು. ಉಪಾಧ್ಯಕ್ಷ ಸ್ಥಾನಕ್ಕೆ ಬಸಮ್ಮಣಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆ ಗಿರೀಶ್ ಕಾರ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷೆ–ಉಪಾಧ್ಯಕ್ಷೆಯನ್ನು ಗ್ರಾಪಂ ಮಾಜಿ ಸದಸ್ಯ ಮಧು, ಕುಮಾರ್, ಬೇವಿನಹಳ್ಳಿ ಸತೀಶ್, ಶ್ರೀನಿವಾಸ್, ವಿರೂಪಾಕ್ಷ, ಮಾದೇವ, ಆನಂದ, ಸೌಮ್ಯ ಸತೀಶ್, ಶ್ರೀರಾಂಪುರ ಮಹೇಶ್, ಸ್ಟುಡಿಯೋ ಲೋಕೇಶ್, ಶಂಕ್ರೇಗೌಡ, ಬಾಬು, ಮಂಜ, ರಂಗಪ್ಪ, ರಮೇಶ್, ಚಂದ್ರಣ್ಣ ಸೇರಿದಂತೆ ಮತ್ತಿತರರು ಸನ್ಮಾನಿಸಿದರು. ಚುನಾವಣಾ ಪ್ರಕ್ರಿಯೆಯಲ್ಲಿ ನಿರ್ದೇಶಕರಾದ ರಾಜಮ್ಮ, ಮೀನಾಕ್ಷಿ, ಪಾರ್ವತಿ, ಶೋಭಾ, ಸುಂದರಮ್ಮ, ಮಾಲತಿ, ಲಕ್ಷ್ಮಮ್ಮ ನಾಮ ನಿರ್ದೇಶಕರಾದ ಗೌರಮ್ಮ, ಮಾರ್ಗ ವಿಸ್ತರಣಾಧಿಕಾರಿ ನೇಮಣ್ಣ ಮಕ್ಕಾನಿ ಹಾಜರಿದ್ದರು.

ನೂತನ ರಥ ನಿರ್ಮಾಣಕ್ಕೆ 5 ಲಕ್ಷ ನೆರವು

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಭರವಸೆ



ಓಂಕಾರೇಶ್ವರ ಜಾತ್ರಾ ಮಹೋತ್ಸವದಲ್ಲಿ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಭಾಗವಹಿಸಿದ್ದರು.


ಹುಣಸೂರು, ಫೆ.16– ತಾಲೂಕಿನ ರಾಮೇನಹಳ್ಳಿ ಓಂಕಾರೇಶ್ವರ ದೇವಾಲಯದ ನೂತನ ರಥ ನಿರ್ಮಾಣಕ್ಕೆ ದೇಣಿಗೆ ನೀಡುವುದಾಗಿ ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಭರವಸೆ ನೀಡಿದರು.

ತಾಲೂಕಿನ ರಾಮೇನಹಳ್ಳಿ ಗ್ರಾಮದ ಓಂಕಾರೇಶ್ವರ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಬೆಟ್ಟದ ಮೇಲಿರುವ ಶ್ರೀ ಓಂಕಾರೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ನಂತರ ಜಾತ್ರಾ ಮಹೋತ್ಸವ ಸಮಿತಿ ಹಾಗೂ ಗ್ರಾಮಸ್ಥರಿಂದ ಗೌರವ ಸ್ವೀಕರಿಸಿ ಮಾತನಾಡಿದ ಅವರು, ದೇವಾಲಯ ಸೇವಾ ಸಮಿತಿಯವರು ಕಳೆದ 3 ವರ್ಷಗಳಿಂದ ನೂತನ ರಥ ನಿರ್ಮಿಸಲು ಮುಂದಾಗಿದ್ದರೂ, ಇನ್ನೂ ರಥ ನಿರ್ಮಾಣ ಕಾರ್ಯ ಕೈಗೊಂಡಿಲ್ಲ. ದೇವರ ಕಾರ್ಯ ವಿಳಂಬ ಮಾಡಿದರೆ ಗ್ರಾಮಕ್ಕೆ ಶ್ರೇಯಸ್ಸಾಗುವುದಿಲ್ಲ. ಆದ್ದರಿಂದ ನಾಳೆಯಿಂದಲೇ ರಥ ನಿರ್ಮಾಣಕ್ಕೆ ಗ್ರಾಮಸ್ಥರು ಮುಂದೆ ಬಂದರೆ ರಥ ನಿರ್ಮಾಣಕ್ಕೆ ಬೇಕಾಗುವ ಮರದ ಸಾಮಗ್ರಿಗಳ ಸಂಗ್ರಹಕ್ಕೆ ದೇಣಿಗೆ ಸಂಗ್ರಹಿಸಲು ನಾನು ಕೂಡ ಬರುವುದಾಗಿ ತಿಳಿಸಿ, ರಥ ನಿರ್ಮಾಣಕ್ಕೆ ತಮ್ಮ ತಾಯಿ ರತ್ನ ಪ್ರೇಮ್ ಕುಮಾರ್ ಅವರ ಹೆಸರಿನಲ್ಲಿ 5 ಲಕ್ಷದ ಒಂದು ರೂ. ದೇಣಿಗೆ ನೀಡುವುದಾಗಿ ತಿಳಿಸಿದ ಅವರು, ಮುಂದಿನ ವರ್ಷ ಜಾತ್ರಾ ಮಹೋತ್ಸವ ನೂತನ ರಥದಲ್ಲಿ ನಡೆಯಬೇಕೆಂದು ಸೇವಾ ಸಮಿತಿಗೆ ಮನವಿ ಮಾಡಿದರು.

ಇದೇ ವೇಳೆ ಅನ್ನ ದಾಸೋಹಕ್ಕೆ 25 ಸಾವಿರ ರೂ. ನೆರವು ನೀಡಿದರು. ಈ ವೇಳೆ ದೇವಾಲಯ ಸೇವಾ ಸಮಿತಿ ಹಾಗೂ ರಾಮೇನಹಳ್ಳಿ ನಿಲುವಾಗಿಲು ಗ್ರಾಮದ ಸ್ನೇಹಜೀವಿ ಅಭಿಮಾನಿಗಳು ಮಂಜುನಾಥ್ ಅವರನ್ನು ಸನ್ಮಾನಿಸಿದರು.

ದೇವಾಲಯ ಸೇವಾ ಸಮಿತಿಯ ಅಧ್ಯಕ್ಷ ಶಿವಾನಂದ, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ರಾಘು, ಕಾಂಗ್ರೆಸ್ ಮಾಜಿ ಕಾರ್ಯಾಧ್ಯಕ್ಷ ವಕೀಲ ಪುಟ್ಟರಾಜ್, ದೇವಾಲಯದ ಸಮಿತಿಯ ರಾಜೇಶ, ಪ್ರಭಾಕರ, ಮುತ್ತ, ಅಶೋಕ, ಕುಮಾರ ಶ್ರೀನಿವಾಸ, ರಾಮಚಂದ್ರನಾಯಕ, ಉಮೇಶ್, ಜ್ಞಾನೇಶ ಸೇರಿದಂತೆ ಇತರರಿದ್ದರು.

ಜೆಡಿಎಸ್ ನೂತನ ಅಧ್ಯಕ್ಷರಿಗೆ ಸನ್ಮಾನ



ಮೈಸೂರು ಜಿಲ್ಲಾ ಗ್ರಾಮಾಂತರ ಜೆಡಿಎಸ್ ಅಧ್ಯಕ್ಷರಾಗಿ ನೇಮಕಗೊಂಡ ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಅವರನ್ನು ಪುರಸಭೆ ಮಾಜಿ ಅಧ್ಯಕ್ಷ ವೀರೇಶ್ ಸನ್ಮಾನಿಸಿದರು.

ಸರಗೂರಲ್ಲಿ ವಿಜೃಂಭಣೆಯ ಶ್ರೀ ಸೋಮೇಶ್ವರಸ್ವಾಮಿ ಕೊಂಡೋತ್ಸವ



ಸರಗೂರಲ್ಲಿ ಶ್ರೀಸೋಮೇಶ್ವರಸ್ವಾಮಿ ದೇವಾಲಯದಲ್ಲಿ ಕೊಂಡೋತ್ಸವ ವಿಜೃಂಭಣೆಯಿಂದ ನಡೆಯಿತು.

ಸರಗೂರು, ಫೆ.16– ಪಟ್ಟಣದ ಶ್ರೀಸೋಮೇಶ್ವರಸ್ವಾಮಿ ದೇವಾಲಯದಲ್ಲಿ ಕೊಂಡೋತ್ಸವ ವಿಜೃಂಭಣೆಯಿಂದ ನಡೆಯಿತು.

ಕೊಂಡೋತ್ಸವ ಅಂಗವಾಗಿ ದೇವಾಲಯವನ್ನು ತಳಿರು ತೋರಣ, ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿತ್ತು. ಶಿವನಿಗೆ ಗಣಪತಿ ಹೋಮ, ಪುಣ್ಯಾಹ, ಕಳಶ ಪ್ರತಿಷ್ಠಾಪನೆ, ಬಿಲ್ವಾರ್ಚನೆ, ಶಿವ ಸಹಸ್ರನಾಮ, ಕುಂಕುಮಾರ್ಚನೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ನೆರವೇರಿದವು.

ಶಿವರಾತ್ರಿ ಜಾಗರಣೆ ನಂತರ ಸೋಮವಾರ ದೇವರನ್ನು ವಿವಿಧ ಹೂಗಳಿಂದ ಅಲಂಕರಿಸಿ ಕಪಿಲಾ ನದಿಗೆ ತೆರಳಿ ಗಂಗೆಪೂಜೆ ನಡೆಸಿ ಉಮಾ ಮಹೇಶ್ವರ ಉತ್ಸವಮೂರ್ತಿಯನ್ನು ಪೂರ್ಣಕುಂಭ ಕಳಶದೊಂದಿಗೆ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮಂಗಳ ವಾದ್ಯ, ಸತ್ತಿಗೆ, ವೀರಗಾಸೆ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಸಲಾಯಿತು. ದೇವಾಲಯ ತಲುಪಿದ ಬಳಿಕ ಉತ್ಸವ ಮೂರ್ತಿಯನ್ನು ದೇವಾಲದ ಸುತ್ತ ಪ್ರದಕ್ಷಿಣೆ ನಡೆಸಿ ನಂತರ ಕೊಂಡಕ್ಕೆ ಪೂಜೆ ಸಲ್ಲಿಸಿ ಯಶಸ್ ಶಾಸ್ತ್ರಿಗಳು ಕೆಂಡದ ಮೇಲೆ ನಡೆದ ನಂತರ ಭಕ್ತರು ಕೊಂಡ ಹಾಯ್ದು ಹರಕೆ ತೀರಿಸಿದರು. ಬಳಿಕ ದೇವರಿಗೆ ಮಹಾ ಮಂಗಳಾರತಿ ನೆರವೇರಿಸಿ ಪ್ರಸಾದ ವಿನಿಯೋಗ ಮಾಡಲಾಯಿತು. ಸಂಜೆ ಮತ್ತೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದ ನಂತರ ಉತ್ಸವ ಮೂರ್ತಿಗೆ ಬಸವೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಪ್ರಸಾದ ವಿನಿಯೋಗ ಮಾಡಲಾಯಿತು. ಇದೇ ವೇಳೆ ಎಲ್ಲಾ ಸಮುದಾಯದ ಭಕ್ತರು ಕೊಂಡೋತ್ಸವದಲ್ಲಿ ಭಾಗಿಯಾಗಿದ್ದರು.

ಮಕ್ಕಳಿಗೆ ಮಾನವೀಯ ಮೌಲ್ಯ ಕಲಿಸುವ ಶಿಕ್ಷಣ ನೀಡಿ

ಹೈಕೋರ್ಟ್ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಸಲಹೆ



ತಲಕಾಡಲ್ಲಿ ಎನ್.ಆರ್.ಪಟೇಲ್ ಕಲಾ ವೈಭವದ ಪ್ರತಿಭೆ, ಸಂಸ್ಕೃತಿ ಮತ್ತು ಶ್ರೇಷ್ಠತೆ ಸಮಾರಂಭ ನಡೆಯಿತು.

ತಿ.ನರಸೀಪುರ, ಫೆ.16– ಭವಿಷ್ಯದ ಪ್ರಜೆಗಳಾದ ಮಕ್ಕಳಿಗೆ ಸಾಮಾಜಿಕ ಜವಾಬ್ದಾರಿ ಮತ್ತು ಮಾನವೀಯ ಮೌಲ್ಯಗಳನ್ನು ಕಲಿಸುವ ಶಿಕ್ಷಣ ನೀಡಬೇಕು ಎಂದು ಹೈಕೋರ್ಟ್ ನ್ಯಾಯಮೂರ್ತಿ ಹಾಗೂ ಕರ್ನಾಟಕ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಟಿ.ಜಿ. ಶಿವಶಂಕರೇಗೌಡ ಸಲಹೆ ನೀಡಿದರು.

ತಾಲೂಕಿನ ತಲಕಾಡು ಹೊರ ವಲಯದಲ್ಲಿರುವ ಎನ್.ಆರ್.ಪಟೇಲ್ ಶಿಕ್ಷಣ ಸಂಸ್ಥೆ ಆವರಣದಲ್ಲಿ ಆಯೋಜಿಸಿದ್ದ ಎನ್.ಆರ್. ಪಟೇಲ್ ಕಲಾ ವೈಭವದ ಪ್ರತಿಭೆ, ಸಂಸ್ಕೃತಿ ಮತ್ತು ಶ್ರೇಷ್ಠತೆಯ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಬದುಕು ರೂಪಿಸಿಕೊಳ್ಳಲು ಕಲಿಯುವ ಶಿಕ್ಷಣ ಭವಿಷ್ಯದಲ್ಲಿ ಉತ್ತಮ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದರು.

ಗಂಗರಸರ ರಾಜಧಾನಿ ಚರಿತ್ರೆಯ ನಾಡು ತಲಕಾಡು ನಾಡಿನ ಹಿರಿಮೆ ಹೆಚ್ಚಿಸಲು ಧಾರ್ಮಿಕ ಮತ್ತು ಸಾಂಸ್ಕೃತಿಕ ಕೊಡುಗೆ ನೀಡಿದೆ. ಶಿಕ್ಷಣ ಸೇವೆ ನೀಡಿದ ಮಹನೀಯರು ನಮ್ಮವರೇ ಆಗಿದ್ದಾರೆ. ಇಂತಹ ಐತಿಹಾಸಿಕ ಊರಿನಲ್ಲಿ ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಎನ್. ಆರ್.ಪಟೇಲ್ ಶಿಕ್ಷಣ ಸಂಸ್ಥೆ ಶ್ರಮಿಸುತ್ತಿದೆ. ನಗರ ಮಕ್ಕಳಿಗೆ ಸಿಗುವ ಶಿಕ್ಷಣ ಸ್ಥಳೀಯವಾಗಿಯೂ ಸಿಗಬೇಕು. ಈ ಹಿನ್ನೆಲೆಯಲ್ಲಿ ಹಳ್ಳಿಗಾಡಿನ ಬಡವರು ಮತ್ತು ಮಧ್ಯಮ ವರ್ಗದ ಜನರ ಮಕ್ಕಳು ಶಿಕ್ಷಣದ ಮೂಲಕ ಭವಿಷ್ಯ ರೂಪಿಸಿಕೊಳ್ಳಬೇಕೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಪಟೇಲ್ ಫೌಂಡೇಷನ್ ಗೌರವಾಧ್ಯಕ್ಷ ಟಿ.ಆರ್.ಕೃಷ್ಣೇಗೌಡ ಮಾತನಾಡಿ, ಹಳ್ಳಿಗಾಡಿನ ಮಕ್ಕಳಿಗೂ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಶಿಸ್ತಿನ ಜೊತೆಗೆ ಸಿಗುವಂತಹ ಉತ್ತಮ ಶಿಕ್ಷಣ ಕಲ್ಪಿಸಬೇಕೆಂಬ ಉದ್ದೇಶದಿಂದಲೇ ಪಟೇಲ್ ಫೌಂಡೇಷನ್ ಸೇವಾ ಸಂಸ್ಥೆ ಆರಂಭಿಸಿದ ಅಶೋಕ್ ಪಟೇಲ್ ಅವರು ಶಿಕ್ಷಕರ ತಂಡ ಕಟ್ಟಿಕೊಂಡು ಶಿಕ್ಷಣ ಸಂಸ್ಥೆ ಆರಂಭಿಸಿದ್ದಾರೆ. ಹಲವು ವರ್ಷಗಳಿಂದ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದಾರೆ ಎಂದರು.

ಸಮಾರಂಭದಲ್ಲಿ ಮಾತೃಶ್ರೀ ರತ್ನಮ್ಮ ಅವರನ್ನು ಸನ್ಮಾನಿಸಲಾಯಿತು. ವಿವಿಧ ಕ್ರೀಡಾಕೂಟಗಳಲ್ಲಿ ವಿಜೇತರಾದ ಪೋಷಕರಿಗೆ ಬಹುಮಾನ ವಿತರಿಸಲಾಯಿತು. ವಿವಿಧ ಚಲನಚಿತ್ರ ಗೀತೆಗಳಿಗೆ ವಿದ್ಯಾರ್ಥಿಗಳು ನರ್ತಿಸಿದರು. ಪಟೇಲ್ ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಟಿ.ಎನ್.ಅಶೋಕ್ ಪಟೇಲ್, ಮೈಸೂರು ತಾಲೂಕು ಉಪ ತಹಸೀಲ್ದಾರ್ ಟಿ.ಎನ್.ಲೋಕೇಶ್, ನಿವೃತ್ತ ಮುಖ್ಯ ಶಿಕ್ಷಕ ಎಸ್.ರಾಮ್ ಪ್ರಸಾದ್, ಶಾಲೆ ಮುಖ್ಯ ಶಿಕ್ಷಕರಾದ ಯೋಗೇಂದ್ರ, ಎಸ್.ಮಹೇಶ್ವರಿ ಸೇರಿದಂತೆ ಸಹ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

> "ತಲಕಾಡು ಬಳಿ ಪ್ರಶಾಂತವಾದ ಸ್ಥಳದಲ್ಲಿ ಶಿಕ್ಷಣ ಸಂಸ್ಥೆ ತೆರೆದಿರುವುದರಿಂದ ಪ್ರಕೃತಿಯ ಮಡಿಲಿನಲ್ಲಿ ಪಾಠ ಕಲಿಯುವುದು ಈ ಭಾಗದ ಮಕ್ಕಳ ಸೌಭಾಗ್ಯವಾಗಿದೆ. ಸ್ಪರ್ಧಾತ್ಮಕ ಯುಗದಲ್ಲಿ ಗ್ರಾಮಾಂತರ ಮಕ್ಕಳಿಗೆ ಗುಣಾತ್ಮಕ ಅಂಶಗಳಿರುವ ಗುಣಮಟ್ಟದ ಶಿಕ್ಷಣದ ಅಗತ್ಯವಿದೆ. ಮಕ್ಕಳು ಹೆಚ್ಚಿನ ಅಧ್ಯಯನದ ಮೂಲಕ ಜ್ಞಾನ ಸಾಮರ್ಥ್ಯ ವೃದ್ಧಿಸಿಕೊಂಡು, ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು. – ಎನ್.ಸ್ವಾಮಿನಾಥ್, ಮೈಸೂರಿನ ನಿವೃತ್ತ ಪ್ರಾಂಶುಪಾಲ.

ಫೆ.20, ಹಾಸ್ಯ ಮನರಂಜನಾ ಕಾರ್ಯಕ್ರಮ

ಕಂಪಲಾಪುರ, ಫೆ.16– ಇಲ್ಲಿಗೆ ಸಮೀಪದ ರಾವಂದೂರಿನಲ್ಲಿ ಫೆ.20 ರಂದು ಶರಣ ಸಂಸ್ಕೃತಿ ಉತ್ಸವ, ಬಸವ ತತ್ವ ಸಮಾವೇಶ ಹಾಗೂ ಶ್ರೀ ಜಯದೇವ ಸಮುದಾಯ ಭವನದ ಕೆಳ ಹಂತದ ಉದ್ಘಾಟನಾ ಕಾರ್ಯಕ್ರಮ ನಡೆಯುವ ಹಿನ್ನೆಲೆಯಲ್ಲಿ ಅಂದು ಬೆಳಗ್ಗೆ ನಟ ಕುಮಾರ್ ಅರಸೇಗೌಡ ಮತ್ತು ಕಾಮಿಡಿ ಕಿಲಾಡಿಗಳು ಖ್ಯಾತಿಯ ಹಾಸನ್ ಭುವನೇಶ್ ತಂಡದಿಂದ ಹಾಸ್ಯ ಮನರಂಜನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಲಕ್ಕೇಗೌಡ ನಿಧನ



ಚುಂಚನಕಟ್ಟೆ, ಫೆ.16– ಸಾಲಿಗ್ರಾಮ ತಾಲೂಕಿನ ಹಳಿಯೂರು ಬಡಾವಣೆ ನಿವಾಸಿ ಲಕ್ಕೇಗೌಡ(78) ಸೋಮವಾರ ನಿಧನರಾದರು. ಮೃತರು ಪತ್ನಿ, ಪುತ್ರಿ, ಪುತ್ರ ಯುವ ಕಾಂಗ್ರೆಸ್ ಮುಖಂಡ ಡೇರಿ ಮಾಧು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹೊಸೂರಿನ ಮೃತರ ಜಮೀನಿನಲ್ಲಿ ಮಧ್ಯಾಹ್ನ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುಜಾತ



ಹುಣಸೂರು, ಫೆ16– ನಗರದ ಸೇತುವೆ ನಿವಾಸಿ ದಿ.ಚಂದ್ರಶೇಖರ್ ಗುಪ್ತ ಅವರ ಪತ್ನಿ ಸುಜಾತ (85) ಸೋಮವಾರ ಮುಂಜಾನೆ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ತಾಲೂಕು ಕಚೇರಿ ಪಕ್ಕದ ಚಿರಶಾಂತಿ ಧಾಮದಲ್ಲಿ ಮಧ್ಯಾಹ್ನ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ
ಮಂಗಳವಾರ 17 ಫೆಬ್ರವರಿ 2026

ಕೆಸಿ ನಗರ ಕೆರೆಗೆ ಹೊಂದಿಕೊಂಡ ಭೂಮಿ ಸೇರಿದಂತೆ ವಿಶೇಷ ವ್ಯವಸಾಯ ವಲಯದ ಹಲವು ಸರ್ವೆ ನಂಬರ್ ಜಾಗ

ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಗಾಗಿ ಎಂಡಿಎ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆ!



ಮೈಸೂರು, ಫೆ.16– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಎಂಡಿಎ)ವು ಐದು ಬೇರೆ ಬೇರೆ ಸರ್ವೆ ನಂಬರ್ ವ್ಯಾಪ್ತಿಯ ನಿರ್ದಿಷ್ಟ ಭೂಮಿಯನ್ನು ವಿಶೇಷ ವ್ಯವಸಾಯ ವಲಯದಿಂದ ವಸತಿ ವಲಯ ಹಾಗೂ ವಾಣಿಜ್ಯ ವಲಯಕ್ಕೆ ಬದಲಾವಣೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದು ಬೆಳಕಿಗೆ ಬಂದಿದೆ.

ಚಾಮುಂಡಿಬೆಟ್ಟ ತಪ್ಪಲಿನಲ್ಲಿ ವಿಶೇಷ ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗಾಗಿ ಸರ್ಕಾರಕ್ಕೆ ಇನ್ನೂ ಪ್ರಸ್ತಾವನೆ ಸಲ್ಲಿಸಿಲ್ಲ ಎಂದು ಎಂಡಿಎ ಆಯುಕ್ತ ಕೆ.ಆರ್.ರಕ್ಷಿತ್ ಸ್ಪಷ್ಟನೆ ನೀಡಿದ್ದರು. ಆದರೆ, ಖಾಸಗಿ ಭೂಮಾಲೀಕರ ಮನವಿ ಆಧಾರದಲ್ಲಿ ಕುರುಬಾರಹಳ್ಳಿ ಗ್ರಾಮದ ಸ.ನಂ.35, 36, 37, 47 ಹಾಗೂ 75ರ ವ್ಯಾಪ್ತಿಗೆ ಸಂಬಂಧಿಸಿದಂತೆ ಭೂ ಉಪಯೋಗ ಬದಲಾವಣೆಗೆ ಅನುಮತಿ ಕೋರಿ ಕಳೆದ ಜನವರಿಯಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯಕ್ಕೆ ಪ್ರಸ್ತಾವನೆ ಸಲ್ಲಿಸಿರುವ ಪತ್ರದ ಪ್ರತಿ ಇದೀಗ ಲಭ್ಯವಾಗಿದೆ.

ಶ್ರೀಮತಿ ರೂಬಿ ಪೀಟರ್ ಹಾಗೂ ರಾಣಿ ಪೀಟರ್ ಅವರು 2023ರ ಅಕ್ಟೋಬರ್ 11ರಂದು ಸಲ್ಲಿಸಿರುವ ಮನವಿ ಪತ್ರ, 2016 ಜ.12ರ ಸರ್ಕಾರದ ಆದೇಶ ಸಂಖ್ಯೆ, ಜೆ.ಬಾಪೂಜಿ ಮತ್ತು ಬಿ.ದೀಪಕ್ ಕುಮಾರ್ 2025ರ ಜು.16ರಂದು ಸಲ್ಲಿಸಿರುವ ಮನವಿ ಪತ್ರದ ಜೊತೆಗೆ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 346ರ ನಿರ್ಣಯವನ್ನು ಪ್ರಸ್ತಾವನೆಯಲ್ಲಿ ಉಲ್ಲೇಖಿಸಿ, ಅನುಮತಿ ಕೋರಲಾಗಿದೆ.

ಕುರುಬಾರಹಳ್ಳಿ ಗ್ರಾಮದ ಸ.ನಂ.35ರ 3 ಎಕರೆ ಪೈಕಿ 1 ಎಕರೆ 12 ಗುಂಟೆ ವಿಶೇಷ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ, ಸ.ನಂ.36ರ 3 ಎಕರೆ ಪೈಕಿ 1 ಎಕರೆ 16 ಗುಂಟೆ ವಾಣಿಜ್ಯ ವಲಯಕ್ಕೆ ಹಾಗೂ 1 ಎಕರೆ 10 ಗುಂಟೆ ವಸತಿ ವಲಯಕ್ಕೆ, ಸ.ನಂ.37ರ 4 ಎಕರೆ ಪೈಕಿ 3 ಎಕರೆ 26 ಗುಂಟೆ ವಸತಿ ವಲಯಕ್ಕೆ, ಸ.ನಂ.47ರ 3 ಎಕರೆ 20 ಗುಂಟೆ ಪೈಕಿ 3 ಎಕರೆ 6 ಗುಂಟೆಯನ್ನು ವಸತಿ ವಲಯಕ್ಕೆ, ಸ.ನಂ.75ರ 2 ಎಕರೆ 39 ಗುಂಟೆ ಜಮೀನು ಸೇರಿದಂತೆ ಮಹಾಯೋಜನೆಯಂತೆ ವಾಣಿಜ್ಯ ಮತ್ತು ವಿಶೇಷ ವ್ಯವಸಾಯ ವಲಯದಲ್ಲಿರುವ ಒಟ್ಟು 15 ಎಕರೆ 3 ಗುಂಟೆ ಜಮೀನನ್ನು ವಸತಿ ಮತ್ತು ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸದರಿ ಕೋರಿಕೆಯಂತೆ ಪರಿಶೀಲಿಸಲಾಗಿ, ಪ್ರಶ್ನಿತ ಜಮೀನುಗಳು ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆಯಂತೆ ವಾಣಿಜ್ಯ ಮತ್ತು ವಿಶೇಷ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಿದ್ದು, ಸದರಿ ಜಮೀನುಗಳು ಒಂದಕ್ಕೊಂದು ಹೊಂದಿಕೊಂಡಿದ್ದ 18 ಮೀ. ಅಗಲದ ಜಿಲ್ಲಾ ಮುಖ್ಯ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಅಭಿವೃದ್ಧಿ ಹೊಂದಿರುವ ಪ್ರದೇಶದಲ್ಲಿರುವುದರಿಂದ ಅರ್ಜಿದಾರರ ಕೋರಿಕೆಯಂತೆ ಭೂ ಉಪಯೋಗ ಬದಲಾವಣೆ ಸಂಬಂಧ ಕೆಟಿಸಿಪಿ ಕಾಯ್ದೆ 1961ರ ಕಲಂ 14(ಎ)ರನ್ವಯ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲು ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದ್ದು, ಈ ಬಗ್ಗೆ ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ/ ಸಲಹೆ ಸ್ವೀಕೃತವಾಗಿರುವುದಿಲ್ಲ.

ತದನಂತರ ಜೆ.ಬಾಪೂಜಿ ಮತ್ತು ಹರೇಕೃಷ್ಣ ಶೆಲ್ಟರ್ಸ್ ಪ್ರೈ.ಲಿ.ರವರ ಪರವಾಗಿ ಮ್ಯಾನೇಜಿಂಗ್ ಡೈರೆಕ್ಟರ್ ಬಿ.ದೀಪಕ್ ಕುಮಾರ್ ಬಿನ್ ಭವರ್‌ಲಾಲ್ ಕೊಠಾರಿ ಅವರು ಮನವಿ ಸಲ್ಲಿಸಿ, ಶ್ರೀಮತಿ ರೂಬಿ ಪೀಟರ್, ರಾಣಿ ಪೀಟರ್ ಮಾಲೀಕತ್ವದಲ್ಲಿರುವ ಜಮೀನುಗಳನ್ನು ಕ್ರಯಕ್ಕೆ ಪಡೆದಿದ್ದು, ಈ ಹಿಂದೆ ಉಪಯೋಗ ಬದಲಾವಣೆಗೆ ಸಲ್ಲಿಸಿದ್ದ ಅರ್ಜಿಯನ್ನು ಮುಂದುವರೆಸಿ, ಪ್ರಸ್ತುತ ಮಾಲೀಕರ ಹೆಸರಿಗೆ ಭೂ ಉಪಯೋಗ ಬದಲಾವಣೆ ನೀಡಲು ಅಗತ್ಯ ದಾಖಲೆ ಸಲ್ಲಿಸಿ, ಕೋರಿದ್ದರು.

ಈ ಸಂಬಂಧ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಲಾಗಿ, ಸದರಿ ಜಮೀನು ಮೈಸೂರು ನಗರದ ಮಧ್ಯಭಾಗದಲ್ಲಿದ್ದು, ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುತ್ತದೆ. ಸದರಿ ಜಮೀನಿನ ಸುತ್ತ ಮುತ್ತಾ ವಾಣಿಜ್ಯ ಹಾಗೂ ವಸತಿ ಉದ್ದೇಶದ ಅಭಿವೃದ್ಧಿ ಆಗಿದ್ದು, ಸದರಿ ಜಮೀನಿನಲ್ಲಿ ಯಾವುದೇ ವ್ಯವಸಾಯ ಚಟುವಟಿಕೆ ಇರುವುದು ಕಂಡುಬಂದಿರುವುದಿಲ್ಲ ಹಾಗೂ ಸದರಿ ಪ್ರದೇಶವು ಚಾಮುಂಡಿ ಬೆಟ್ಟದ ಅಭಿವೃದ್ಧಿ ರಹಿತ ಪ್ರದೇಶದಿಂದ ಹೊರಗಿರುವುದರಿಂದ ಕೆಟಿಸಿಪಿ ಕಾಯ್ದೆ 1961 ಕಲಂ 14(ಎ)ರಡಿ ಸದರಿ ಜಮೀನನ್ನು ವಿಶೇಷ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸು ಮಾಡಲು ತೀರ್ಮಾನಿಸಲಾಗಿದೆ ಎಂದು ಪ್ರಸ್ತಾವನೆಯಲ್ಲಿ ವಿವರಿಸಲಾಗಿದೆ.

ಪ್ರಶ್ನಿತ ಜಮೀನುಗಳಲ್ಲಿ ಪ್ರಸ್ತುತ ಯಾವುದೇ ವ್ಯವಸಾಯ ಚಟುವಟಿಕೆ ಕಂಡುಬಂದಿರುವುದಿಲ್ಲ. ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆಯಲ್ಲಿ ಪ್ರಶ್ನಿತ ಜಮೀನುಗಳನ್ನು ಭಾಗಶಃ ವ್ಯವಸಾಯ ವಲಯ ಹಾಗೂ ವಾಣಿಜ್ಯ ವಲಯದಲ್ಲಿ ಕಾಯ್ದಿರಿಸಲಾಗಿದೆ. ಜಮೀನುಗಳು ಅನುಮೋದಿತ ಮಹಾಯೋಜನೆಯಲ್ಲಿ ಪ್ರಸ್ತಾಪಿಸಿರುವ ನೋ ಡೆವಲ್ಮೆಂಟ್ ಜೋನ್‌ನಿಂದ ಹೊರಭಾಗದಲ್ಲಿ ಇದೆ. ಸದರಿ ಕುರುಬಾರಹಳ್ಳಿ ಗ್ರಾಮದಲ್ಲಿನ ಪ್ರದೇಶಗಳಲ್ಲಿ ಈಗಾಗಲೇ ಪ್ರಾಧಿಕಾರದಿಂದ ಅನುಮೋದನೆಯಾಗಿ ಅಭಿವೃದ್ಧಿಪಡಿಸಿರುವ ಪ್ರಾಧಿಕಾರದ ಯೋಜನೆಯ ಬಡಾವಣೆಗಳಾದ ಸಿದ್ಧಾರ್ಥ ಲೇಔಟ್, ಕೆ.ಸಿ.ಲೇಔಟ್ ಮತ್ತು ಇನಕಮ್ ಟ್ಯಾಕ್ಸ್ ಲೇಔಟ್‌ನಂತಹ ಬಡಾವಣೆಗಳಿರುತ್ತವೆ. ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿದ್ದು, ನಗರದ ಮಧ್ಯಭಾಗದಲ್ಲಿ ಅಭಿವೃದ್ಧಿ ಹೊಂದಿರುವ ಪ್ರದೇಶದಲ್ಲಿರುತ್ತದೆ. ಪ್ರಶ್ನಿತ ಜಮೀನುಗಳ ಸಂಪರ್ಕ ರಸ್ತೆಗೆ ಲಗತ್ತಾಗಿ ಈಗಾಗಲೇ ವಸತಿ ಮತ್ತು ವಾಣಿಜ್ಯ ಬಡಾವಣೆಗಳು ಬಂದಿರುತ್ತವೆ ಎಂದು ತಿಳಿಸಲಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕಾ ದಿ ಫಾರೆಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರಕ್ಕಸಪುರದೋಳ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ಪೂಕಿ (ತ)	4 ಪ್ರದರ್ಶನಗಳು
ಸಂಗಂ	
ಮೈ ಲಾರ್ಡ್(ತ)	4 ಪ್ರದರ್ಶನಗಳು
ಲಿಡೋ	
ಕರಗ (ಕ) + ಶಿವಲೀಲಾ (ಕ)	3+1 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಓ ಸುಂದರ ರಾಕ್ಷಸಿ (ಕ) + ದೈವ (ಕ)	2+2 ಪ್ರದರ್ಶನಗಳು

ಅವ್ಯವಹಾರ ಪ್ರಶ್ನಿಸಿದ್ದಕ್ಕೆ ಬೆದರಿಕೆ

ಮೈಸೂರು, ಫೆ16(ಎಂಕೆ)– ಮೈಸೂರಿನ ವಿವಿ ರಸ್ತೆಯಲ್ಲಿರುವ(ಸಿದ್ದಪ್ಪ ಸ್ಕ್ವೇರ್ ಸಮೀಪ) ಸಿಎಸ್‌ಐ ಹಾರ್ಡ್ವಿಕ್ ಚರ್ಚ್ ಫಾದರ್ ರೆ.ವಿಕ್ಟರ್ ಅಯ್ಯ, ಅಕ್ರಮ ಕಾಮಗಾರಿಯೊಂದಕ್ಕೆ ಸಹಕರಿಸಲಿಲ್ಲವೆಂದು ಅವಾಚ್ಯ ಪದಗಳಿಂದ ನಿಂದಿಸಿ, ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಚರ್ಚ್‌ನ ಸಭಾ ಪಾಲನ ಸಮಿತಿ ಸದಸ್ಯ ಜೆ.ಎಂ.ಎನೋಷಿ ದೂರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಭಾಂಗಣದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್ ಹಾಗೂ ಪ್ರಥಮ ದರ್ಜೆ ಗುತ್ತಿಗೆದಾರನಾಗಿರುವ ನಾನು, ಚರ್ಚ್‌ನ ಸಭಾಪಾಲನ ಮತ್ತು ಸಭಾ ಸದಸ್ಯನಾಗಿದ್ದೇನೆ. ಚರ್ಚ್‌ನ ಪೇಂಟಿಂಗ್‌ಗೆ 11,06,074 ರೂ.ಗಳ ಖರ್ಚು(ಪೇಟಿಂಗ್ ಕೂಲಿ ಮತ್ತು ಪೇಂಟ್ ಸೇರಿ) ತೋರಿಸಿದ್ದು, ಪೇಂಟಿಂಗ್ ಕೆಲಸಕ್ಕೆ ಸಂಬಂಧಿಸಿದ ರಶೀದಿಗಳನ್ನು ಪರಿಶೀಲಿಸಿದಾಗ ಸುಮಾರು 5 ಲಕ್ಷ ರೂ.ಗಳ ಅವ್ಯವಹಾರ ನಡೆಸಿರುವುದು ಕಂಡು ಬಂದಿದ್ದು, ಈ ವಿಚಾರವನ್ನು ಸಭಾ ಪಾಲನಾ ಸಮಿತಿ ಸದಸ್ಯರ ಗಮನಕ್ಕೂ ತಂದಿದ್ದೇನೆ.

ಇದರಿಂದ ಅಸಮಾಧಾನಗೊಂಡ ರೆ.ವಿಕ್ಟರ್ ಅಯ್ಯ, ಫೆ.6 ರಂದು ನನ್ನನ್ನು ಸಭಾ ಪಾಲನ ಸಮಿತಿಯ ಸದಸ್ಯ ಸ್ಥಾನದಿಂದ ರದ್ದುಪಡಿಸುತ್ತೇನೆಂದು ರೈಟ್ ರೆ.ಹೇಮಚಂದ್ರ ಕುಮಾರ್ ಬಿಷಪ್ ಅವರಿಗೆ ಪತ್ರಬರೆದಿರುತ್ತಾರೆ. ನಂತರ ಅಂದರೆ ಫೆ.8 ರಂದು ಚರ್ಚ್‌ನಲ್ಲಿ ನಡೆದ ಕನ್ಫರ್ಮೇಶನ್ ಸರ್ವಿಸ್ ಸಭೆಯ ಬಳಿಕ ಚರ್ಚ್‌ನ ಸಭಾ ಪಾಲನ ಸದಸ್ಯತ್ವ ರದ್ದುಪಡಿಸುವ ಕುರಿತು ಕೇಳಿದಾಗ ಫಾದರ್ ರೆ.ವಿಕ್ಟರ್ ಅಯ್ಯ, ನನ್ನನ್ನು ಅವಾಚ್ಯ ಪದಗಳಿಂದ ನಿಂದಿಸಿ, ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ತಿಳಿಸಿದರು.

ಅಲ್ಲದೆ ಅದೇ ವೇಳೆ ಬಂದಿದ್ದ ರೆ.ವಿಕ್ಟರ್ ಅಯ್ಯ ಅವರ ಸಹೋದರ ಸುನಂದ್ ರಾಜ್ ಕೂಡ ನನ್ನ ಮೇಲೆ ಹಲ್ಲೆ ನಡೆಸಿದ್ದು, ವಾಟ್ಸ್‌ಅಪ್ ಮೂಲಕ ಕರೆ ಮಾಡಿಯೂ ನಿಂದಿಸಿದ್ದಾರೆ. ಈ ವಿಚಾರವನ್ನು ಬಿಷಪ್ ಅವರ ಗಮನಕ್ಕೂ ತಂದಿದ್ದೇನೆ. ಅಲ್ಲದೆ ಲಕ್ಷ್ಮಿಪುರಂ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದೇನೆ. ಈ ಹಿಂದೆಯೂ ಕೆಲವೆಡೆ ಅವ್ಯವಹಾರ ನಡೆಸಿದ್ದ ರೆ.ವಿಕ್ಟರ್ ಅಯ್ಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಫೆ.20ರಿಂದ ಪರಿದೃಶ್ಯ ಅಂತರರಾಷ್ಟ್ರೀಯ ಕಿರುಚಿತ್ರ, ಸಾಕ್ಷ್ಯಚಿತ್ರೋತ್ಸವ



'ಪರಿದೃಶ್ಯ ಅಂತರರಾಷ್ಟ್ರೀಯ ಕಿರು ಚಿತ್ರ ಮತ್ತು ಸಾಕ್ಷ್ಯ ಚಿತ್ರೋತ್ಸವ'ದ ನಾಲ್ಕನೇ ಆವೃತ್ತಿಯ ಪೋಸ್ಟರ್ ಅನ್ನು ಮೈಸೂರು ಸಿನಿಮಾ ಸೊಸೈಟಿ ಗೌರವಾಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್ ಬಿಡುಗಡೆ ಮಾಡಿದರು.

ಮೈಸೂರು, ಫೆ16(ಎಂಕೆ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಮೈಸೂರು ಸಿನಿಮಾ ಸೊಸೈಟಿ ವತಿಯಿಂದ ಫೆ.20 ರಿಂದ 22ರವರೆಗೆ 'ಪರಿದೃಶ್ಯ ಅಂತರರಾಷ್ಟ್ರೀಯ ಕಿರು ಚಿತ್ರ ಮತ್ತು ಸಾಕ್ಷ್ಯ ಚಿತ್ರೋತ್ಸವ'ದ ನಾಲ್ಕನೇ ಆವೃತ್ತಿ ಹಮ್ಮಿಕೊಳ್ಳಲಾಗಿದೆ ಎಂದು ಮೈಸೂರು ಸಿನಿಮಾ ಸೊಸೈಟಿ ಗೌರವಾಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಭಾಂಗಣದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಪರಿದೃಶ್ಯ ಚಿತ್ರೋತ್ಸವಕ್ಕೆ ಪ್ರಪಂಚದ 114 ದೇಶಗಳಿಂದ 3042 ಕಿರು ಚಿತ್ರ ಮತ್ತು ಸಾಕ್ಷ್ಯ ಚಿತ್ರಗಳು ಬಂದಿದ್ದು, ಅತ್ಯುತ್ತಮ ಚಿತ್ರ, ನಿರ್ದೇಶಕ, ನಟ, ನಟಿ ಸೇರಿದಂತೆ ವಿವಿಧ ವಿಭಾಗಗಳಲ್ಲಿ 30 ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು ಎಂದರು.

ಫೆ.20ರಂದು ಬೆಳಗ್ಗೆ 10 ಗಂಟೆಗೆ ಪರಿದೃಶ್ಯ ಚಿತ್ರೋತ್ಸವ ಉದ್ಘಾಟನಾ ಕಾರ್ಯಕ್ರಮ ನಡೆಯಲಿದ್ದು, ಹಿರಿಯ ನಟ ಹಾಗೂ ರಾಜ್ಯಸಭಾ ಸದಸ್ಯ ಜಗ್ಗೇಶ್, ನಿರ್ದೇಶಕ ಪ್ರಕಾಶ್ ಬೆಳವಾಡಿ, ಲೇಖಕ ಜೋಗಿ ಗಿರೀಶ್ ರಾವ್ ಹತ್ವಾರ್, ಡಾ.ವಿ. ನಾಗೇಂದ್ರ ಪ್ರಸಾದ್, ನಟಿ ಕಾರುಣ್ಯ ರಾಮ್, ಲಾಸ್ಯ ನಾಗರಾಜ್ ಮುಖ್ಯ ಅತಿಥಿಗಳಾಗಿದ್ದಾರೆ ಎಂದು ತಿಳಿಸಿದರು.

ಸಂಜೆ 5 ಗಂಟೆಗೆ ಗಾಯಕ ರಾಜೇಶ್ ಕೃಷ್ಣನ್ ಮತ್ತು ಎಂ.ಡಿ.ಪಲ್ಲವಿ ಹಾಗೂ ಫೆ.21 ರಂದು ಹೇಮಂತ್‌ಕುಮಾರ್ ಮತ್ತು ಲಹರಿ ಮಹೇಶ್ ಅವರಿಂದ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸಮಾರೋಪ ಸಮಾರಂಭಕ್ಕೆ ಸಂಸದ ಯದುವೀರ್, ನಟ ಡಾಲಿ ಧನಂಜಯ, ಹಿರಿಯ ನಟಿ ಜಯಮಾಲ, ಬೆನ್ಹಿವ್ ಗ್ರೂಪ್ಸ್ ಸಿಇಓ ಜಯಾನಿ ಬೆನ್ಹಿವ್ ಭಾಗವಹಿಸಲಿದ್ದಾರೆ. ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆ ಇದೆ ಎಂದು ಮಾಹಿತಿ ನೀಡಿದರು. ಮೈಸೂರು ಸಿನಿಮಾ ಸೊಸೈಟಿ ಅಧ್ಯಕ್ಷ ಎಂ.ಚೇತನ್, ಉಪಾಧ್ಯಕ್ಷೆ ಡಾ.ಶೋಬಿತ್ ರಂಗಪ್ಪ, ಕಾರ್ಯದರ್ಶಿ ಪದ್ಮಾವತಿ ಎಸ್.ಭಟ್, ಜಯಶೇಖರ್, ಜೋಗಿ ಮಂಜು ಉಪಸ್ಥಿತರಿದ್ದರು.

ಮೈಸೂರು ಜಿಲ್ಲೆಯ 25 ಶಾಲೆಗೆ ಪುಟ್ಬಾಲ್ ವಿತರಣೆ

ಮೈಸೂರು,ಫೆ.16– ಕೇಂದ್ರ ಸರ್ಕಾರದ ಶಿಕ್ಷಣ ಇಲಾಖೆ ಅಡಿಯಲ್ಲಿ ಪಿ.ಎಂ.ಶ್ರೀ ಶಾಲೆ ಜವಾಹರ್ ನವೋದಯ ವಿದ್ಯಾಲಯ ಸಮಿತಿ ವತಿಯಿಂದ ಫೆ.23 ರಂದು ಬೆಳಗ್ಗೆ 10.30 ಘಂಟೆಗೆ ಮೈಸೂರು ಜಿಲ್ಲೆಯ ಸರಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳಿಗೆ ಕ್ರೀಡೆಯನ್ನು ಪ್ರೋತ್ಸಾಹಿಸಲು ಜಿಲ್ಲೆಯ 333 ಶಾಲೆಗಳಿಗೆ ಕಾಲುಚೆಂಡುಗಳನ್ನು (Footballs) ವಿತರಿಸಲಾಗುತ್ತಿದೆ.

ಇದರ ಅಂಗವಾಗಿ ಪ್ರಾರಂಭೋತ್ಸವದಲ್ಲಿ ಹುಣಸೂರು ವಿಧಾನಸಭಾ ಕ್ಷೇತ್ರದ ಶಾಸಕ ಡಿ.ಜಿ.ಹರೀಶ್ ಗೌಡರ ಅಧ್ಯಕ್ಷತೆಯಲ್ಲಿ 25 ಶಾಲೆಗಳಿಗೆ ಕಾಲುಚೆಂಡುಗಳನ್ನು ವಿತರಿಸುವ ಕಾರ್ಯಕ್ರಮವನ್ನು ಜವಹಾರ್ ನವೋದಯ ವಿದ್ಯಾಲಯ ಡಿಎಂಜಿ ಹಳ್ಳಿ ಮೈಸೂರು ತಾಲೂಕು ಇಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಮೈಸೂರು ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರು ಉಪಸ್ಥಿತರಿರುವರು.

ಅಂತಜ್ಞಾನ ಆಧಾರಿತ ಸ್ಟಾರ್ಟ್‌ಪ್‌ಗಳಿಗೆ ಮಾರ್ಗದರ್ಶನ

ಮೈಸೂರು,ಫೆ.16(ಜಿಎ)–ಡಿಎಸ್‌ಟಿ–ಐಟಿಬಿಐ ಜಿಎಸ್‌ಎಸ್‌ಎಸ್ ಟೆಕ್ನಾಲಜಿ ಬಿಸಿನೆಸ್ ಇನ್‌ಕ್ಯುಬೇಟರ್ ಫೌಂಡೇಷನ್ ವತಿಯಿಂದ ಮೈಸೂರಿನಲ್ಲಿ ಅಂತಜ್ಞಾನ ಆಧಾರಿತ ಸ್ಟಾರ್ಟ್‌ಪ್‌ಗಳಿಗೆ ಮಾರ್ಗದರ್ಶನ ಹಾಗೂ ಬೆಂಬಲ ಒದಗಿಸಲಾಗುತ್ತಿದ್ದು, ಆಸಕ್ತರು ಪ್ರಯೋಜನ ಪಡೆಯಬೇಕು ಎಂದು ಸಿಇಓ ಯಶಸ್ವಿನಾಗ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನಿಧಿ ಐಟಿಬಿಐ ಯೋಜನೆ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಜಿಎಸ್‌ಎಸ್‌ಎಸ್ ಮಹಿಳಾ ತಂತ್ರಜ್ಞಾನ ಮತ್ತು ಇಂಜಿನಿಯರಿಂಗ್ ಸಂಸ್ಥೆ ಆವರಣದಲ್ಲಿ ಆಸಕ್ತಿಯುಳ್ಳವರಿಗೆ ಮೂಲ ಸೌಕರ್ಯ, ಮಾರ್ಗದರ್ಶನ, ನೆಟ್‌ವರ್ಕಿಂಗ್, ಮಾರುಕಟ್ಟೆ ಸಂಪರ್ಕ ಹಾಗೂ ಅನುದಾನ ಮಾರ್ಗದರ್ಶನ ಒದಗಿಸಲಿದೆ. ಪ್ರೀ ಇನ್‌ಕ್ಯುಬೇಷನ್ ಮತ್ತು ಐಡಿಯಾ ಮಾರ್ಗದರ್ಶನ ಜೊತೆ ಸ್ಟಾರ್ಟ್‌ಪ್‌ಗೆ ಅನುದಾನ, ಆಹಾರ ಸಂಸ್ಕರಣೆ ಉದ್ದಿಮೆಗಳಲ್ಲಿ ತೊಡಗಿರುವವರಿಗೆ ಸಂಸ್ಥೆಯಲ್ಲಿ ಲಭ್ಯವಿರುವ ಯಂತ್ರೋಪಕರಣ ಬಳಕೆಗೆ ಅವಕಾಶ, ಪ್ರೋಟೋ ಟೈಪ್ ಅಭಿವೃದ್ಧಿ ಸಹಾಯ, ವ್ಯವಹಾರ ಮಾರ್ಗದರ್ಶನ ಮತ್ತು ಹೂಡಿಕೆದಾರರ ಸಂಪರ್ಕ ಹಾಗೂ ಅನುದಾನ ನೆರವು ಇದರಲ್ಲಿ ಸೇರಿವೆ. ಅತಿ ಕಡಿಮೆ ಶುಲ್ಕ ನೀಡಬಹುದಾಗಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಜಯ್ ಪಾಂಡೆ, ಅಶೋಕಾನಂದ ಉಪಸ್ಥಿತರಿದ್ದರು.

ಗೂಡ್ಸ್ ಟೆಂಪೋ–ಬೈಕ್ ಡಿಕ್ಕಿ : ಸವಾರ ಸಾವು



ಭಾರತೀನಗರ, ಫೆ.16– ಬೈಕ್ ಮತ್ತು ಗೂಡ್ಸ್ ಟೆಂಪೋ ನಡುವೆ ಡಿಕ್ಕಿ ಸಂಭವಿಸಿ ಬೈಕ್ ಸವಾರ ಸಾವನ್ನಪ್ಪಿರುವ ಘಟನೆ ಭಾರತೀನಗರದ ಆಲಭುಜನಹಳ್ಳಿ ರಸ್ತೆಯಲ್ಲಿ ಜರುಗಿದೆ.

ಕೆ.ಎಂ.ದೊಡ್ಡಿ ಗ್ರಾಮದ ರೇವಣ್ಣ(48) ಎಂಬುವರೇ ಮೃತಪಟ್ಟ ದುರ್ದೈವಿ ಆಲಭುಜನಹಳ್ಳಿ ರಸ್ತೆಯಿಂದ ಕೆ.ಎಂ.ದೊಡ್ಡಿಗೆ ಬರುತ್ತಿದ್ದಾಗ ಗೂಡ್ಸ್ ಟೆಂಪೋವೊಂದು ಡಿಕ್ಕಿಹೊಡದಾಗ ತೀವ್ರವಾಗಿ ಗಾಯಗೊಂಡಿದ್ದರು. ತಕ್ಷಣವೇ ಸ್ಥಳೀಯರು ಕೆ.ಎಂ.ದೊಡ್ಡಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾಸ್ಪತ್ರೆಗೆ ಕರೆದೊಯ್ದು, ಅಲ್ಲಿಂದ ಮೈಸೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ಕೊಡಿಸಿದರಾದರೂ ಚಿಕಿತ್ಸೆ ಫಲಕಾರಿಯಾಗದೆ ಅಸುನೀಗಿದರು. ಮಂಡ್ಯ ಜಿಲ್ಲಾಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಿದ್ದಾರೆ. ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಶಾ ಕಾರ್ಯಕರ್ತೆಯರಿಗೆ ಪುನರ್ ಮನನ ತರಬೇತಿ



ನಗರ ಗೃಹ ಆರೋಗ್ಯ ಯೋಜನೆಯ ಕೈಪಿಡಿಯನ್ನು ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ ಬಿಡುಗಡೆ ಮಾಡಿದರು.

ಮೈಸೂರು, ಫೆ.16(ಎಂಕೆ)– ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗೃಹ ಆರೋಗ್ಯ ಯೋಜನೆಯನ್ನು ನಗರ ಪ್ರದೇಶಕ್ಕೆ ವಿಸ್ತರಿಸುವ ನಿಟ್ಟಿನಲ್ಲಿ ಕ್ರಿಯಾ ಯೋಜನೆ ಮತ್ತು ಕಾರ್ಯಕ್ರಮದ ರೂಪುರೇಷೆ ಕುರಿತು ಆಶಾ ಕಾರ್ಯಕರ್ತೆಯರಿಗೆ ಪುನರ್ ಮನನ ತರಬೇತಿ ನೀಡಲಾಯಿತು.

ಮೈಸೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಚೇರಿ ಸಭಾಂಗಣದಲ್ಲಿ ನಡೆದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಮಾತನಾಡಿ, ನಗರ ಗೃಹ ಆರೋಗ್ಯ ಯೋಜನೆಯನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಆಶಾ ಕಾರ್ಯಕರ್ತೆಯರು ಕ್ಷೇತ್ರ ವ್ಯಾಪ್ತಿಯಲ್ಲಿ ಸಮೀಕ್ಷಾ ಕಾರ್ಯವನ್ನು ಪೂರ್ಣಗೊಳಿಸಬೇಕು ಹಾಗೂ ಯೋಜನೆ ರೂಪುರೇಷೆ ತಿಳಿದುಕೊಳ್ಳಬೇಕು ಎಂದರಲ್ಲದೆ ನಗರ ಗೃಹ ಆರೋಗ್ಯ ಯೋಜನೆಯ ಕೈಪಿಡಿ ಬಿಡುಗಡೆ ಮಾಡಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಡಿ.ಜಿ. ನಾಗರಾಜ್ ಮಾತನಾಡಿ, ಗೃಹ ಆರೋಗ್ಯ ಯೋಜನೆಯಲ್ಲಿ 30 ವರ್ಷ ಮೇಲ್ಪಟ್ಟ ನಾಗರಿಕರ ಮನೆ ಬಾಗಿಲಿಗೆ ತೆರಳಿ ಉಚಿತ ಆರೋಗ್ಯ ತಪಾಸಣೆ ಮತ್ತು ಔಷಧಿಗಳನ್ನು ತಲುಪಿಸುವುದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಆಶಾ ಕಾರ್ಯಕರ್ತೆಯರು, ಆರೋಗ್ಯ ಸಿಬ್ಬಂದಿ ಮನೆ–ಮನೆ ಸಮೀಕ್ಷೆ ನಡೆಸಬೇಕು. ಅಸಾಂಕ್ರಾಮಿಕ ರೋಗದಿಂದ ಬಳಲುತ್ತಿರುವವರಿಗೆ ಸೂಕ್ತ ಸಲಹೆ ನೀಡಬೇಕು.

ಹೆಚ್ಚಿನ ಚಿಕಿತ್ಸೆಗೆ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಶಿಫಾರಸ್ಸು ಮಾಡಬೇಕು ಎಂದರು. ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಮಹಮ್ಮದ್ ಸಿರಾಜ್ ಅಹಮ್ಮದ್, ಹೆಚ್.ಡಿ.ಕೋಟೆ ತಜ್ಞ ವೈದ್ಯ ಡಾ.ಪ್ರಜ್ವಲ್ ಹಾಗೂ ಜಿಲ್ಲಾ ಮಟ್ಟದ ಆರೋಗ್ಯ ಮೇಲ್ವಿಚಾರಕರು, ಆಶಾ ಕಾರ್ಯಕರ್ತೆಯರು ಮತ್ತು ಆರೋಗ್ಯ ಸಿಬ್ಬಂದಿ ಉಪಸ್ಥಿತರಿದ್ದರು.

ರಾಷ್ಟ್ರಮಟ್ಟದ ಹಾಕಿ ಪಂದ್ಯಾವಳಿಗೆ ಮೈಸೂರಿನ ಐವರು ಸರ್ಕಾರಿ ನೌಕರರು ಆಯ್ಕೆ

ಮೈಸೂರು, ಫೆ.16– ನವದೆಹಲಿಯಲ್ಲಿ ನಾಳೆ(ಫೆ.17)ಯಿಂದ ಫೆ.28ರವರೆಗೆ ಆಯೋಜಿಸಿರುವ ಅಖಿಲ ಭಾರತ ನಾಗರಿಕ ಸೇವಾ ಹಾಕಿ ಪಂದ್ಯಾವಳಿಗೆ ಮೈಸೂರು ಜಿಲ್ಲೆಯ ಆರು ಅಧಿಕಾರಿಗಳು ಆಯ್ಕೆಯಾಗಿದ್ದಾರೆ. ರೇಷ್ಮೆ ಉಪನಿರ್ದೇಶಕರ ಕಚೇರಿಯ ಪತ್ರಾಂಕಿತ ವ್ಯವಸ್ಥಾಪಕ ಕೆ.ಸಿ.ರವಿ, ಕಂದಾಯ ಇಲಾಖೆಯ ಕೆ.ಎಂ.ಕುಟ್ಟಪ್ಪ, ಶಿಕ್ಷಣ ಇಲಾಖೆಯ ಕೆ.ಎಂ.ಮಂಜುನಾಥ್, ಸುನಿಲ್ ಜೆಸ್ಟಿನ್ ಡಿಸೋಜ, ಲೋಕೋಪಯೋಗಿ ಇಲಾಖೆಯ ಸಿ.ಎಸ್.ಕಾರ್ಯಪ್ಪ ಹಾಗೂ ಅರಣ್ಯ ಇಲಾಖೆಯ ಡಿ.ವಿ.ಆದರ್ಶ ರಾಷ್ಟ್ರ ಮಟ್ಟದ ಹಾಕಿ ಪಂದ್ಯಾವಳಿಯಲ್ಲಿ ಆಡಲಿದ್ದಾರೆ.

ಇಂದು ಅರಿವು ಸಪ್ತಾಹ ಕಾರ್ಯಕ್ರಮ

ಮೈಸೂರು,ಫೆ.16– ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತದ ವತಿಯಿಂದ ಮೈಸೂರು ತಾಲೂಕು ಕುವೆಂಪುನಗರ ಕಾ ಮತ್ತು ಪಾ ಉಪವಿಭಾಗ ಮತ್ತು ರಾಮಕೃಷ್ಣನಗರ ಕಾ ಮತ್ತು ಪಾ ಉಪವಿಭಾಗ ವ್ಯಾಪ್ತಿಯ ವಿದ್ಯುತ್ ಗ್ರಾಹಕರಿಗೆ ವಿದ್ಯುತ್ ಇಲಾಖೆಗೆ ಸಂಬಂಧಿತ ಸೌಲಭ್ಯ ಮತ್ತು ಸಮಸ್ಯೆಗಳ ಬಗ್ಗೆ ಹಾಗೂ ವಿದ್ಯುತ್ ಸುರಕ್ಷತಾ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಅಧ್ಯಕ್ಷತೆಯಲ್ಲಿ ಅರಿವು ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ

ಕಾರ್ಯಕ್ರಮವನ್ನು ಫೆ.17ರಂದು ವಿವೇಕಾನಂದ ಶಾಖೆಗೆ ಸಂಬಂಧಿಸಿದಂತೆ ಬೆಳಿಗ್ಗೆ 11 ಗಂಟೆಗೆ ರಾಮಕೃಷ್ಣನಗರ ಕಾ ಮತ್ತು ಪಾ ಉಪವಿಭಾಗ ಕಛೇರಿಯಲ್ಲಿ, ಜಯಪುರ ಮತ್ತು ಹಾರೋಹಳ್ಳಿ ಶಾಖೆಗೆ ಸಂಬಂಧಿಸಿದಂತೆ ಮಧ್ಯಾಹ್ನ 3 ಗಂಟೆಗೆ ಚಾವಿಸನಿನಿ ಜಯಪುರ ಕಾ ಮತ್ತು ಪಾ ಶಾಖಾ ಕಛೇರಿಯಲ್ಲಿ ಸರಸ್ವತಿಪುರಂ, ಅರವಿಂದ ನಿವೇದಿತಾ ಶಾಖೆಗೆ ಸಂಬಂಧಿಸಿದಂತೆ ಮಧ್ಯಾಹ್ನ 3ಗಂಟೆಗೆ ಕಾಮಾಕ್ಷಿ ಆಸ್ಪತ್ರೆ ರಸ್ತೆಯಲ್ಲಿರುವ ಕುವೆಂಪು ಪ್ರೌಢ ಶಾಲೆ ಆವರಣದಲ್ಲಿ ಆಯೋಜಿಸಲಾಗಿರುತ್ತದೆ.

ಆಯಾಯ ಭಾಗದ ವಿದ್ಯುತ್ ಗ್ರಾಹಕರು ಸದರಿ ಕಾರ್ಯಕ್ರಮಕ್ಕೆ ಭಾಗವಹಿಸಿ ವಿದ್ಯುತ್ ಇಲಾಖೆಗೆ ಸಂಬಂಧಿತ ಸಮಸ್ಯೆಗಳೇನಾದರೂ ಇದ್ದಲ್ಲಿ, ಲಿಖಿತ ಅರ್ಜಿಗಳನ್ನು ಸಲ್ಲಿಸಿ ವಿದ್ಯುತ್ ಸಮಸ್ಯೆ ಹಾಗೂ ವಿದ್ಯುತ್ ಸುರಕ್ಷತಾ ಜಾಗೃತಿಯ ಬಗ್ಗೆ ಯಾವುದೇ ಪ್ರಶ್ನೆಗಳಿದ್ದಲ್ಲಿ ಬಗೆಹರಿಸಿಕೊಳ್ಳುವಂತೆ ಚಾವಿಸನಿನಿ, ವಿ.ವಿ ಮೊಹಲ್ಲಾ ಕಾ ಮತ್ತು ಪಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಕಲಚೇತನರಿಗಾಗಿ 'ಸಾಂಸ್ಕೃತಿಕ ಸಂಜೆ'–2026; ವಿವಿಧ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಣೆ



'ವಿಕಲಚೇತನರಿಗಾಗಿ ಸಾಂಸ್ಕೃತಿಕ ಸಂಜೆ' – 2026ರ ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು, ಫೆ.16(ಎಸ್‌ಪಿಎನ್)– ಸಮರ್ಥನಂ ಸಂಸ್ಥೆ ವತಿಯಿಂದ ಹಮ್ಮಿಕೊಂಡಿದ್ದ 'ವಿಕಲಚೇತನರಿಗಾಗಿ ಸಾಂಸ್ಕೃತಿಕ ಸಂಜೆ' – 2026ರ ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಮೈಸೂರು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕೆ.ಎಸ್. ರಾಘವೇಂದ್ರ ಬಹುಮಾನ ವಿತರಿಸಿದರು.

ಮೈಸೂರು ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಸಮರ್ಥನಂ ಅಂಗವಿಕಲರ ಸಂಸ್ಥೆ ವತಿಯಿಂದ ಏರ್ಪಡಿಸಿದ್ದ ಎರಡು ದಿನಗಳ 'ವಿಕಲಚೇತನರಿಗಾಗಿ ಸಾಂಸ್ಕೃತಿಕ ಸಂಜೆ' ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಿದರು.

ಕಪ್ಪೆ ಓಟ ಸ್ಪರ್ಧೆಯಲ್ಲಿ ಭಾಸ್ಕರ್ (ಪ್ರ), ಹೃಂಧನಾಥ್(ದ್ವಿ), ಶ್ರೀಕರ ತೃತೀಯ ಸ್ಥಾನ ಪಡೆದರೆ, **ಲೆಮನ್ ಅಂಡ್ ಸ್ಪೂನ್ ಸ್ಪರ್ಧೆಯಲ್ಲಿ** ವಿದ್ಯಾರ್ಥಿಗಳಾದ ಆರ್.ಶ್ರೇಯಸ್ (ಪ್ರ), ಭಾಸ್ಕರ್ (ದ್ವಿ), ರಾಘವೇಂದ್ರ ತೃತೀಯ ಸ್ಥಾನ ಪಡೆದರು. ಲೆಮನ್ ಅಂಡ್ ಸ್ಪೂನ್ ಸ್ಪರ್ಧೆಯಲ್ಲಿ ವಿದ್ಯಾರ್ಥಿನಿಯರಾದ ನಿರೀಕ್ಷಾ (ಪ್ರ), ತನುಶ್ರೀ(ದ್ವಿ), ಮಾನಸ ತೃತೀಯ ಸ್ಥಾನ ಪಡೆದು ಬಹುಮಾನ ತಮ್ಮದಾಗಿಸಿಕೊಂಡರು.


ರನ್ನಿಂಗ್ ರೇಸ್ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳಾದ ಆರ್.ಶ್ರೇಯಸ್ (ಪ್ರ), ಭಾಸ್ಕರ್ (ದ್ವಿ), ಶ್ರೀಕರ(ತೃ) ಸ್ಥಾನ ಪಡೆದರೆ, ವಿದ್ಯಾರ್ಥಿನಿಯರಾದ ನಿರೀಕ್ಷಾ (ಪ್ರ), ತನುಶ್ರೀ (ದ್ವಿ), ಮಾನಸ(ತೃ) ಸ್ಥಾನ ಪಡೆದಿದ್ದಾರೆ. **ಪಾಸಿಂಗ್ ದಿ ಬಾಲ್** ಸ್ಪರ್ಧೆಯಲ್ಲಿ ಕಿರಣ್(ಪ್ರ), ಗೌತಮ್(ದ್ವಿ), ಅರ್ಪಿತಾ(ತೃ) ಸ್ಥಾನ ಪಡೆದಿದ್ದಾರೆ. **ಬಕೆಟ್ ಇನ್ ದ ಬಾಲ್** ಸ್ಪರ್ಧೆಯಲ್ಲಿ ಗೌತಮ್(ಪ್ರ), ಅಸ್ಮಿತ್ (ದ್ವಿ), ಅಮೃತ್(ತೃ), ಸ್ಥಾನ ಪಡೆದಿದ್ದಾರೆ. **ಮ್ಯೂಜಿಕಲ್ ಚೇರ್ ಸ್ಪರ್ಧೆಯಲ್ಲಿ** ವಿನಯ್(ಪ್ರ), ವಿದ್ಯಾರ್ಥಿನಿ ಚಸ್ಮಿತ(ದ್ವಿ), ಕೇಶವ್(ತೃ) ಸ್ಥಾನ ಪಡೆದಿದ್ದಾರೆ.

ವಿದ್ಯಾರ್ಥಿಗಳ ಪೋಷಕರಿಗಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ರಂಗಸ್ವಾಮಿ (ಪ್ರ), ಆಶಾ(ದ್ವಿ), ಗೀತಾ(ತೃ) ಸ್ಥಾನ ಪಡೆದಿದ್ದಾರೆ. **ನೀಡಲ್ ಅಂಡ್ ಥ್ರೆಡ್ ಸ್ಪರ್ಧೆಯಲ್ಲಿ** ರಮ್ಯಾ(ಪ್ರ), ಲಕ್ಷ್ಮಿ(ದ್ವಿ), ಗೀತಾ (ತೃ) ಸ್ಥಾನ ಪಡೆದಿದ್ದಾರೆ. **ಮ್ಯೂಜಿಕಲ್ ಸ್ಪರ್ಧೆಯಲ್ಲಿ** ವೈದೇಹಿ(ಪ್ರ), ಲಕ್ಷ್ಮೀ(ದ್ವಿ), ವಿಜಯಲಕ್ಷ್ಮಿ(ತೃ), ಸ್ಥಾನ ಪಡೆದಿದ್ದಾರೆ. ಎಚ್‌ಐಪಿ ವಿದ್ಯಾರ್ಥಿಗಳಾಗಿ **ಬ್ಲಾಸ್ಟ್ ದಿ ಬಲೂನ್ಸ್ ಸ್ಪರ್ಧೆಯಲ್ಲಿ** ರಜತ್(ಪ್ರ), ಶ್ವೇತ(ದ್ವಿ), ಮಾನ್ಯವಿ(ತೃ) ಸ್ಥಾನ ಪಡೆದು ಬಹುಮಾನ ತಮ್ಮದಾಗಿಸಿಕೊಂಡಿದ್ದಾರೆ.

ಬಹುಮಾನ ವಿತರಿಸಿ ಮಾತನಾಡಿದ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕೆ.ಎಸ್.ರಾಘವೇಂದ್ರ, ವಿಶೇಷ ಚೇತನ ಮಕ್ಕಳಿಗೆ ಇತರೆ ಮಕ್ಕಳಂತೆ ಬದುಕಲು ಹೋರಾಟ ನಡೆಸುವುದು ಅನಿವಾರ್ಯ. ಇದರ ಜೊತೆಗೆ ಪೋಷಕರೂ ಸಹ ಅಷ್ಟೇ ಪ್ರಮಾಣ ತಮ್ಮ ಮಕ್ಕಳ ಏಳಿಗೆಗಾಗಿ ಶ್ರಮವಹಿಸುತ್ತಿರುವುದು ಸಂತೋಷ ವಿಷಯ ಎಂದರಲ್ಲದೆ, ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳಲ್ಲೂ ಸಮರ್ಥನಂ ಶಾಲೆ ಶಿಕ್ಷಕರು ಬಹಳ ತಾಳ್ಮೆಯಿಂದ ಮಕ್ಕಳಿಗೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ತೊಡಗಿಸಿ, ತರಬೇತಿ ನೀಡುತ್ತಿರುವುದು ಸಂತಸದ ವಿಷಯ ಎಂದರು.

ಈ ವೇಳೆ ಶೇಷಾದ್ರಿಪುರಂ ಪದವಿ ಕಾಲೇಜು ಪ್ರಾಂಶುಪಾಲರಾದ ಡಾ.ಲೆ. ಸೌಮ್ಯ ಈರಪ್ಪ, ಸಮರ್ಥನಂ ಅಂಗವಿಕಲರ ಸಂಸ್ಥೆಯ ಮುಖ್ಯಕಾರ್ಯಕ್ರಮಾಧಿಕಾರಿ ಶಿವರಾಂ ದೇಶಪಾಂಡೆ, ದೇವರಾಜ್, ಗುರುರಾಘವೇಂದ್ರ, ಗೀತಾ, ಶ್ರೀನಿವಾಸ ರೆಡ್ಡಿ, ಮೈಸೂರು ವಿಭಾಗೀಯ ಮುಖ್ಯಸ್ಥರಾದ ಶಿವರಾಜ್ ಹಾಗೂ ಸಮರ್ಥನಂ ಅಂಗವಿಕಲರ ಸಂಸ್ಥೆ ಬೋಧಕ ಮತ್ತು ಬೋಧಕೇತರ ವೃಂದ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು.

ಡಾ.ಜೆ.ಜಿ.ವಿಶ್ವನಾಥಯ್ಯ ನಿಧನ



ಮೈಸೂರು, ಫೆ.16– ಮೈಸೂರಿನ ರಾಮಕೃಷ್ಣನಗರದ ಐ–ಬ್ಲಾಕ್, 2ನೇ ಕ್ರಾಸ್ ನಿವಾಸಿ, ಮೈಸೂರು ಸರ್ಕಾರಿ ಆಯುರ್ವೇದ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು, ಆಧ್ಯಾ ಕೋ–ಆಪರೇಟಿವ್ ಬ್ಯಾಂಕ್‌ನ ಸಂಸ್ಥಾಪಕ ಅಧ್ಯಕ್ಷ ಡಾ.ಜೆ.ಜಿ.ವಿಶ್ವನಾಥಯ್ಯ(82) ಅವರು ಸೋಮವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು.

ಇವರು ಪತ್ನಿ, ಇಬ್ಬರು ಪುತ್ರಿಯರು, ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಸಂಸ್ಕಾರ ಇಂದು ಸಂಜೆ ಕನ್ನೇಗೌಡ ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಹುಣಸೂರು ಶಾಸಕ ಜಿ.ಡಿ.ಹರೀಶ್ ಗೌಡ, ಮಾಜಿ ಸಂಸದ ಸಿ.ಎಸ್.ಪುಟ್ಟರಾಜು, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಬಿಜೆಪಿ ಮುಖಂಡ ಕವೀಶ್ ಗೌಡ ಸೇರಿದಂತೆ ಹಲವು ಗಣ್ಯರು ಅಂತಿಮ ದರ್ಶನ ಪಡೆದು, ಕುಟುಂಬದವರಿಗೆ ಸಾಂತ್ವನ ಹೇಳಿದರು.

ಕುಮಾರಸ್ವಾಮಿ



ಮೈಸೂರು,ಫೆ.16– ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಬೇಬಿ ಗ್ರಾಮದ ನಿವಾಸಿ ಕುಮಾರಸ್ವಾಮಿ (72) ಭಾನುವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆಯು ಸ್ವಗ್ರಾಮದ ಮೃತರ ತೋಟದಲ್ಲಿ ಸೋಮವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

‘ಶಕ್ತಿ’ ಸ್ಮಾರ್ಟ್ ಕಾರ್ಡ್ ಮೆಟ್ರೋ ಸೇರಿ ಎಲ್ಲಾ ಸಾರಿಗೆಗೂ ಬಳಕೆಗೆ ಅವಕಾಶ

ಆಧಾರ್ ತೋರಿಸುವ ಬದಲು ಸ್ವೈಪ್ ಮಾಡಿ ಟಿಕೆಟ್ ಪಡೆಯುವ ವ್ಯವಸ್ಥೆ



ಬೆಂಗಳೂರು: ಕೆಎಸ್‌ಆರ್‌ಟಿಸಿ ಸೇರಿ ನಾಲ್ಕು ಸಾರಿಗೆ ನಿಗಮಗಳಲ್ಲಿ ‘ಶಕ್ತಿ’ ಯೋಜನೆಯಡಿ ಸಂಚರಿಸುವ ಫಲಾನುಭವಿಗಳಿಗೆ ಸರ್ಕಾರ ನೀಡಲಿರುವ ಸ್ಮಾರ್ಟ್‌ಕಾರ್ಡ್ ಮೆಟ್ರೊ ಸೇರಿದಂತೆ ಎಲ್ಲಾ ಸಾರ್ವಜನಿಕ ಸಾರಿಗೆಗಳ ‘ಲ್ಲಿಯೂ ಬಳಕೆಯಾಗಲಿದೆ.

ಸ್ಮಾರ್ಟ್ ಕಾರ್ಡ್ ಅನ್ನು ಬಸ್ ನಿರ್ವಾಹಕರಿಗೆ ತೋರಿಸಿ ಟಿಕೆಟ್ ಪಡೆಯುವ ಬದಲು, ಇಟಿಎಂನಲ್ಲಿ ಸ್ವೈಪ್ ಮಾಡಿ ಟಿಕೆಟ್ ಪಡೆಯುವ ವ್ಯವಸ್ಥೆ ಇದಾಗಿದೆ. ‘ಶಕ್ತಿ’ ಸ್ಮಾರ್ಟ್‌ಕಾರ್ಡ್ ನ್ಯಾಷನಲ್ ಕಾಮನ್ ಮೊಬಿಲಿಟಿ ಕಾರ್ಡ್ (ಎನ್‌ಸಿಎಂಸಿ) ಕೂಡಾ ಆಗಿರುತ್ತದೆ. ಇದರಲ್ಲಿ ಪ್ರಯಾಣಿಕರ ಮಾಹಿತಿ ಇರುವ ಚಿಪ್ ಅಳವಡಿಕೆಯಾಗಿರುತ್ತದೆ.

‘ಸ್ಮಾರ್ಟ್ ಚಿಪ್‌ನಲ್ಲಿ ಫಲಾನುಭವಿಗಳ ಇ–ಕೆವೈಸಿ ಮಾಡಲಾಗುತ್ತದೆ. ಇದರಿಂದ ಉಚಿತವಾಗಿ ಯಾರು ಪ್ರಯಾಣಿಸುತ್ತಿದ್ದಾರೆ ಎಂಬ ಮಾಹಿತಿ ದೊರೆಯಲಿದೆ. ಜೊತೆಗೆ ವಾಲೆಟ್ ಮೂಲಕ ಹಣ ತುಂಬಬಹುದಾಗಿರುವುದರಿಂದ ನಮ್ಮ ಮೆಟ್ರೊ ಅಥವಾ ದೇಶದ ಯಾವುದೇ ಮೆಟ್ರೊದಲ್ಲಿ ಮೆಟ್ರೊ ಕಾರ್ಡ್‌ನಂತೆಯೂ ಇದನ್ನು ಬಳಸಬಹುದು. ಟಿಕೆಟ್ ದರವು ವಾಲೆಟ್‌ನಿಂದ ಕಡಿತವಾಗುತ್ತದೆ. ವಿವಿಧ ಸಾರಿಗೆ ನಿಗಮಗಳ ಶಕ್ತಿ ಯೋಜನೆ ಅನ್ವಯವಾಗದ ಬಸ್‌ಗಳಲ್ಲಿಯೂ ಇದೇ ಕಾರ್ಡ್ ಮೂಲಕ ಟಿಕೆಟ್ ದರ ಪಾವತಿಸಲು ಅವಕಾಶ ಇರಲಿದೆ ಎಂದು ಶಕ್ತಿ ಸ್ಮಾರ್ಟ್ ಕಾರ್ಡ್ ನೋಡಲ್ ಅಧಿಕಾರಿಯೂ ಆಗಿರುವ ಕೆಎಸ್‌ಆರ್‌ಟಿಸಿಯ ಮುಖ್ಯ ಕಾರ್ಯನಿರ್ವಾಹಕ ವ್ಯವಸ್ಥಾಪಕ (ವಾಣಿಜ್ಯ) ರಾಜೇಶ್ ಮಾಹಿತಿ ನೀಡಿದರು.

ಶಕ್ತಿ ಯೋಜನೆಯಡಿ ನಾಲ್ಕು ಸಾರಿಗೆ ನಿಗಮಗಳ ಬಸ್‌ಗಳಲ್ಲಿ ನಿತ್ಯ ಸರಾಸರಿ 75.68 ಲಕ್ಷ ಮಹಿಳೆಯರು ಉಚಿತವಾಗಿ ಪ್ರಯಾಣಿಸುತ್ತಿದ್ದಾರೆ. ರಾಜ್ಯದ ಮಹಿಳೆಯರಿಗಷ್ಟೇ ಈ ಯೋಜನೆ ಇರುವುದು. ಬೇರೆ ರಾಜ್ಯಗಳ ಮಹಿಳೆಯರು ನಕಲಿ ಆಧಾರ್ ಕಾರ್ಡ್ ಬಳಸಿ ಸಂಚರಿಸಿದರೂ ಗೊತ್ತಾಗುವುದಿಲ್ಲ. ಸ್ಮಾರ್ಟ್‌ಕಾರ್ಡ್ ಬಂದರೆ ನಕಲಿ ಕಾರ್ಡ್ ಬಳಕೆ ಸಾಧ್ಯವಿಲ್ಲ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಮಾರ್ಟ್ ಇಟಿಎಂ: ಕೆಎಸ್‌ಆರ್‌ಟಿಸಿಯಲ್ಲಿ ಈಗಾಗಲೇ ಸ್ವೈಪ್ ಮಾಡಿ ಟಿಕೆಟ್ ದರ ಪಾವತಿಸಬಹುದಾದ ಸ್ಮಾರ್ಟ್ ಇಟಿಎಂ (ಎಲೆಕ್ಟ್ರಾನಿಕ್ ಟಿಕೆಟ್ ಮಷೀನ್) ಇದೆ. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಎನ್‌ಡಬ್ಲ್ಯುಆರ್‌ಟಿಸಿ) ಮತ್ತು ಬಿಎಂಟಿಸಿಯ ಕೆಲವು ಮಾರ್ಗಗಳಲ್ಲಿ ಯುನಿಫೈಡ್ ಪೇಮೆಂಟ್ ಇಂಟರ್‌ಫೇಸ್ (ಯುಪಿಐ) ಮೂಲಕ ಟಿಕೆಟ್ ದರ ಪಾವತಿ ಮಾಡುವ ಪದ್ಧತಿ ಜಾರಿಯಲ್ಲಿದೆ. ಈ ಮಷೀನ್‌ನಲ್ಲಿ ‘ಶಕ್ತಿ’ ಸ್ಮಾರ್ಟ್‌ಕಾರ್ಡ್ ಬಳಸಲು ಸಾಧ್ಯವಿಲ್ಲ. ಎನ್‌ಡಬ್ಲ್ಯುಆರ್‌ಟಿಸಿ, ಬಿಎಂಟಿಸಿ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ (ಕೆಕೆಆರ್‌ಟಿಸಿ) ಶೀಘ್ರದಲ್ಲಿಯೇ ಸ್ಮಾರ್ಟ್ ಇಟಿಎಂ ಅನುಷ್ಠಾನಗೊಳ್ಳಲಿದೆ ಎಂದು ಸಾರಿಗೆ ಅಧಿಕಾರಿಗಳು ವಿವರಿಸಿದ್ದಾರೆ.

ಉಚಿತವಾಗಿ ಇಲ್ಲವೇ ದರ ಪಾವತಿಸಿ ಪ್ರಯಾಣಿಸುವವರ ನಿರ್ವಹಣೆಯನ್ನು ಸುಗಮಗೊಳಿಸಲು ಶಕ್ತಿ ಸ್ಮಾರ್ಟ್‌ಕಾರ್ಡ್ ಅನುಷ್ಠಾನಗೊಳಿಸಲಾಗುತ್ತಿದೆ. ಏಕೀಕೃತ ಮತ್ತು ಪರಸ್ಪರ ಕಾರ್ಯನಿರ್ವಹಿಸಬಹುದಾದ ಶುಲ್ಕ ಸಂಗ್ರಹಣಾ ವ್ಯವಸ್ಥೆಯನ್ನು ಇದು ಸುಗಮಗೊಳಿಸಲಿದೆ ಎಂದು ಹೇಳಿದ್ದಾರೆ.

ಸ್ಮಾರ್ಟ್‌ಕಾರ್ಡ್ ಉಚಿತ ವಿತರಣೆ: ಸ್ಮಾರ್ಟ್‌ಕಾರ್ಡ್‌ಗೆ ಸರ್ಕಾರ ಅನುಮೋದನೆ ನೀಡಿದೆ. ಫಲಾನುಭವಿಗಳಿಗೆ ಸರ್ಕಾರ ಉಚಿತವಾಗಿಯೇ ಕಾರ್ಡ್ ಒದಗಿಸಲಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು. ಸ್ಮಾರ್ಟ್ ಕಾರ್ಡ್‌ಗೆ ಸಂಬಂಧಿಸಿದ ಮಾರ್ಗಸೂಚಿ ರೂಪಿಸಬೇಕು. ಟೆಂಡರ್ ಪ್ರಕ್ರಿಯೆಗಳು ನಡೆಯಬೇಕು. ಇದು 10 ಕೋಟಿಗಿಂತ ಅಧಿಕ ವೆಚ್ಚದ ಯೋಜನೆ ಆಗಿರುವುದರಿಂದ ಪುನಃ ಸಚಿವ ಸಂಪುಟದ ಅನುಮೋದನೆ ಪಡೆಯಬೇಕಾಗುತ್ತದೆ. ಈ ಎಲ್ಲ ಪ್ರಕ್ರಿಯೆಗಳಿಗೆ ಕೆಲವು ತಿಂಗಳು ಬೇಕು. ಹಾಗಾಗಿ ಅಲ್ಲಿಯವರೆಗೆ ಆಧಾರ್ ಕಾರ್ಡ್ ತೋರಿಸಿ ಸಂಚರಿಸುವ ಈಗಿನ ವ್ಯವಸ್ಥೆ ಮುಂದುವರಿಯಲಿದೆ ಎಂದರು.

ಸ್ಮಾರ್ಟ್‌ಕಾರ್ಡ್‌ಗಳಲ್ಲಿ ಫಲಾನುಭವಿಗಳ ವಯಸ್ಸು ವಿಳಾಸ ಸಹಿತ ಎಲ್ಲ ಮಾಹಿತಿ ಇರುವುದರಿಂದ ‘ಶಕ್ತಿ’ ಯೋಜನೆಯಡಿ ಪ್ರಯಾಣಿಸಿದವರಲ್ಲಿ ಮಕ್ಕಳೆಷ್ಟು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಿಂದುಳಿದ ವರ್ಗ ಸಾಮಾನ್ಯ ವರ್ಗದ ಮಹಿಳೆಯರು ಎಷ್ಟು ಎಂಬ ಅಂಕಿ–ಅಂಶಗಳು ನಿಖರವಾಗಿ ಸಿಗಲಿದೆ ಎಂದು ಮಾಹಿತಿ ನೀಡಿದರು. ಸ್ಮಾರ್ಟ್‌ಕಾರ್ಡ್ ನ್ಯಾಷನಲ್ ಕಾಮನ್ ಮೊಬಿಲಿಟಿ ಕಾರ್ಡ್ ಲಭ್ಯವಾಗಲಿದೆ ಫಲಾನುಭವಿಗಳ ನಿಖರ ಮಾಹಿತಿ ಅನುಷ್ಠಾನಕ್ಕೆ ಬೇಕು ಕನಿಷ್ಠ 6 ತಿಂಗಳು.

ಇಂದು ಬಾಂಗ್ಲಾದೇಶದ ನೂತನ ಪ್ರಧಾನಿಯಾಗಿ ತಾರಿಕ್ ರೆಹಮಾನ್ ಪ್ರಮಾಣ ವಚನ ಸ್ವೀಕಾರ



ಢಾಕಾ: ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ(ಬಿಎನ್‌ಪಿ) ಅಧ್ಯಕ್ಷ ತಾರಿಕ್ ರೆಹಮಾನ್(60) ಅವರು ಮಂಗಳವಾರ ಬಾಂಗ್ಲಾದೇಶದ ನೂತನ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಇತ್ತೀಚಿಗೆ ನಡೆದ ಬಾಂಗ್ಲಾದೇಶ ರಾಷ್ಟ್ರೀಯ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿರುವ ಬಿಎನ್‌ಪಿ ಸರ್ಕಾರ ರಚನೆಗೆ ಸಿದ್ಧತೆಗಳನ್ನು ಭರದಿಂದ ಆರಂಭಿಸಿದೆ.

ಈ ಬಾರಿ ಪ್ರಮಾಣ ವಚನ ಸ್ವೀಕಾರ ಸಮಾರಂಭವನ್ನು ದೀರ್ಘಕಾಲದ ಸಂಪ್ರದಾಯವನ್ನು ಮುರಿದು ಬಂಗಭಬನ್ ಬದಲಿಗೆ ಸಂಸತ್ ಸಂಕೀರ್ಣದ ದಕ್ಷಿಣ ಪ್ಲಾಜಾದಲ್ಲಿ ನಡೆಸಲಾಗುತ್ತಿದೆ.

ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರು ಜಾತಿಯಾ ಸಂಗ್ಸದ್‌ನ ದಕ್ಷಿಣ ಪ್ಲಾಜಾದಲ್ಲಿ ಹೊಸ ಸಂಪುಟ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಲಿದ್ದಾರೆ. ಸಂಸದೀಯ ಸಚಿವಾಲಯವು ಮಂಗಳವಾರ ಸಂಜೆ 4 ಗಂಟೆಗೆ ಹೊಸ ಸಂಪುಟ ಸದಸ್ಯರ ಪ್ರಮಾಣ ವಚನ ಸ್ವೀಕಾರ ಸಮಾರಂಭವನ್ನು ನಡೆಸಲಿದೆ. ಇದಕ್ಕೂ ಮೊದಲು, ಸಂಸತ್ ಸದಸ್ಯರು (ಸಂಸದರು) ಬೆಳಗ್ಗೆ 10 ಗಂಟೆಗೆ ಜಾತಿಯಾ ಸಂಗ್ಸದ್ ಸಂಕೀರ್ಣದ ದಕ್ಷಿಣ ಪ್ಲಾಜಾದಲ್ಲಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ' ಎಂದು ಜಾತಿಯಾ ಸಂಗ್ಸದ್ ಸಚಿವಾಲಯದ ಕಾರ್ಯದರ್ಶಿ ಕನಿಜ್ ಮೌಲಾ ಬಿಎಸ್‌ಎಸ್‌ಗೆ ತಿಳಿಸಿದ್ದಾರೆ.

ಗಮನಾರ್ಹವಾಗಿ, ಸಂಸದೀಯ ಪಕ್ಷದ ನಾಯಕನನ್ನು ಆಯ್ಕೆ ಮಾಡಲು ಬಿಎನ್‌ಪಿ ನಾಳೆ ಬೆಳಗ್ಗೆ 11:30ಕ್ಕೆ ಸಂಸತ್ ಕಟ್ಟಡದಲ್ಲಿ ಸಂಸದೀಯ ಪಕ್ಷದ ಸಭೆಯನ್ನು ಕರೆದಿದೆ.

"ಬಹುಮತ ಪಡೆದ ಪಕ್ಷದ ನಾಯಕರಾಗಿ, ನಮ್ಮ ಪಕ್ಷದ ಅಧ್ಯಕ್ಷ ತಾರಿಕ್ ರೆಹಮಾನ್ ಪ್ರಧಾನಿಯಾಗುತ್ತಾರೆ" ಎಂದು ಬಿಎನ್‌ಪಿಯ ಸ್ಥಾಯಿ ಸಮಿತಿಯ ಸದಸ್ಯ ಸಲಾಹ್ ಉದ್ದೀನ್ ಅಹ್ಮದ್ ಅವರು ಹೇಳಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಡಜನ ಅಂಚೆ, ಏಳಿಗೆಹುಂಡಿ ಗ್ರಾಮದಲ್ಲಿ ವಾಸವಾಗಿರುವ ಶ್ರೀ ಚಿಕ್ಕೈದ ಉರುಫ್ ಮೂಗಯ್ಯರವರ ಧರ್ಮಪತ್ನಿಯಾದ ಶ್ರೀಮತಿ ಮಹಾದೇವಿ ಮತ್ತು ಇವರ ಮಗನಾದ ಶ್ರೀ ಸಿದ್ದರಾಜು.ಸಿ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ವಿಚಾರದಲ್ಲಿ ಮೇಲೆ ಕಾಣಿಸಿದ ವ್ಯಕ್ತಿಗಳಲ್ಲದೆ ಬೇರೆ ಯಾರಿಗಾದರೂ, ಯಾವುದೇ ರೀತಿಯ ಹಕ್ಕಾಗಲಿ ಹಿತಾಸಕ್ತಿಯಾಗಲೀ ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ ಈ ಕೆಳಕಂಡವರನ್ನು ಈ ದಿನದಿಂದ ಏಳು (7) ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ಸಂಪರ್ಕಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮೇಲೆ ಕಾಣಿಸಿದವರಿಗಲ್ಲದೆ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿಯಾಗಲೀ ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುತ್ತಾರೆ.

ಷೆಡ್ಯೂಲ್ ಸ್ವತ್ತು

ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಹಡಜನ ಗ್ರಾಮಕ್ಕೆ ಸೇರಿದ ಸ. ನಂ. 23/5 ರಲ್ಲಿರುವ ವಿಸ್ತೀರ್ಣ 01 ಎಕರೆ ಜಮೀನಿಗೆ ಚಕ್ಕುಬಂಧಿ:– ಪೂರ್ವಕ್ಕೆ: ಸ.ನಂ. 23/3 ರ ಜಮೀನು ; ಪಶ್ಚಿಮಕ್ಕೆ: ಸ.ನಂ. 16 ರ ಜಮೀನು ; ಉತ್ತರಕ್ಕೆ: ಸ.ನಂ. 23/4 ರ ಜಮೀನು ; ದಕ್ಷಿಣಕ್ಕೆ: ಸ.ನಂ. 23/1 ರ ಜಮೀನು.

Sd/- B.V. Manoj, B.A.L.. LL.B..
Advocate, Dwaitha Law Chambers, 28/A, Venkatadri MIG Nrupatunga Road, KHB, Kuvempunagar 2nd Stage, Mysore-570023. Mob: 99451-04646. manojbv8@gmail.com
ದಿನಾಂಕ: 14–02–2026
ಸ್ಥಳ: ಮೈಸೂರು

ಸಾರ್ವಜನಿಕ ತಿಳುವಳಿಕೆ ಪತ್ರ

ನಮ್ಮ ಕಕ್ಷಿದಾರರು ಮೈಸೂರು ಸಿಟಿ ರಾಮಕೃಷ್ಣ ನಗರ, ಎಚ್ ಬ್ಲಾಕ್, ಎರಡನೇ ಮೈನ್, ಮೂರನೇ ಕ್ರಾಸ್, ಪುನೀತ್ ಕನ್ವೆನ್ಷನ್ ಹಾಲ್ ಹತ್ತಿರ ಮನೆ ನಂ. 129ರಲ್ಲಿ ವಾಸವಾಗಿರುವ ಲೇಟ್ ಎಸ್. ಪಾಪಣ್ಣರವರ ಮಗ ಶ್ರೀ ಶ್ರೀನಿವಾಸ ಹಾಗೂ ಮೈಸೂರು ಸಿಟಿ, ಶ್ರೀರಾಂಪುರ, ಒಂದನೇ ಹಂತ, ಏಳನೇ ಮುಖ್ಯ ರಸ್ತೆ, 12ನೇ ಕ್ರಾಸ್, ಮನೆ ನಂ. ಎ67 ರಲ್ಲಿ ವಾಸವಾಗಿರುವ ಶ್ರೀ ಟಿ. ಎಂ. ಚಂದ್ರಶೇಖರ್ ವರ ಮಗ ಶ್ರೀ ಎಂ.ಸಿ. ಪ್ರಶಾಂತ್ ರವರಿಂದ ಷೆಡ್ಯೂಲ್ ಆಸ್ತಿಯನ್ನು ಖರೀದಿ ಮಾಡಿಕೊಳ್ಳಲು ಒಪ್ಪಂದ ಮಾಡಿಕೊಂಡಿದ್ದು ಈ ಕ್ರಯದ ವ್ಯವಹಾರಕ್ಕೆ ಯಾರದಾದರೂ ಯಾವುದಾದರೂ ತಕರಾರು ಅಥವಾ ಈ ಆಸ್ತಿಯ ಬಗ್ಗೆ ಹಕ್ಕು ಬಾಧ್ಯತೆಗಳಿದ್ದಲ್ಲಿ ಈ ತಿಳುವಳಿಕೆ ಪತ್ರ ಪ್ರಕಟವಾದ ಒಂದು ವಾರದ ಒಳಗಾಗಿ ಲಿಖಿತವಾಗಿ ಅದಕ್ಕೆ ಸಂಬಂಧಿಸಿದ ದಾಖಲಾತಿಗಳೊಡನೆ ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಕಾನೂನುಬದ್ಧ ತಕರಾರು ಬರದಿದ್ದಲ್ಲಿ ಈ ವ್ಯವಹಾರಕ್ಕೆ ಯಾರದು ಯಾವ ಆಕ್ಷೇಪಣೆಯೂ ಇಲ್ಲ ಎಂದು ತಿಳಿದು ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸಲಾಗುವುದು – ಮತ್ತು ನಂತರ ಬರುವ ಯಾವ ತಕರಾರಿಗು ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂದು ತಿಳಿಯುವುದು.

ಷೆಡ್ಯೂಲ್: ಮೈಸೂರು ತಾಲೂಕು, ಜಯಪುರ ಹೋಬಳಿ, ಕೇರಗಳ್ಳಿ ಗ್ರಾಮದ ವಸತಿ ಉದ್ದೇಶಕ್ಕೆ ಅನ್ಯ ಕ್ರಾಂತವಾಗಿರುವ ಸರ್ವೆ ನಂ. 209/12 ರಲ್ಲಿ $9^1/_4$ ಗುಂಟೆ, ಆಸ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ಹಳ್ಳ ; ಪಶ್ಚಿಮಕ್ಕೆ: ಸರ್ವೆ ನಂ. 209/9 ಜಮೀನು ; ಉತ್ತರಕ್ಕೆ: ಸರ್ವೆ ನಂ. 6209/2 ಜಮೀನು ; ದಕ್ಷಿಣಕ್ಕೆ : ರಸ್ತೆ.

Sd/- O. Shama Bhat, B.A., LL.B
O. Sathisha, B.Sc., LL.B.
Advocates, No. 20/C, 2nd Floor, Near Airlines Hotel, Jayalakshmi Vilas Road, Chamarajapuram, Mysuru-05.
Ph: 0821-426475. Email: shamsathisha@gmail.com
Date: 16-02-2026

ಹಸಿರು ನಮ್ಮ ಉಸಿರು

ಸಾರ್ವಜನಿಕರ ಗಮನಕ್ಕಾಗಿ

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಬೋಗಾದಿ ಗ್ರಾಮದ ನಮ್ಮ ಕಕ್ಷಿದಾರರಾದ ಲೇಟ್ ಸಿದ್ದೇಗೌಡ ರವರ ಮಗ ಸಿದ್ದೇಗೌಡ ರವರ ಇರಾದೆಯ ಮೇರೆಗೆ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಬೋಗಾದಿ ಗ್ರಾಮದ ಪಟ್ಟಣ ಪಂಚಾಯ್ತಿಗೆ ಸೇರಿದ. ಬೋಗಾದಿ ಗ್ರಾಮದ ಬಸವೇಶ್ವರ ಬಡಾವಣೆಯಲ್ಲಿ ಸರ್ಕಾರದ ವತಿಯಿಂದ ಆಶ್ರಯ ನಿವೇಶನಗಳನ್ನು ನಿರ್ಮಿಸಲಾಗಿದ್ದು, ನಂ.319 ರಲ್ಲಿ ಒಟ್ಟು ವಿಸ್ತೀರ್ಣ 6 ಎಕರೆ 12 ಗುಂಟೆ–ಯಾಗಿದ್ದು. ಅದನ್ನು ಕಡು ಬಡವರಿಗಾಗಿಯೇ ಹಂಚಿಕೆ ಮಾಡಲು ತೀರ್ಮಾನಿಸಿದ್ದು. ನಿರ್ಮಿಸಲಾಗಿರುವ ಬಡಾವಣೆಯಾಗಿರುತ್ತದೆ. ಅದರಲ್ಲಿ ಕೇವಲ 357 ನಿವೇಶನಗಳು ಕೆಲವು ನಿಬಂಧನೆಗಳೊಂದಿಗೆ ಅಂದರೆ ಹಂಚಿಕೆಯಾದ 25 ವರ್ಷಗಳ ಕಾಲ ಯಾರಿಗೂ ಮಾರಾಟ ಮಾಡಬಾರದೆಂಬ ನಿಯಮದೊಂದಿಗೆ ಮಾತ್ರ ಸರ್ಕಾರದಿಂದ ಅಂಗೀಕೃತವಾಗಿರುವುದು. ಆದರೆ ಬೋಗಾದಿ ಗ್ರಾಮ ಪಂಚಾಯಿತಿ ಅಧಿಕಾರಿಗಳು ಇತರ ಸ್ಥಳಿಯರೊಂದಿಗೆ ಶಾಮೀಲಾಗಿ ನಿವೇಶನ ಸಂಖ್ಯೆ ಉದಾಹರಣೆಗೆ 190/ಎ, 290/ಎ, 263/ಎ, 317/ಬಿ, 301/ಎ, 321/ಬಿ. 258/ಎ ಮತ್ತು 275/ಎ. 175/ಎ ಎಂಬ ಅನಧಿಕೃತ ನಿವೇಶನಗಳನ್ನು ನಕಲಿ ದಾಖಲಾತಿಗಳ ಸಹಾಯದಿಂದ ನಿವೇಶನಗಳಾಗಿ ಸೃಷ್ಟಿ ಮಾಡಿಕೊಂಡು ಮೊಸದಿಂದ ಹಣವನ್ನು ಸಂಪಾದನೆ ಮಾಡುವ ಉದ್ದೇಶದಿಂದ ಹಂಚಿಕೆ ಮಾಡುತ್ತಾ ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆ. ಹಾಗೂ ಈ ನಿವೇಶನಗಳಲ್ಲಿ ಅಕ್ರಮವಾಗಿ ಕೆಲವರು ಮನೆಗಳನ್ನು ಸಹ ನಿರ್ಮಾಣ ಮಾಡುತ್ತಿದ್ದಾರೆ. ಆದರೆ ಈ ನಿವೇಶನಗಳನ್ನು ಬೋಗಾದಿ ಗ್ರಾಮ ಪಂಚಾಯಿತಿಯಿಂದ ಅಧಿಕೃತವಾಗಿ ಯಾರಿಗೂ ಸಹ ಹಂಚಿಕೆ ಮಾಡಿರುವುದಿಲ್ಲ ಹಾಗೂ ಇದಕ್ಕೆ ಸರ್ಕಾರದ ಮಾನ್ಯತೆಯೂ ಸಹ ಇರುವುದಿಲ್ಲ. ಈ ಸಂಬಂಧ ಮೈಸೂರಿನ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 1631/2025 ರ ಪ್ರಕರಣವು ತೀರ್ಮಾನಕ್ಕಾಗಿ ಬಾಕಿ ಇದ್ದು, ಸದರಿ ಪ್ರಕರಣದಲ್ಲಿ ನಮ್ಮ ಕಕ್ಷಿದಾರರಾದ ಸಿದ್ದೇಗೌಡ ರವರು ತಾತ್ಕಾಲಿಕ ತಡೆಯಾಜ್ಞೆಯನ್ನು ತೆರವು ಮಾಡಿಸಿರುತ್ತಾರೆ. ಆದುದರಿಂದ ಸಾರ್ವಜನಿಕರು ಬೋಗಾದಿ ಗ್ರಾಮದ "ಎ" ಮತ್ತು "ಬಿ" ಸಂಬಂಧಪಟ್ಟ ನಿವೇಶನಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಕ್ರಯ, ಭೋಗ್ಯ ಅಥವಾ ಕರಾರು ಹಾಗೂ ಇತರ ವ್ಯವಹಾರಗಳಿಗೆ ಮುಂದಾಗಬಾರದಂತೆ ಕೋರಲಾಗಿದೆ ಹಾಗೂ ಪಂಚಾಯ್ತಿ ಅಧಿಕಾರಿಗೂ ಸಹ ಈ ಸಂಬಂಧ ಕಾನೂನು ಕ್ರಮ ಕೈಗೊಳ್ಳಲು ಹಾಗೂ ಅಕ್ರಮವಾಗಿ ಹಂಚಿಕೆ ಮಾಡಿರುವ ನಿವೇಶನಗಳ ಹಾಗೂ ನಿರ್ಮಾಣ ಮಾಡುತ್ತಿರುವ ವ್ಯಕ್ತಿಗಳನ್ನು ಸದರಿ ಜಾಗದಿಂದ ಖಾಲಿ ಮಾಡಿಸಲು ಕೋರಲಾಗಿದೆ. ಆದ್ದರಿಂದ ಮುಂದುವರೆದು ಯಾರಾದರು ಸಾರ್ವಜನಿಕರು ಅಥವಾ ಅಧಿಕಾರಿಗಳು ಅಕ್ರಮ ವ್ಯವಹಾರಗಳಲ್ಲಿ ಬೋಗಾದಿ ಗ್ರಾಮದ "ಎ" ಮತ್ತು "ಬಿ" ಗೆ ಸಂಬಂಧಿಸಿದಂತೆ ನಿವೇಶನಗಳಿಗೆ ಯಾವುದೇ ವ್ಯವಹಾರ ಮಾಡಲು ಮುಂದಾಗಬಾರದೆಂದು ಸಾರ್ವಜನಿಕರ ಹಿತ ದೃಷ್ಟಿಯಿಂದ ಈ ಪ್ರಕಟಣೆಯನ್ನು ಪ್ರಕಟಿಸಲಾಗಿದೆ. ಮುಂದೆ ಆಗುವ ಪರಿಣಾಮಕ್ಕೆ ಅವರೇ ಜವಾಬ್ದಾರರಾಗಿರುತಾರೆಂದು ಈ ಮೂಲಕ ತಿಳಿಸಲಾಗಿದೆ

ಸಹಿ/– ಎನ್ ಚಂದ್ರಶೇಖರ್, ಬಿ.ಎ.ಎಲ್.ಎಲ್.ಬಿ,
ವಕೀಲರು ಮತ್ತು ನೋಟರಿ, ನಂ. 47/1, ಕೆಳ ಹಂತಸ್ತು, 3ನೇ ಮುಖ್ಯರಸ್ತೆ, 5ನೇ ತಿರುವು, ಶ್ರೀನಿವಾಸ ದೇವಸ್ಥಾನದ ಎದುರು, ಜಯನಗರ, ಮೈಸೂರು–14,
ಮೊ: 7829872368
ಸಹಿ/– ಸಿದ್ದೇಗೌಡ
ಕಕ್ಷಿದಾರರು
ದಿನಾಂಕ: 13–02–2026

ಕರ್ನಾಟಕ ಸರ್ಕಾರ

ತಾಲ್ಲೂಕು ಪಂಚಾಯತಿ ಕಾರ್ಯಾಲಯ, ಆಲೂರು, ತಾಲ್ಲೂಕು, ಹಾಸನ ಜಿಲ್ಲೆ.

ದೂರವಾಣಿ ಸಂಖ್ಯೆ: 08170–218229 ಇ–ಮೇಲ್:alurtp@gmail.com
ಸಂ.ತಾ.ಪಂ.(ಆ)ಲೆಕ್ಕ ಶಾಖೆ/06/2025–26 ದಿನಾಂಕ:11–02–2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

2025–26ನೇ ಸಾಲಿನ ಹಾಸನ ಜಿಲ್ಲೆ ಆಲೂರು ತಾಲ್ಲೂಕು ಪಂಚಾಯಿತಿಯಲ್ಲಿ ಶಿಶು ಅಭಿವೃದ್ಧಿ ಇಲಾಖೆಗೆ ಮೀಸಲಿರಿಸಿರುವ ಅನುದಾನದಲ್ಲಿ ಪರಿಕರಗಳ ಸರಬರಾಜು ಮಾಡಲು ಅಧಿಕೃತ ನೊಂದಾಯಿಸಲ್ಪಟ್ಟ ಏಜೆನ್ಸಿಯಿಂದ ನಿರ್ವಹಿಸಲು ಅಲ್ಪಾವಧಿ ಇ–ಟೆಂಡರ್ ಕರೆಯುವ ಬಗ್ಗೆ. ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ ಸಂ.ತಾ.ಪಂ.(ಆ)ಲೆಕ್ಕ ಶಾಖೆ/06/2025–26 ದಿನಾಂಕ:11–02–2026. ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ : ರೂ. 19.59 ಲಕ್ಷ ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಕೊನೆಯ ದಿನಾಂಕ : ದಿನಾಂಕ: 23/02/2026 E-Procurement ನಂತೆ www.eproc. karnataka. gov.in ಮಧ್ಯಾಹ್ನ 12.00 ಘಂಟೆ ಇ–ಪೋರ್ಟಲ್ ತಾಂತ್ರಿಕ ಬಿಡ್ ತೆರೆಯುವ ವೇಳೆ ದಿನಾಂಕ ಮತ್ತು ಸ್ಥಳ : ದಿನಾಂಕ :24/02/2026 ರಂದು ಬೆಳಿಗ್ಗೆ 11.00 ಘಂಟೆಗೆ ತಾಲ್ಲೂಕು ಪಂಚಾಯಿತಿ ಕಛೇರಿ, ಆಲೂರು ಇ–ಪೋರ್ಟಲ್ ಆರ್ಥಿಕ ಬಿಡ್ ತೆರೆಯುವ ವೇಳೆ ದಿನಾಂಕ ಮತ್ತು ಸ್ಥಳ : ದಿನಾಂಕ :25/02/2026 ರಂದು ಸಂಜೆ. 03.00 ಘಂಟೆಗೆ : ತಾಲ್ಲೂಕು ಪಂಚಾಯಿತಿ ಕಛೇರಿ, ಆಲೂರು ಟೆಂಡರ್‌ನೊಂದಿಗೆ ಪಾವತಿಸಬೇಕಾದ ಮೊತ್ತ ಇ.ಎಂ.ಡಿ : ರೂ. 48,975/– ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ ದೂರವಾಣಿ ಸಂಖ್ಯೆ : www.eproc.karnataka.gov.in ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ ತಾಲ್ಲೂಕು ಪಂಚಾಯಿತಿ, ಆಲೂರು ದೂರವಾಣಿ ಸಂಖ್ಯೆ:9480867105 ಅಲ್ಪಾವಧಿ ಟೆಂಡರ್‌ನಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಹಾಗೂ ಇನ್ನಿತರ ನಿಬಂಧನೆಗಳ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಆಲೂರು.
ವಾಸಾಸಂಇ/ಹಿಸನಿ/ಹಾಸನ/1073/ಕೆಎಸ್‌ಎಂಸಿಎ/2025–26

JSS MAHAVIDYAPEETHA

Jagadguru Dr. Sri Shivarathri Rajendra Circle, Mysuru-570 004.

TENDER NOTICE

JSS Mahavidyapeetha, Mysuru invites sealed **tenders for leasing the Food Court/Hotel at JSS Mysuru Urban Haat, Mysuru** (Area: 324 Sq.mtr) on a monthly rental basis. Eligible applicants are experienced hoteliers/caterers with valid licenses. **Tender forms will be available from 17/02/2026 to 21/02/2026** during office hours at the Project Officer's office. **The last date for submission is 23/02/2026 up to 05:00 PM. Tenders will be opened on 24/02/2026 at 12:00 PM.** The Management reserves the right to accept or reject any or all tenders.

Contact: Project Officer, JSS Mysore Urban Haat, Mysuru, Ph: 9844550845.

Sd/- Executive Secretary

ಕೇಂದ್ರೀಯ ವಿದ್ಯಾಲಯ ಬಿ ಆರ್ ಬಿ ಎನ್ ಎಮ್ ಪಿ ಎಲ್ ಮೈಸೂರು
ನೋಟ್ ಮುದ್ರಣ ನಗರ, ಬಿ ಆರ್ ಬಿ ಎನ್ ಎಮ್ ಪಿ ಎಲ್ ಕ್ಯಾಂಪಸ್, ಮೈಸೂರು - ೫೭೦೦೦೩
केंद्रीय विद्यालय बी आर बी एन एम पी एल , मैसूरु
नोट मुद्रण नगर , बी आर बी एन एम पी एल कैम्पस, मैसूरु – ५७०००३
(शिक्षा मंत्रालय, भारत सरकार के अधीन एक स्वायत्त संस्थान)
KENDRIYA VIDYALAYA BRBNMPL, MYSURU
NOTE MUDRAN NAGAR, BRBNMPL CAMPUS, MYSURU 570003
(Autonomous Organization under the Ministry of Education, Govt. of India)
ई-मेल / Email: kvbrbmys@gmail.com
☏: 0821 – 2971510 वेबसाइट /Website: https://brbnmplmysuru.kvs.ac.in
केवि कोड /KV Code: 2381 सीबीएसई स्कूल नं / CBSE School No: 49204
यूडीआईएसई नं. / UDISE No: 29260805606 सीबीएसई संबद्धता नं / CBSE Affiliation No.: 800154

VACANCY FOR STAFF RECRUITMENT

Kendriya Vidyalaya, BRBNMPL Mysore requires the following category of staff on purely Temporary / Contractual basis for the Academic Session 2026-27.

Date of Walk-in-Interview

SL NO	Post	Date
1	PRT,TGT (Hindi), TGT (Sanskrit), TGT (Social Science), TGT (English)	23 FEBRUARY 2026
2	TGT (Maths), TGT Art education, Special Educator, Work Experience Teacher	24 FEBRUARY 2026

1. Reporting time/Registration of eligible candidates: 09.30 AM to 11 AM.
2. Candidates should bring one passport size photo and photocopy of educational qualifications.
3. For the Details regarding the Eligibility, Remuneration & Conditions of Appointment etc. please visit school website https://brbnmplmysuru.kvs.ac.in/

Sd/- Principal